
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ನನ್ನ ಕನಸಿನ ಕಸಾಪ

• ಜರಗನಹಳ್ಳಿ
• ಮಾಲಿಪಾಟೀಲ

ಏಪ್ರಿಲ್ 18, 2012 ಪುಟ 20 ರೂ. 14/-







ಒಕ್ಕಲಿಗರ ಸಂಘದಲ್ಲಿ ಕಳ್ಳರ ಕೂಟ

ವೆಗಾಜೀಲ್ ಡಬ್ಬಿಂಗ್ ದಂಧೆ

೦ ಕೋಟಿ ವಂಚನೆ



ಾರವಾಡ

ೀಮಾ ಮಸೂತಿ ಸೂಲಾತಿ



ಕೊಪ್ಪಳ: ಢೋಂಗಿ ರೈತ ಮುಖಂಡ

ಸ್ವಾಮಿ ಪರಾರಿ






ಅಂಬೇಡ್ಕರ್ ದಿನದಂದು ಕಾರ್ಪೊರೇಟ್ ಕ್ಯಾನ್ಸರ್ ಹತ್ತಿದ ಪ್ರಜಾತಂತ್ರದ ಕುರಿತು

"ನಮ್ಮಂಥ ದೇಶದಲ್ಲಂತೂ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಆಳವಾಗಿ ಬೇರುಬಿಟ್ಟಿದ್ದು ಅದನ್ನು ಬುಡಮಟ್ಟ ತೊಡೆಯದೆ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿರುವುದಿಲ್ಲ. ಹೀಗಾಗಿ ನಮ್ಮ ದೇಶದಲ್ಲಿ ಸಮಾನತೆಯನ್ನು ಸಾಂವಿಧಾನಿಕವಾಗಿಯೇ ಮೂಲಭೂತ ಹಕ್ಕನ್ನಾಗಿ ಮಾಡಬೇಕು. ದೇಶದ ಎಲ್ಲಾ ಸಂಪತ್ತುಗಳನ್ನು ರಾಷ್ಟ್ರೀಕರಿಸಬೇಕು. ಸಂಪತ್ತು ಒಂದು ಕಡೆ ಕೇಂದ್ರೀಕರಣಗೊಳ್ಳದಂಥ ಆರ್ಥಿಕ ನೀತಿ ಕಡ್ಡಾಯವಾಗಬೇಕು... ಅದಾಗದಿದ್ದರೆ ಈ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಮತ್ತು ಕಂದರಗಳು ಹೆಚ್ಚುತ್ತಲೇ ಹೋಗಿ ಈ ಸಂಸದೀಯ ಪ್ರಜಾತಂತ್ರದ ಅಡಿಪಾಯವೇ ಕುಸಿದುಬೀಳುತ್ತದೆ."

ಚಾರ್ವಾಕ



• ಶಿವಸುಂದರ

ಏಪ್ರಿಲ್ 14ರಂದು ಅಂಬೇಡ್ಕರ್ ದಿನ. ಅಂದರೆ ಈ ದೇಶದ ಸಕಲ ದೀನ ದಲಿತ ಮತ್ತು ದಮನಿತರ ದಿನ. ಅದು ಕೇವಲ ಸಂಭ್ರಮದ ದಿನವಲ್ಲ, ಈ ದೇಶದ ದಮನಿತ ಜನತೆಯ ಬದುಕು ಹಸನು ಆಯಿತೇ? ಆಗುತ್ತಿದೆಯೇ ಎಂದು ಅವಲೋಕನ ಮಾಡಿಕೊಳ್ಳುವ ದಿನ ಕೂಡಾ. ಈ ದೇಶದ ಜನತೆಯ ವಿಮೋಚನೆಯ ಸಲುವಾಗಿ ಅಂಬೇಡ್ಕರ್ ಮುಂದಿಟ್ಟ ಮಾರ್ಗದಲ್ಲಿ ಈ ದೇಶ ನಡೆಯುತ್ತಿದೆಯೇ? ನಡೆಯುತ್ತಿಲ್ಲ ಎಂದರೆ ಏಕೆ ನಡೆಯುತ್ತಿಲ್ಲ ಎಂದು ಆತ್ಮಾವಲೋಕನ ಮಾಡಿಕೊಳ್ಳುವ ದಿನವೂ ಹೌದು. ಹಲವು ಬಾರಿ ನಿಷ್ಠುರ ಅವಲೋಕನಗಳು ಆಗಬಾರದೆಂತಲೇ ಅಂಬೇಡ್ಕರ್‌ರವರನ್ನು ಪ್ರತಿಮೆಗೆ ಇಳಿಸಿ, ಪ್ರತಿಮೆಯ ಸ್ಥಳಾಂತರ ಆಗಬಾರದೆಂಬುದರ ಸುತ್ತ ಎಲ್ಲಾ ಶಕ್ತಿಗಳು ವ್ಯಯವಾಗುತ್ತವೆ. ಆದರೆ ಅಂಬೇಡ್ಕರ್‌ರನ್ನು ಪ್ರತಿಮೆಯಾಗಿ ವಿಧಾನಸೌಧದ ಹೊರಗಡೆ ನಿಲ್ಲಿಸಿ ವಿಧಾನಸೌಧವನ್ನು ಕಾರ್ಪೊರೇಟ್ ಉದ್ಯಮಪತಿಗಳು ಮತ್ತವರ ಪ್ರತಿನಿಧಿಗಳು – ಅದರಲ್ಲಿ ದಲಿತ ಪ್ರತಿನಿಧಿಗಳೂ – ಇದ್ದಾರೆ, ಜೀವಂತವಾಗಿಯೇ ಕಬ್ಜಾ ಮಾಡಿಕೊಂಡಿದ್ದಾರೆ. ಅಂಬೇಡ್ಕರ್ ದಿನದಂದು ಮುಖ್ಯವಾಗಿರಬೇಕಿರುವುದು ಅಂಬೇಡ್ಕರ್ ಪ್ರತಿಮೆಗಿಂತ ಅಂಬೇಡ್ಕರ್ ಮುಂದಿಟ್ಟ ದಲಿತ ವಿಮೋಚನಾ ಕಾರ್ಯಸೂಚಿಯನ್ನು ವಿಧಾನಸೌಧಕ್ಕಿರುವ ಉಳ್ಳವರ ಪಹರೆಯನ್ನು ಬೇಧಿಸಿ ಹೇಗೆ ಒಳಗೆ ಕೊಂಡೊಯ್ಯಬಹುದು ಎಂಬುದು....

ಉದಾಹರಣೆಗೆ ಕೇಂದ್ರದ ಕಾಂಗ್ರೆಸ್ ಮತ್ತು ರಾಜ್ಯದ ಬಿಜೆಪಿ ಸರ್ಕಾರ ತಮ್ಮ ಬಜೆಟ್‌ಗಳನ್ನು ಮಂಡಿಸಿವೆ. ಬಜೆಟ್ಟುಗಳು ಸರ್ಕಾರಗಳ ಆರ್ಥಿಕ ನೀತಿಯ ಕಾರ್ಯಸೂಚಿಯಾಗಿದ್ದು ಅವು ದೀನದಲಿತರನ್ನು ಸುಲಿದು ಕಾರ್ಪೊರೇಟ್ ಶಕ್ತಿಗಳಿಗೆ, ಮಠಾಧಿಪತಿಗಳಿಗೆ ಉಣಬಡಿಸುತ್ತಿವೆ. ಉದಾಹರಣೆಗೆ ಈ ಬಾರಿ ಕರ್ನಾಟಕ ಬಜೆಟ್ಟಿನಲ್ಲಿ ನಾಡಿನ ದಲಿತ, ಅಸಹಾಯಕ ವರ್ಗಗಳಿಗೆ ಕೊಡುತ್ತಿದ್ದ ರಿಯಾಯತಿ ಮತ್ತು ವಿನಾಯತಿಗಳನ್ನು ವಿಶೇಷವಾಗಿ ಕಡಿತಗೊಳಿಸಲಾಗಿದೆ. ಕಳೆದ ವರ್ಷ 1.84 ಕೋಟಿ ಫಲಾನುಭವಿಗಳಿದ್ದರೆ ಈ ವರ್ಷ ಅದರ ಸಂಖ್ಯೆಯನ್ನು 1.81 ಕೋಟಿಗೆ ಇಳಿಸಲಾಗಿದೆ. ಅದರಲ್ಲೂ ರೈತಾಪಿಗೆ ಕೊಡುತ್ತಿದ್ದ ವಿದ್ಯುತ್ ಸಬ್ಸಿಡಿಯ ಮೊತ್ತದಲ್ಲಿ ಆಗಿರುವ 1000 ಕೋಟಿ ಹೆಚ್ಚಳವನ್ನು ಬಿಟ್ಟರೆ ನೇರವಾಗಿ ನಿರ್ಗತಿಕರಿಗೆ ಸಿಗುತ್ತಿದ್ದ ಸಬ್ಸಿಡಿಯ ಪ್ರಮಾಣವನ್ನು ಕಡಿಮೆ ಮಾಡಲಾಗಿದೆ. ಉದಾಹರಣೆಗೆ ಭಾಗ್ಯಲಕ್ಷ್ಮಿ ಯೋಜನೆಗೆ ಕಳೆದ ವರ್ಷಕ್ಕಿಂತ ಈ ವರ್ಷ 150 ಕೋಟಿ ಸಬ್ಸಿಡಿಯನ್ನು ಕಡಿತಗೊಳಿಸಲಾಗಿದೆ. ಹಾಗೆಯೇ ಬಡಜನರಿಗೆ ನೀಡಲಾಗುತ್ತಿದ್ದ ಪಡಿತರ ಸಬ್ಸಿಡಿಯನ್ನು ಕಳೆದ ವರ್ಷಕ್ಕಿಂತ 26 ಕೋಟಿ ಕಡಿತಗೊಳಿಸಲಾಗಿದೆ (926 ಕೋಟಿಯಿಂದ 900 ಕೋಟಿಗೆ). ನಿರ್ಗತಿಕ ವೇತನಗಳಲ್ಲಿ 8 ಲಕ್ಷ ಫಲಾನುಭವಿಗಳ ಕಡಿತವನ್ನೂ, ಬಿಪಿಎಲ್ ಫಲಾನುಭವಿಗಳಲ್ಲಿ 40 ಲಕ್ಷ ಕಡಿತವನ್ನೂ ಘೋಷಿಸಲಾಗಿದೆ. ಆದರೆ ಅದೇ ಸಮಯದಲ್ಲಿ ನಾಡಿನ ಕಾರ್ಪೊರೇಟ್ ಕುಬೇರರಿಗೆ ಒಟ್ಟಾರೆಯಾಗಿ 920 ಕೋಟಿ ರಿಯಾಯತಿ ಅರ್ಥಾತ್ ಸಬ್ಸಿಡಿಯನ್ನು ಘೋಷಿಸಲಾಗಿದೆ. ಕೇಂದ್ರದಲ್ಲೂ ಅಷ್ಟೆ, ರಾಜ್ಯದಲ್ಲೂ ಅಷ್ಟೆ.

ಎಲ್ಲಕ್ಕಿಂತ ಹೆಚ್ಚಾಗಿ ಒಂದು ದೇಶದ ತೆರಿಗೆ ನೀತಿ ಆ ದೇಶದ ಆರ್ಥಿಕ ನೀತಿಗಳಿಗೆ ಅನುಗುಣವಾಗಿಯೇ ಇರುತ್ತದೆ. 1991ರಲ್ಲಿ ನಮ್ಮ ದೇಶ ಜಾಗತೀಕರಣದ ನೀತಿಗಳನ್ನು ಅನುಸರಿಸಲು ಪ್ರಾರಂಭಿಸಿದ ನಂತರ ತೆರಿಗೆ ನೀತಿಯಲ್ಲೂ ಬಹಳ ದೊಡ್ಡ ಮಾರ್ಪಾಡುಗಳು ಬಂದಿವೆ. ಸ್ವಾತಂತ್ರ್ಯಾನಂತರದಲ್ಲಿ ನಾವು ಅನುಸರಿಸುತ್ತಿದ್ದ ತೆರಿಗೆ ನೀತಿಯನ್ನು "ಪ್ರಗತಿಪರ ತೆರಿಗೆ ನೀತಿ"ಯೆಂದು ಕರೆಯಲಾಗುತ್ತಿತ್ತು, ಏಕೆಂದರೆ ಈ ತೆರಿಗೆ ಪದ್ಧತಿಯಲ್ಲಿ ಹೆಚ್ಚು ಆದಾಯ ಇರುವವರಿಗೆ ಹೆಚ್ಚು ತೆರಿಗೆಯನ್ನು, ಕಡಿಮೆ ಆದಾಯ ಇರುವವರಿಗೆ ಕಡಿಮೆ ಆದಾಯವನ್ನು ವಿಧಿಸುತ್ತಿತ್ತು, ಅಷ್ಟು ಮಾತ್ರವಲ್ಲದೆ ಜನಸಾಮಾನ್ಯರು ಬಳಸುತ್ತಿದ್ದ ಹಲವು ಸರಕು ಮತ್ತು ಸೇವೆಗಳ ಮೇಲೆ ಹಾಗೂ ಸಣ್ಣ ಪುಟ್ಟ ವ್ಯವಹಾರಗಳ ಮೇಲೆ ತೆರಿಗೆಯನ್ನು ವಿಧಿಸುತ್ತಿರಲಿಲ್ಲ ಅಥವಾ ಕಡಿಮೆ ವಿಧಿಸಲಾಗುತ್ತಿತ್ತು, ಆದಾಯ ತೆರಿಗೆ ಇನ್ನಿತರ ಶ್ರೀಮಂತರ ಮೇಲಿನ ತೆರಿಗೆಯು ಹೆಚ್ಚಿರುತ್ತಿತ್ತು, ಇದು ಅಂದಿನ ನಮ್ಮ ಕಲ್ಯಾಣ ರಾಜ್ಯ ಪರಿಕಲ್ಪನೆಗೆ ಅಂದರೆ ಶ್ರೀಮಂತರಿಗೆ ತೆರಿಗೆ ವಿಧಿಸಿ ಬಡವರಿಗೆ ಸೌಲಭ್ಯಗಳನ್ನು ಒದಗಿಸುವ ನೀತಿಗೆ ಪೂರಕವಾಗಿತ್ತು,

ಆದರೆ ಇವೆಲ್ಲವೂ 1991ರ ನಂತರ ಮೂಲಭೂತವಾಗಿ ಬದಲಾಗಿದೆ. ಈಗ ನಮ್ಮ ಆರ್ಥಿಕ ನೀತಿ ಪ್ರಧಾನವಾಗಿ ಮಾರುಕಟ್ಟೆ ಶಕ್ತಿಗಳ ಪರವಾಗಿರುವ ಆರ್ಥಿಕ ನೀತಿಯಾಗಿದ್ದು ಶ್ರೀಮಂತರ ಹತ್ತಿರ ಮತ್ತು ಉದ್ದಿಮೆಗಳ ಹತ್ತಿರ ಹಣಕಾಸು ಬಂಡವಾಳ ಇರುವಂತೆ ನೋಡಿಕೊಂಡು ಬಡವರಿಂದ ಶ್ರೀಮಂತರೆಡೆಗೆ ಸಂಪನ್ಮೂಲ ಹರಿಯುವಂತೆ ಮಾಡುವುದೇ ಈ ಆರ್ಥಿಕ ನೀತಿಯ ಸಾರಾಂಶ. ಇದಕ್ಕೆ ತಕ್ಕನಾಗಿಯೇ ತೆರಿಗೆ ನೀತಿಗಳೂ ಬದಲಾಗಿದೆ.

ಈ ಮಾರುಕಟ್ಟೆ ಆರ್ಥಿಕ ನೀತಿಯ ಚೌಕಟ್ಟಿನಲ್ಲಿ ತೆರಿಗೆ ನೀತಿಯ ಪ್ರಧಾನ ಉದ್ದೇಶ ನಮ್ಮ ಒಟ್ಟಾರೆ ದೇಶೀಯ ಉತ್ಪಾದನೆಯಲ್ಲಿ (ಜಿಡಿಪಿ) ತೆರಿಗೆಯ ಪ್ರಮಾಣವನ್ನು ಹೆಚ್ಚಿಸುವುದು. ಹಾಗೆಯೇ ಅದರಲ್ಲಿ ಪ್ರಧಾನವಾಗಿ ಪರೋಕ್ಷ ತೆರಿಗೆಯ ಪ್ರಮಾಣವನ್ನು ಹೆಚ್ಚಿಸುವುದು. ಜೊತೆಗೆ ಸ್ಥಿತಿವಂತರ ಮೇಲೆ ಮತ್ತು ಉದ್ದಿಮೆಗಳ ಮೇಲೆ ಹಾಕುತ್ತಿದ್ದ ಪ್ರತ್ಯಕ್ಷ ತೆರಿಗೆಯ ಭಾರವನ್ನು ಕಡಿಮೆಗೊಳಿಸಿ ಅವರ ಬಳಿ ಹೆಚ್ಚು ಹಣಕಾಸು ಬಂಡವಾಳ ಇರುವಂತೆ ನೋಡಿಕೊಳ್ಳುವುದು. ಹೀಗಾಗಿಯೇ ಒಂದೆಡೆ ಉದ್ದಿಮೆಗಳ ಪರವಾದ ಮತ್ತು ಅವರಿಗೆ ಎಲ್ಲ ರೀತಿಯ ತೆರಿಗೆ ರಿಯಾಯತಿಗಳನ್ನು ಒದಗಿಸುವ ಎಸ್‌ಇಜೆಡ್ ನೀತಿಗಳು ಜಾರಿಗೆ ಬರತೊಡಗಿದರೆ ಮತ್ತೊಂದೆಡೆ ಸಾಮಾನ್ಯ ಜನರ ಮೇಲೆ ಹೆಚ್ಚೆಚ್ಚು ತೆರಿಗೆ ಭಾರ ಹೊರಿಸುವಂತ ವ್ಯಾಟ್ (VAT) ಮತ್ತು GSTಯಂಥ ತೆರಿಗೆ ನೀತಿಗಳು ಜಾರಿಗೆ ಬರಲಾರಂಭಿಸಿದವು.

ಈ ವ್ಯಾಟ್ ತೆರಿಗೆ ಪದ್ಧತಿ ಪರೋಕ್ಷ ತೆರಿಗೆಯ ವಿಸ್ತಾರವನ್ನು ಹೆಚ್ಚಿಸಿದರೆ ಇದೇ ಆಗಸ್ಟ್‌ನಿಂದ ಜಾರಿಗೆ ಬರಲಿರುವ GST ತೆರಿಗೆ ಪದ್ಧತಿ ಬೀದಿಯಲ್ಲಿ ಕಳ್ಳೆಕಾಯಿ ಮಾರುವವರನ್ನು ಸಹ ತೆರಿಗೆಯಡಿ ತರುತ್ತದೆ ಹಾಗೂ ಈವರೆಗೆ ಜನಸಾಮಾನ್ಯರು ಆಧಾರ ಪಟ್ಟಿದ್ದ ಯಾವ ವ್ಯವಹಾರಗಳಿಗೆ ರಿಯಾಯತಿ ಮತ್ತು ವಿನಾಯತಿ ಇರುತ್ತಿತ್ತೋ ಅವೆಲ್ಲವನ್ನೂ ಅಧಿಕಾಂಶದ ತೆರಿಗೆ ಪದ್ಧತಿಯಡಿ ತರುತ್ತದೆ. ಹಾಗೂ ಅದೇ ಸಮಯದಲ್ಲಿ ಎಸ್‌ಇಜೆಡ್, ಬಂಡವಾಳ ಹೂಡಿಕೆ ಪ್ರೋತ್ಸಾಹ ಇನ್ನಿತರ ಹೆಸರಿನಲ್ಲಿ ಉಳ್ಳವರಿಗೆ ಎಲ್ಲಾ ಬಗೆಯ ರಿಯಾಯತಿಗಳನ್ನು ನೀಡುತ್ತಾ ಹೋಗುತ್ತಿದೆ. ಇದು 1991ರ ನಂತರ ನಮ್ಮ ಸರ್ಕಾರಗಳು ಅನುಸರಿಸುತ್ತಿರುವ ತೆರಿಗೆ ನೀತಿಗಳ ಜನವಿರೋಧಿ, ಸಂವಿಧಾನ ವಿರೋಧಿ ಸ್ವರೂಪ.

ಈಗ ಇಂಥಾ ಜನವಿರೋಧಿ ತೆರಿಗೆ ನೀತಿಯನ್ನೇ ಯುಪಿಎ ಸರ್ಕಾರ ಅತ್ಯಂತ ಕಾರ್ಯಕ್ಷಮತೆಯಿಂದ ಜಾರಿಗೆ ತರುತ್ತಿದ್ದರೆ ಅದನ್ನು ಮೆಚ್ಚಿಕೊಳ್ಳಬೇಕೆ? 2005ರಲ್ಲಿ ಪರೋಕ್ಷ ತೆರಿಗೆ ಸಂಗ್ರಹ ಕೇವಲ 80,000 ಕೋಟಿಗಳಷ್ಟಿತ್ತು, 2006ರಲ್ಲಿ ಅದು 1 ಲಕ್ಷ ಕೋಟಿ ರೂಪಾಯಿಗಳಷ್ಟಾಯಿತು. ಅದು 2009ರಲ್ಲಿ 1.35 ಲಕ್ಷಕ್ಕೆ ಮುಟ್ಟಿ ಈಗ 2010-11ರಲ್ಲಿ 3.15 ಲಕ್ಷ ಕೋಟಿ ರೂಪಾಯಿಗಳನ್ನು ತಾಕುತ್ತಿದೆ. ಅದೇ ಸಮಯದಲ್ಲಿ 20 ಕಾರ್ಪೊರೇಟ್ ಉದ್ಯಮಪತಿಗಳಿಗೆ 5.5 ಲಕ್ಷ ಕೋಟಿ ರಿಯಾಯತಿಯನ್ನು ಅರ್ಥಾತ್ ಸಬ್ಸಿಡಿಯನ್ನು ಘೋಷಿಸುತ್ತಾ ಬರಲಾಗಿದೆ.

ಆದರೆ ಅದೇ ಸಮಯದಲ್ಲಿ ದಲಿತ ಶಕ್ತಿಯ ಕಣ್ಣೊರೆಸಲು ಕೆಲವು ವಿಶೇಷ ದಲಿತ ಪರ ಯೋಜನೆಗಳನ್ನು ಪ್ರಕಟಿಸುತ್ತಾ ಬರಲಾಗಿದೆ. ಈವರೆಗೆ ದಮನಿತರಾದ ಜನತೆಯಲ್ಲಿ ಜಾಗೃತಿ ಬರತೊಡಗಿದಂತೆ ದೇಶದ ಸಂಪನ್ಮೂಲದಲ್ಲಿ ತಮ್ಮ ಪಾಲು ಕೇಳುವ ಮತ್ತು ಅದಕ್ಕಾಗಿ ಹೋರಾಡುವ ಪ್ರಕ್ರಿಯೆಗಳೂ ಪ್ರಾರಂಭವಾಗಿವೆ. ಅದರ ಪರಿಣಾಮ ಈ ಯೋಜನೆಗಳು. ಇದೊಂದು ಪ್ರಜಾತಾಂತ್ರಿಕ ಪ್ರಕ್ರಿಯೆಯೇ ಆಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಆದರೆ ಸಂಪನ್ಮೂಲದ ಹಂಚಿಕೆ ಹೇಗೆ ಆಗಬೇಕು ಎನ್ನುವ ತೀರ್ಮಾನವನ್ನು ಮಾಡುವ ಅಧಿಕಾರ ಈ ದೇಶದ ಜನತೆಗೆ ಮತ್ತು ಅವರಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಉಳಿದಿದೆಯೇ ಎಂಬುದೇ ಇಂದಿನ ಪ್ರಶ್ನೆ. ಹೀಗಿದ್ದರೂ ಸಂಪನ್ಮೂಲದ ವಿತರಣೆಯಲ್ಲಿ ಪ್ರಭುತ್ವಗಳು ಪಾಲಿಸಬೇಕಾದ ಸಾಮಾಜಿಕ ನ್ಯಾಯದ ಬಗ್ಗೆ ಈಗ ಎದ್ದಿರುವ "ಜೆಂಡರ್ ಬಜೆಟ್", "ದಲಿತ ಬಜೆಟ್" ಕೂಗುಗಳೂ ಅಷ್ಟರಮಟ್ಟಿಗೆ ದೇಶದ ರಾಜಕಾರಣದಲ್ಲಿ ಸಕಾರಾತ್ಮಕ ಅಜೆಂಡಾವನ್ನೇ ಪ್ರಸ್ತಾಪಿಸುತ್ತವೆ.

ಬಜೆಟ್‌ಗಳು ನಿರ್ದಿಷ್ಟ ಆರ್ಥಿಕ ನೀತಿಯ ಚೌಕಟ್ಟಿನ ಸಂಪನ್ಮೂಲ ವಿತರಣೆಯ ದಿಕ್ಕನ್ನು ಸೂಚಿಸುವ ವಿಶಾ[...] ಕಾರ್ಯಸೂಚಿಯಾಗಿರುತ್ತವೆ. ಸಾಮಾನ್ಯವಾಗಿ ಬಜೆಟ್ಟಿನ[...] ಕ್ಷೇತ್ರವಾರು ಮತ್ತು ರಾಜ್ಯವಾರು ಸಂಪನ್ಮೂಲ ಹಂಚಿಕೆಗ[...] ನಡೆಯುತ್ತವೆ. ಆದರೆ ಒಂದು ಸಮಾಜ ಜಾತಿ, ವರ್ಗ, ಲಿಂಗ, ಧರ್ಮ ಮತ್ತು ಪ್ರದೇಶಗಳ ಆಧಾರದ[...] ಶತಶತಮಾನಗಳಿಂದ ವಂಚನೆಗೆ ಗುರಿಯಾಗಿದ್ದ[...] ಆ ಬಗೆಯ ಸಾಮಾಜಿಕ ತಾರತಮ್ಯ ನೀತಿಗಳು ಇನ್ನೂ ಮುಂದುವರೆಯುತ್ತಿರುವಾಗ ಕೇವಲ ಕ್ಷೇತ್ರವಾರು ಹಂಚಿ[...]ಗಳು ಆದ ಮಾತ್ರಕ್ಕೆ ಈ ಶೋಷಿತ ವರ್ಗಗಳಿಗೆ ಸಂಪನ್ಮೂ[...]ಗಳು ದಕ್ಕುವುದಿಲ್ಲ, ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಬಜೆಟ್ ಕೊ[...] ಮಾತ್ರಕ್ಕೆ ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶ[...] ನೀರು ಹರಿಯುವ ಭರವಸೆ ಇಟ್ಟುಕೊಳ್ಳಲು ಆಗುವುದಿ[...] ಅದಕ್ಕೆ ನಂಜುಂಡಪ್ಪ ವರದಿಯಂತೆ ಹಿಂದುಳಿದ ಪ್ರದೇಶಗ[...] ಅಭಿವೃದ್ಧಿ ಎಂಬ ಫೋಕಸ್ ಇರುವ ಯೋಜನೆಯ[...] ಸಂಪನ್ಮೂಲ ವಿತರಣೆಯಾಗಬೇಕಾಗುತ್ತದೆ. ಅದೇರೀ[...] ಆರೋಗ್ಯದ ಬಾಬತ್ತಿಗೆ ಬಜೆಟ್ ಹೆಚ್ಚಿಸಿದ ಮಾತ್ರ[...] ಮಹಿಳೆಯರ ಆರೋಗ್ಯ ಸುಧಾರಿಸುತ್ತದೆ ಎಂದು ಹೇಳಲ[...] ಬರುವುದಿಲ್ಲ. ಹೀಗಾಗಿ ಮಹಿಳೆಯರ ಅಭಿವೃದ್ಧಿಯ ಬ[...] ವಿಶೇಷ ಫೋಕಸ್ ಇರುವ ಯೋಜನೆಗಳು–ಜೆಂಡರ್ ಬಜೆಟ್–ಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಈ ದೇಶದ ಜಾತಿಗ್ರಸ್ತ ಸಮಾಜದ[...] ಶತಮಾನಗಳಿಂದ ಮತ್ತು ಈಗಲೂ ನಿರಂತರ ತಾರತಮ್ಯ[...] ಮತ್ತು ದಮನಕ್ಕೆ ಗುರಿಯಾಗಿರುವ ದಲಿತ ಸಮುದಾಯ[...] ಅಭಿವೃದ್ಧಿ ಜನರಲ್ ಬಜೆಟ್ಟಿನಿಂದ ಮಾತ್ರ ಸಾಧ್ಯವಾಗುವ[...]ದಿಲ್ಲ. ದಲಿತರ ಅಭಿವೃದ್ಧಿಯನ್ನೇ ಏಕಮಾತ್ರ ಲ[...]ವಾಗಿರಿಸಿಕೊಂಡ "ದಲಿತ ಬಜೆಟ್" ಬೇಕಾಗುತ್ತದೆ. ಹೀಗಾ[...] ಸಕಾರಣವಾಗಿಯೇ ರಾಜ್ಯದ ಮತ್ತು ದೇಶದ ಎಲ್ಲಾ ದಲಿ[...] ಸಂಘಟನೆಗಳು ದಲಿತ ಬಜೆಟ್‌ಗಾಗಿ ಆಗ್ರಹಿಸುತ್ತಿವೆ.

ವಾಸ್ತವವಾಗಿ ದೇಶದ ದಲಿತ ಸಮುದಾಯ[...] ಜಾಗೃತಗೊಂಡ ಪರಿಣಾಮವಾಗಿ 1980ರಲ್ಲಿ ಪ್ರಾರಂಭವಾ[...] ಆರನೇ ಪಂಚವಾರ್ಷಿಕ ಯೋಜನೆಯಿಂದಲೆ[...] ಬಜೆಟ್ಟಿನೊಳಗಡೆ ಪ್ರತಿ ಇಲಾಖೆಯೂ ಒಂದ[...] Scheduled Caste Sub Plan- SCSP ಮತ್ತು Scheduled Tribe Plan- STP ಗಳನ್ನು ಯೋಜಿಸಬೇಕೆಂದು ಯೋಜನಾ ಆಯೋಗ ತಾಕೀತು ಮಾಡಿದೆ. ಈ ಯೋಜನೆಯ ಪ್ರಕಾರ ದಲಿತ ಮತ್ತು ಆದಿವಾಸಿಗಳ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ SCSP ಗೆ ಬಜೆಟ್ಟಿನ ಶೇ.16.5 ಹಣವನ್ನೂ ಹಾಗೂ STP ಗೆ ಶೇ. 7.5ರಷ್ಟು ಹಣವನ್ನು ಎತ್ತಿಡಬೇಕೆಂಬುದು ಕಡ್ಡಾಯ. ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಜೆಟನ್ನು ಮಂಡಿಸುವ ಮುನ್ನ ಯೋಜನಾ ಆಯೋಗವು ಈ ಪ್ರಮಾಣದ ಹಣವನ್ನು ಮೀಸಲಿಟ್ಟಿರುವುದನ್ನು ಖಾತರಿ ಮಾಡಿಕೊಂಡ ನಂತರವೇ ಬಜೆಟ್ ಮಂಡನೆ ಆಗಬೇಕು[...]

ಇಷ್ಟೆಲ್ಲಾ ಇದ್ದರೂ 1980ರಿಂದ 2009ರವರೆ[...] ಕೇಂದ್ರದ ಬಜೆಟ್ಟಿನಲ್ಲಾಗಲೀ, ರಾಜ್ಯದ ಬಜೆಟ್ಟಿನಲ್ಲಾಗಲಿ ಯಾವ ವರ್ಷವೂ ಶೇ.16ರಷ್ಟು ಹಣವಿರಲಿ ಶೇ.5ರಷ್ಟು ಹಣವನ್ನು ಈ SCSP ಗೆ ಎತ್ತಿಟ್ಟಿಲ್ಲ. 2008-2009ನೇ ಸಾಲಿನ ಕೇಂದ್ರ ಬಜೆಟ್ 7 ಲಕ್ಷ ಕೋಟಿ ಗಾತ್ರದ್ದು. ಆದರೆ ಅದರಲ್ಲಿ SCSP ಗೆ ಕೊಡಬೇಕಿದ್ದ 40,00[...] ಕೋಟಿ ರೂ. ಆದರೆ ನೀಡಿದ ಹಣ ಕೇವಲ 10,00[...] ಕೋಟಿ ರೂ. ಮಾತ್ರ. ಇದೊಂದು ಬಗೆಯಾದರೆ ಬಿಜೆ[...] ಸರ್ಕಾರದಲ್ಲಿ 2008–09ರ ಸಾಲಿನಲ್ಲಿ ಕರ್ನಾಟಕದಲ್ಲಿ ನೀಡಿದಷ್ಟು ಹಣವನ್ನೂ ಸಹ ಯಾ[...] ಇಲಾಖೆಗಳು ವೆಚ್ಚ ಮಾಡಿಲ್ಲ, ಉದಾಹರಣೆಗೆ ಸಮಾಜ ಕಲ್ಯಾಣ ಇಲಾಖೆ[...] ಈ ಬಾಬತ್ತಿನಲ್ಲಿ 275 ಕೋಟಿ ನೀಡಿದ್ದ[...] ವೆಚ್ಚ ಮಾಡಿದ್ದು ಕೇವಲ 154 ಕೋಟಿ ಮಾತ್ರ. ವಸತಿ ಕ್ಷೇತ್ರಕ್ಕೆ 239 ಕೋಟಿ ರೂ. ನೀಡಿದ್ದರೆ ವೆಚ್ಚವಾದದ್ದು ಕೇವಲ 198 ಕೋಟಿ ಮಾತ್ರ. ವಾಣಿಜ್ಯ ಮತ್ತು ಕೈಗಾರಿಕೆ ಕ್ಷೇತ್ರಕ್ಕೆ 57 ಕೋಟಿ ರೂ. ನೀಡಿದ್ದರೆ ವೆಚ್ಚವಾದದ್ದು ಕೇವಲ 46 ಲ[...] ರೂ. ಮಾತ್ರ. ಅಂದರೆ ಒದಗಿಸಲಾದ ಹಣದ ಶೇ.0.81ರಷ್ಟು ಮಾತ್ರ. ಅದೇರೀ[...] ಇಂಜಿನಿಯರಿಂಗ್, ಮೆಡಿಕಲ್ ಇನ್ನಿತರ ಉನ್ನತ ಶಿಕ್ಷಣದ ಬಾಬತ್ತಿಗೆ 44 ಕೋಟಿ ರೂ.ಗಳನ್ನು ನೀಡಲಾಗಿದ್ದರೆ ಅದರ[...] ಒಂದು ರೂಪಾಯಿಯನ್ನು ಬಳಸಿಲ್ಲ.

ಮೊದಲನೆಯದಾಗಿ ನಿಡಲಾಗಿರುವ ಹಣದಲ್ಲಿ ಶೇ.70-90 ಖೋತಾ. ಅದರಲ್ಲಿ ಶೇ.50-90ರಷ್ಟು ಬಳಸುವುದೇ ಇಲ್ಲ, ಯೋಜನಾ ಆಯೋಗದ ನಿರ್ದೇಶನದ ಪ್ರಕಾರ ಈ ಬಾಬತ್ತಿಗೆ ನೀಡಲಾದ ಹಣವನ್ನು ವಾಪಸ್ ಮಾಡುವಂತಿಲ್ಲ, ಅದನ್ನು ಮುಂದಿನ ಸಾಲಿಗೆ ಬಳಸಬೇಕು. ಆದರೆ ಈ ಹಣವೆಲ್ಲಾ ವಾಪಸ್ ಸರ್ಕಾರದ ತಿಜೋರಿ ಸೇರಿ ನಂತರ ಕಾರ್ಪೊರೇಟ್ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯಗಳನ್ನು, ವಿಮಾನ ನಿಲ್ದಾಣವನ್ನೂ ಕಲ್ಪಿಸಲು ವ್ಯಯವಾಗುತ್ತದೆ.

▶6

ೊಳುವಾರರ 'ಸ್ವಾತಂತ್ರ್ಯದ ಓಟ' ಕೈಲಿಡಿದು....!

ಕಂಡಹಾಗೆ




• ಗೌರಿ ಲಂಕೇಶ್

2009ರಲ್ಲಿ ನೆರೆ ಸಂಭವಿಸಿ ಉತ್ತರ ಟಕದ ಹಲವಾರು ಜಿಲ್ಲೆಗಳಲ್ಲಿ ಸುಮಾರು ಂತಲೂ ಹೆಚ್ಚು ಜನ ತಮ್ಮ ಪ್ರಾಣವನ್ನೇ ಕೊಂಡಾಗ, ಸಾವಿರಾರು ಜಾನುವಾರುಗಳು ಹೋದಾಗ, ಲಕ್ಷಾಂತರ ಜನರು ತಮ್ಮ ಸಾಮಾನುಗಳನ್ನು ಕಳೆದುಕೊಂಡು ಾಗಿದ್ದಾಗ ಆಗಿನ ಮುಖ್ಯಮಂತ್ರಿ ಯೂರಪ್ಪ ಮೈಸೂರಿನ ಸುತ್ತೂರು ಮಠದಲ್ಲಿ ತಕ ನರೇಂದ್ರ ಮೋದಿಯ ಪ್ರವಚನ ತ್ತಿದ್ದರು; ಶೋಭಾ ಕರಂದ್ಲಾಜೆ ಸೇರಿದಂತೆ ಚೇಲಾ ಶಾಸಕರ ಜೊತೆ ಯೋಗಾಭ್ಯಾಸದಲ್ಲಿ ರಾಗಿದ್ದರು.

ೋಗಲಿ, ಪರಿಸ್ಥಿತಿಯ ಆರಂಭದಲ್ಲಿ ಅವರಿಗೆ ಗಲಿಲ್ಲ, ಅರಿವಾದನಂತರ ತಮ್ಮ ಬ್ದಾರಿಯನ್ನರಿತು ಕೆಲಸ ುತ್ತಾರೆಂದು ಜನ ಿದ್ದರೆ ಅದನ್ನೂ ಯಡ್ಡಿ ಗಿಸಿದ್ದರು. ಅದೇ ಹೊತ್ತಿಗೆ ಿಯ ರೆಡ್ಡಿ ಗ್ಯಾಂಗ್ ಯಡ್ಡಿ ್ಧ ಸೆಡ್ಡು ಹೊಡೆದಿದ್ದರಿಂದ ದೆಹಲಿಗೆ ಹೋಗಿ ತಮ್ಮ ಯನ್ನು ಭದ್ರ ಕೊಳ್ಳುವ ಕಸರತ್ತಿನಲ್ಲೇ ಹೋಗಿದ್ದರು.

ಗ ಅವರು ಕಣ್ಣೀರಿಟ್ಟಿದ್ದು ಾವಳಿಗೆ ಬಲಿಯಾದ ದ ಸಾಮಾನ್ಯ ಜನರ ಪರಿಸ್ಥಿತಿಯನ್ನು ಕಂಡಲ್ಲ. ಾಗಿ ರೆಡ್ಡಿಗಳ ಆಣತಿಯಂತೆ ತಮ್ಮ ಆಪ್ತೆ ಾಳನ್ನು ಸಚಿವ ಸಂಪುಟದಿಂದ ತುವಂತಾಯಿತಲ್ಲ ಎಂದು....

ಂತಹ ಯಡಿಯೂರಪ್ಪನಿಗೆ ಇವತ್ತು ದ್ದಂತೆ ಬರಪೀಡಿತರಾದ ರೈತರ ಬಗ್ಗೆ ಕಾಳಜಿ ್ಕೊಂಡಿದೆ. ತನಗೆ ಮುಖ್ಯಮಂತ್ರಿ ಸ್ಥಾನವನ್ನು ಕೊಡದಿರುವ ಸದಾನಂದ ಗೌಡರ ಸರ್ಕಾರ ೀಡಿತ ಪ್ರದೇಶಗಳಲ್ಲಿ ಯಾಕೆ ನೆರವಿಗೆ ಬರುತ್ತಿಲ್ಲ ಎಂದು ಮಾಡಲು ಆ ಶಗಳಿಗೆ ಪ್ರವಾಸ ಗುವುದಾಗಿ ಯಡಿಯೂರಪ್ಪ ದ್ದಾರೆ. ಓರ್ವ ಮಾಜಿ ್ಯಮಂತ್ರಿ ತನ್ನದೇ ಪಕ್ಷ ಾರದಲ್ಲಿರುವಾಗ ಆ ರದ ವೈಫಲ್ಯತೆಯನ್ನು ರುವ ಕಾರ್ಯದಲ್ಲಿ ಗಿರುವುದು ಎಂತಹ ಪಕ್ಷ ಹವಾಗುತ್ತದೆ ಎಂದು ಾದರೂ ಹಿರಿಯ ಚಿಡ್ಡಿ ್ಧಯ ಕಿವಿ ಹಿಂಡಬೇಕಿದೆ. ಅಧಿಕಾರದಾಹದಲ್ಲಿ ಮಾನ ರ್ಯಾದೆ ಎಲ್ಲವನ್ನೂ ದಿರುವ ಚಡ್ಡಿಗಳಿಗೆ ಅಂತಹ ಬುದ್ಧಿಯಾಗಲಿ, ್ಧಿಯನ್ನು ತರಾಟೆಗೆ ತೆಗೆದುಕೊಳ್ಳುವ ರ್ಯವಾಗಲಿ ಇದ್ದಂತಿಲ್ಲ ಬಿಡಿ.





ಯಡಿಯೂರಪ್ಪ ಇವತ್ತು ಬರಪೀಡಿತ ಪ್ರದೇಶಗಳಿಗೆ ಹೋಗುವ ಮುನ್ನ ಒಂದೆರಡು ಕೆಲಸಗಳನ್ನು ಮಾಡಬೇಕಿದೆ. ಅವತ್ತು ನೆರೆ ಹಾವಳಿ ಹೆಸರಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಿದ ಕೋಟ್ಯಾಂತರ ರೂಪಾಯಿಗಳು ಏನಾದವು, ಎಲ್ಲೆಲ್ಲಿ ಎಷ್ಟೆಷ್ಟು ಖರ್ಚಾಯಿತು ಎಂಬುದರ ಬಗ್ಗೆ ಯಡಿಯೂರಪ್ಪ ಲೆಕ್ಕವನ್ನು ರಾಜ್ಯದ ಜನರ ಮುಂದಿಡಬೇಕಿದೆ. ಹಾಗೆಯೇ ಮೂರು ವರ್ಷಗಳ ಹಿಂದೆ ನೆರೆಗೆ ತಮ್ಮ ತಲೆಯ ಮೇಲಿನ ಸೂರನ್ನು ಕಳೆದುಕೊಂಡು ಇವತ್ತೂ ನಿರಾಶ್ರಿತರಾಗಿಯೇ ಬದುಕುತ್ತಿರುವ ಜನರಿರುವ ಪ್ರದೇಶಗಳಿಗೆ ಭೇಟಿ ಕೊಟ್ಟು ಅವರ ಕ್ಷಮೆ ಯಾಚಿಸಬೇಕಿದೆ. ಆದರೆ ಯಾವುದೇ ನೈತಿಕತೆ ಇಲ್ಲದ ಯಡ್ಡಿಯಿಂದ ಅದು ಸಾಧ್ಯವೇ?

* * * *

ಬೊಳುವಾರು ಅವರು ಒಂದು ದೊಡ್ಡ ಕಾದಂಬರಿಯನ್ನು ಬರೆಯುತ್ತಿದ್ದಾರಂತೆ ಎಂಬ ಮಾತನ್ನು ನಾನು ಕಳೆದ ವರ್ಷವೇ ಕೇಳಿದ್ದೆ. ಅವರು ಬರೆದಿರುವ 'ಒಂದು ತುಂಡು ಗೋಡೆ' ಎಂಬ ಕಿರುಗತೆಯನ್ನು ಅಪಾರವಾಗಿ ಮೆಚ್ಚಿರುವ ನನ್ನಲ್ಲಿ ಅವರು ಬರೆಯುತ್ತಿದ್ದ ಹೊಸ ಕಾದಂಬರಿಯ ಬಗ್ಗೆ ಸಹಜವಾಗಿಯೇ ಕುತೂಹಲವಿತ್ತು. 'ಸ್ವಾತಂತ್ರ್ಯದ ಓಟ' ಬಿಡುಗಡೆ ಆಗುವ ಮುನ್ನವೇ ನಮ್ಮ 'ಲಂಕೇಶ್ 77' ಕಾರ್ಯಕ್ರಮದಲ್ಲಿ ಅದನ್ನು ಕುರಿತು ಬಿ.ಎಂ.ಬಷೀರ್ ಮೆಚ್ಚುಗೆಯ ಮಾತುಗಳನ್ನಾಡಿ "ನಮ್ಮ ಕರಾವಳಿ ಕರ್ನಾಟಕವು ಇವತ್ತು ಬೊಳುವಾರು ಅವರ 'ಮುತ್ತುಪ್ಪಾಡಿ' ತರಹ ಆಗಬೇಕು" ಎಂದಾಗ ಬೊಳುವಾರು ಅವರ ಕಾಲ್ಪನಿಕ 'ಮುತ್ತುಪ್ಪಾಡಿ' ಎಂಬ ಈ ಊರು ಹೇಗಿರಬಹುದು, ಅದರಲ್ಲಿರುವ ಜನರು ಎಂತಹವರು, ಅವರ ಧಾರ್ಮಿಕ-ಸಾಮಾಜಿಕ-ರಾಜಕೀಯ ಬದುಕು ಎಂತಹದ್ದಾಗಿರ ಬಹುದು ಎಂದು ಊಹಿಸಲು ಪ್ರಯತ್ನಿಸಿದ್ದೆ.

'ಸ್ವಾತಂತ್ರ್ಯದ ಓಟ' ಕಾದಂಬರಿ ಕಳೆದ ಮಾರ್ಚ್ 18 ರಂದು ಬಿಡುಗಡೆಯಾಗಿ ಬೊಳುವಾರು ಅವರು ಒಂದು ಪ್ರತಿಯನ್ನು ನಮ್ಮ ಶಿವಸುಂದರ್ ಅವರ ಮೂಲಕ ನನಗೆ ಮಾರ್ಚ್ 26ರಂದು ಕಳುಹಿಸಿದರು. ಅಷ್ಟು ಹೊತ್ತಿಗಾಗಲೇ ಈ ಕಾದಂಬರಿಯನ್ನು ಕೆಲವೇ ದಿನಗಳಲ್ಲಿ ಓದಿ ಮುಗಿಸಿದ್ದ ಶಿವಸುಂದರ್ "ತುಂಬಾ ಚೆನ್ನಾಗಿದೆ, ನೀವು ಇದನ್ನು ಓದಲೇ ಬೇಕು" ಎಂದರು.

ಬೊಳುವಾರು ನನಗೆ ಕಳುಹಿಸಿದ್ದ ಪ್ರತಿಯಲ್ಲಿ:

'ಪ್ರೀತಿಯಿಂದ ಗೌರಿ - ಅವರಿಗೆ
ನಿಮ್ಮ
ಸ್ವಾತಂತ್ರ್ಯದ ಓಟ
ನಿರಂತರವಾಗಿರಲಿ
- ಬೊಳುವಾರು'

ಎಂದು ಬರೆದಿದ್ದರು.

ಈ ಕಾದಂಬರಿಯ ಮುಖಪುಟ 'ಕುರ್‌ಆನ್' ಮುಖಪುಟವನ್ನು ಹೋಲುವಂತಿದೆ. ಮುಖಪುಟದ ಮಧ್ಯೆ ಅರೇಬಿಕ್ ಲಿಪಿ ತರಹ ಕಾಣುವಂತೆ ಕಾದಂಬರಿಯ ಹೆಸರನ್ನು ಅಚ್ಚು ಮಾಡಲಾಗಿದೆ. ಹಾಗೆಯೇ ಅಂಚಿನಲ್ಲಿ ಕನ್ನಡ, ಸಂಸ್ಕೃತ ಮತ್ತು ಅರೇಬಿಕ್ ಭಾಷೆಗಳಲ್ಲಿ 'ಸ್ವಾತಂತ್ರ್ಯದ ಓಟ' ಎಂದು ಚಿಕ್ಕಚಿಕ್ಕ ಅಕ್ಷರಗಳಲ್ಲಿ ಮುದ್ರಿಸಲಾಗಿದೆ.


ಪುಸ್ತಕವನ್ನು ನೋಡುತ್ತಿದ್ದಂತೆ ಇದು ಹಲವಾರು ರೀತಿಯಲ್ಲಿ ಒಂದು 'ಬೃಹತ್' ಕಾದಂಬರಿಯೇ ಸೈ ಅನ್ನಿಸಿತು. ಮೊದಲನೆಯದಾಗಿ ಅದರಲ್ಲಿರುವುದು ಒಟ್ಟು 1,120 ಪುಟಗಳು. ಕತೆ ನಡೆಯುವುದು 1947ರಿಂದ 1997ರ ತನಕ. ಅಂದರ ಸ್ವತಂತ್ರ ಭಾರತದ ಮೊದಲ ಐವತ್ತು ವರ್ಷ. ಮಹಾತ್ಮ ಗಾಂಧಿಯಲ್ಲದೆ ಎಲ್.ಕೆ.ಅಡ್ವಾಣಿ ಕೂಡ ಇದರಲ್ಲಿ ಬಂದುಹೋಗುತ್ತಾರೆ. ನಮ್ಮ ದೇಶದ ಹಲವಾರು ರಾಜಕೀಯ ಮತ್ತು ಸಾಮಾಜಿಕ ಆಗುಹೋಗುಗಳನ್ನು ಒಳಗೊಂಡು ಸಾಗುವ ಈ ಕಾದಂಬರಿಯಲ್ಲಿ ಕತೆಯಲ್ಲಿ ಬರುವ ಪಾತ್ರಗಳ ಸಂಖ್ಯೆಯಂತೂ ನೂರಾರು.

ಕಳೆದ ವಾರದ ಪತ್ರಿಕೆಯ ಕೆಲಸಗಳನ್ನು ಮುಗಿಸಿದ ನಂತರ ಶುಕ್ರವಾರದ ಬೆಳಗ್ಗೆಯೇ ಈ ಕಾದಂಬರಿಯನ್ನು ಓದಲಾರಂಭಿಸಿದೆ. ಸಮಯ ಉರುಳಿದ್ದು, ಪುಟಗಳು ತೆರೆಯುತ್ತಾ ಹೋದದ್ದು, ಕಾದಂಬರಿಯಲ್ಲಿರುವ ಪಾತ್ರಗಳು ಹತ್ತಿರವಾಗುತ್ತಾ ನಾನು ಅವುಗಳ ಜೊತೆ ಸಾಗಿದ್ದು... ಒಂದಿಷ್ಟೂ ಗೊತ್ತಾಗದೆ ನೂರು ಪುಟಗಳನ್ನು ದಾಟಿದ್ದೆ. ಮಾರನೆಯ ದಿನ ಮತ್ತು ಭಾನುವಾರ ಕೂಡ 'ಸ್ವಾತಂತ್ರ್ಯದ ಓಟ'ದೊಂದಿಗಿನ ನನ್ನ ಪಯಣ ಮುಂದುವರೆಯಿತು. ಸೋಮವಾರವೂ ಇದನ್ನು ಓದುತ್ತಲೇ ಕೂರಬೇಕೆನಿಸಿದ್ದರೂ ನನ್ನ ಜವಾಬ್ದಾರಿಗಳು ನಾನು ಆಫೀಸಿಗೆ ಬರುವಂತೆ ಮಾಡಿದವು. ಆದರೂ ಸಮಯ ಸಿಕ್ಕಾಗಲೆಲ್ಲ ಅದನ್ನು ಓದುತ್ತಲೇ ಇದ್ದೇನೆ. ಈಗ 600 ಪುಟಗಳನ್ನು ದಾಟಿದ್ದೇನೆ. ಇನ್ನು 486 ಪುಟಗಳು ಬಾಕಿ ಇವೆ. ಅವುಗಳನ್ನು ಆದಷ್ಟು ಬೇಗ ಓದಿ, ಇದರ ಕೇಂದ್ರ ಪಾತ್ರವಾದ ಚಾಂದಚ್ಚನಿಗೆ ಕೊನೆಗೆ ಏನಾಯಿತು? ಆತ ಎಲ್ಲಿಗೆ ಹೋದ? ಆತನ ಪತ್ನಿ ಐಸಮ್ಮ, ಗೆಳೆಯರಾದ ಹಂಜಾ ಮತ್ತು ರಾಘವ, ಮಗ ರೋಷನ್ ... ಅವರೆಲ್ಲ ಹೇಗಿದ್ದಾರೆ? ಬಾಬ್ರಿ ಮಸೀದಿಯನ್ನು ಉರುಳಿಸಿದ ನಂತರ ಮುತ್ತುಪ್ಪಾಡಿಯ ಜನರ ಮನಸ್ಸಿನಲ್ಲಿ, ಚಿಂತನಾ ಕ್ರಮದಲ್ಲಿ, ಬದುಕಿನ ಶೈಲಿಯಲ್ಲಿ ಬದಲಾವಣೆಗಳಾಗಿವೆಯೇ? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಓದಬೇಕು ಎನಿಸುತ್ತಿದೆ. ಕಾದಂಬರಿ ನನ್ನನ್ನು ಸೆಳೆಯುತ್ತಲೇ ಇದೆ.

'ಸ್ವಾತಂತ್ರ್ಯದ ಓಟ'ದ ಪ್ರತಿ ಪುಟವನ್ನು ಓದುತ್ತಿರುವಾಗ ನನಗೆ ಬಹಳ ಮುಖ್ಯವಾಗಿ ಅನಿಸಿದ್ದು ಈ ಕೃತಿಯು ಮನುಷ್ಯರ ಬಗ್ಗೆ, ಮಾನವೀಯತೆಯ ಬಗ್ಗೆ ಹೇಗೆ ತನ್ನ ಓದುಗನಲ್ಲಿ ಭರವಸೆ ಮೂಡಿಸುತ್ತದೆ ಎಂದು.

ಎಸ್.ಎಲ್.ಭೈರಪ್ಪರ 'ಆವರಣ' ಮತ್ತು 'ಕವಲು' ಕಾದಂಬರಿಗಳ ಪ್ರತಿ ಪುಟವೂ ಮೈಪರಚಿಕೊಳ್ಳುವಂತೆ ಮಾಡುತ್ತಿತ್ತು. ಅದೆಷ್ಟೋ ಬಾರಿ ಅದನ್ನು ಮುಂದೆ ಓದಲಾಗದೆ ಕೋಪದಿಂದ ಬಿಸಾಡಿದ್ದೂ ಉಂಟು.

ಆದರೆ 'ಸ್ವಾತಂತ್ರ್ಯದ ಓಟ'ವನ್ನು ಓದುವಾಗ ಅದನ್ನು ಅಪ್ಪಿಕೊಳ್ಳಬೇಕೆನಿಸುತ್ತದೆ, ಅದರಲ್ಲಿನ ಪಾತ್ರಗಳ ಕೈ ಹಿಡಿದು ಮುತ್ತಿಡಬೇಕೆನಿಸುತ್ತದೆ. ಆ ಪಾತ್ರಗಳು ಬದುಕಿಗೆ ಅದೆಷ್ಟು ಹತ್ತಿರವಾಗಿವೆ, ನಿಷ್ಠವಾಗಿವೆ ಎಂದರೆ ಅವುಗಳೊಂದಿಗೆ ನಕ್ಕಿದ್ದೇನೆ, ನಿಟ್ಟುಸಿರುಬಿಟ್ಟಿದ್ದೇನೆ, ಕಣ್ಣೀರಿಟ್ಟಿದ್ದೇನೆ. ಅದರಲ್ಲಿನ ಹೆಚ್ಚಿನ ಪಾತ್ರಗಳು ಬ್ಯಾರಿ ಸಮುದಾಯಕ್ಕೆ




ಸೇರಿದ್ದರೂ ಅವು ಅಪರಿಚಿತ ಎನ್ನಿಸುವುದೇ ಇಲ್ಲ. ಅಷ್ಟೇ ಅಲ್ಲ, ಅವುಗಳಲ್ಲಿ ನನ್ನ ಅಪ್ಪ, ಅಮ್ಮ, ಮಾಮ, ತಮ್ಮ, ತಂಗಿ, ಮನೆ ಕೆಲಸದವಳು, ಮಿತ್ರರು, ಸ್ನೇಹಿತರು, ಎಲ್ಲರ ವ್ಯಕ್ತಿತ್ವಗಳು ಕಾಣಸಿಗುತ್ತವೆ.

ಮೊನ್ನೆ ಬೊಳುವಾರರಿಗೆ ಫೋನ್ ಮಾಡಿ "ನನಗೆ ದೊಡ್ಡ ಸಮಸ್ಯೆ ಎದುರಾಗಿದೆ. ನಾನು 'ಸ್ವಾತಂತ್ರ್ಯದ ಓಟ'ದ ಚಾಂದಚ್ಚನೊಂದಿಗೆ ಇರಬೇಕು ಎಂದೆನಿಸಿದರೂ ನನ್ನ ಕೆಲಸಗಳು ನನ್ನ ಆಶಯಕ್ಕೆ ಅಡ್ಡ ಬಂದು ಕಿರಿಕಿರಿ ಉಂಟು ಮಾಡುತ್ತಿವೆ" ಎಂದೆ. ಅದನ್ನು ಕೇಳಿ ಜೋರಾಗಿ ನಕ್ಕ ಬೊಳುವಾರರು "ನನಗೆ ಅದೇ ದೊಡ್ಡ ಕಾಂಪ್ಲಿಮೆಂಟ್. ನಾನು ಬರೆದದ್ದೂ ಸಾರ್ಥಕವಾಯಿತು. ಕಾದಂಬರಿಯ 600ನೇ ಪುಟದ ನಂತರ ಮಹಿಳೆಯರ ಪಾತ್ರ ಹೆಚ್ಚಾಗುತ್ತದೆ. ಅದನ್ನು ಓದಿದ ನಂತರ ನಿಮ್ಮ ಅಭಿಪ್ರಾಯವನ್ನು ನನಗೆ ಹೇಳಿ, ಆಯ್ತಾ?" ಎಂದರು.

ಕಳೆದ ಹದಿನೈದು ವರ್ಷಗಳಿಂದ ಬೊಳುವಾರರು ತಮ್ಮ ಹೃದಯದಲ್ಲಿ ಇಟ್ಟುಕೊಂಡು, ಕಳೆದ ಮೂರು ವರ್ಷಗಳ ಕಾಲ ಸಮಯ ಸಿಕ್ಕಾಗಲೆಲ್ಲ ಬರೆದ ಕಾದಂಬರಿ ಇದು. ಅಷ್ಟೇ ಅಲ್ಲ, ತಮ್ಮ ಕೈಯಿಂದಲೇ ಹಣವನ್ನು ಹಾಕಿ ಇದನ್ನು ಪ್ರಕಟಿಸಿದ್ದಾರೆ. ಈಗಾಗಲೇ ಈ ಪುಸ್ತಕಕ್ಕೆ ಖರ್ಚು ಮಾಡಿರುವ ಹಣ ಹಿಂದಕ್ಕೆ ಬಂದಿದ್ದು, ಇನ್ನು ಕೆಲವೇ ವಾರಗಳಲ್ಲಿ ಮರುಮುದ್ರಣಗೊಳ್ಳುವ ಸಾಧ್ಯತೆ ಇದೆ.

ಅದೇನೇ ಇರಲಿ, ಕನ್ನಡ ಸಾಹಿತ್ಯ ಲೋಕಕ್ಕೆ ಬೊಳುವಾರು ಅವರ 'ಸ್ವಾತಂತ್ರ್ಯದ ಓಟ' ಒಂದು ಅದ್ಭುತ ಸೇರ್ಪಡೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ನಾನು ಇದರ ಅರ್ಧ ಭಾಗವನ್ನಷ್ಟೇ ಓದಿದ್ದರೂ ಇದು ಎಲ್ಲರೂ ತಪ್ಪದೇ ಓದಲೇ ಬೇಕಾದಂತಹ ಕಾದಂಬರಿ ಎಂದು ಹೇಳಬಲ್ಲೆ...

ವೆಗಾಜೀಲ್ ಡಬ್ಲಿಂಗ್ ದಂಧೆ
50 ಕೋಟಿ ವಂಚನೆ


ಶ್ರವಣ್ ಶರ್ಮಾ

ಬೆಂಗಳೂರು ಮಹಾನಗರದಲ್ಲಿ ಮತ್ತೊಂದು ಬ್ಲೇಡ್ ಕಂಪನಿಯ ದೋಖಾ ದಂಧೆ ಹೊರಬಿದ್ದಿದೆ. ಈ ಕೇಸಿನ ಜಾಡನ್ನು ಹಿಡಿದು ತನಿಖೆ ಕೈಗೊಂಡ ನಮ್ಮ ಪತ್ರಿಕೆಯ ತಂಡ ಭಾರೀ ಆಘಾತಕಾರಿ ಅಂಶಗಳನ್ನು ಪತ್ತೆಹಚ್ಚಿದೆ. ಭಾರೀ ಹೈಟೆಕ್ ಮೋಸದ ಈ ಜಾಲ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹರಡಿಕೊಂಡಿದ್ದು ಬೆಂಗಳೂರಿನಿಂದ ಹಿಡಿದು ಕ್ಯಾಲಿಫೋರ್ನಿಯದವರೆಗೂ ವಿಸ್ತರಿಸಿದೆ. ಪೊಲೀಸರು ಮಿಂಚಿನ ವೇಗದಲ್ಲಿ ಕಾರ್ಯಾಚರಣೆ ನಡೆಸದೆ ಹೋದರೆ ಅಪರಾಧಿಗಳು ಪರಾರಿಯಾಗುವ ಸಾಧ್ಯತೆ ನಿಚ್ಚಳವಾಗಿದೆ.)


• ದೊಡ್ಡಿ ಮೂರ್ತಿ

ಬೆಂಗಳೂರಿನ ಒಂದು ಪ್ರಮುಖ ಪ್ರತಿಷ್ಠಿತ ಬಡಾವಣೆಯಾದ ಜಯನಗರದಲ್ಲಿ ವಾಸಿಸುವವರು ಹೈಲಿ ಎಜುಕೇಟೆಡ್ ಜನ. ಇಂಥಾ ಜಯನಗರದ ಹೈಫೈ ಮಂದಿಗೆ ಮೊನ್ನೆ ಮಾರ್ಚ್ 30ರಂದು ಒಂದು ಶಾಕಿಂಗ್ ಸುದ್ದಿ ಬಂತು. ಕಳೆದ 7-8 ವರ್ಷಗಳಿಂದ ತಮ್ಮ ಕಣ್ಣೆದುರಿನಲ್ಲಿ ತಳವೂರಿ ಭಾರೀ ವಹಿವಾಟು ನಡೆಸುತ್ತಿದ್ದ ವೆಗಾಜೀಲ್ ಕಂಪನಿ ಸಮೂಹದ ಎಂ.ಡಿ.ಯನ್ನು ಪೊಲೀಸರು ಬಂಧಿಸಿ ಎಳೆದೊಯ್ದ ಸುದ್ದಿ ಅದು. ಕಾರಣ ಈತ ಬೆಂಗಳೂರಿನ ಸಾವಿರಾರು ಬುದ್ಧಿವಂತರಿಗೆ ದೊಡ್ಡ ಟೋಪಿ ಹಾಕಿ ಕೋಟಿಗಟ್ಟಲೆ ದೋಚಿಬಿಟ್ಟಿದ್ದ. ಈತ ತನ್ನ ಖತರ್‌ನಾಕ್ ಮೋಸ ಜಾಲದ ಮೂಲಕ ದೋಚಿದ್ದು ಬರೋಬ್ಬರಿ 50 ಕೋಟಿಗಳೆಂದು ಒಂದು ಅಂದಾಜು.

ಈತನ ಹೆಸರು ಶ್ರವಣ್ ಶರ್ಮಾ. ವಯಸ್ಸು ಸುಮಾರು 50 ವರ್ಷ. ಈತ ಮೂಲತಃ ಬಿಹಾರಿ ಬ್ರಾಹ್ಮಣ. ಬಿಹಾರದ ಪಾಟ್ನಾ ಯೂನಿವರ್ಸಿಟಿಯಲ್ಲಿ ಬಿಕಾಂ ಪದವಿ ಮುಗಿಸಿದ್ದಾನೆ. ಕಂಡೋರನ್ನು ನಂಬಿಸಿ ಯಾಮಾರಿಸುವುದು ಈತನಿಗೆ ರಕ್ತಗತವಾಗಿರುವ ಕಲೆ. ಈತ ಬೆಂಗಳೂರು ತನ್ನ ಕಾರ್ಯಕ್ಷೇತ್ರಕ್ಕೆ ಅತ್ಯಂತ ಪ್ರಶಸ್ತವಾದ ಸ್ಥಳವೆಂದು ತೀರ್ಮಾನಿಸಿ 1990ರಿಂದಲೂ ಇಲ್ಲೇ ಠಿಕಾಣಿ ಹೂಡಿದ್ದಾನೆ. ಈಗ ಆತ ಪ್ರಾರಂಭಿಸಿರುವ ಆಫೀಸ್‌ನ ಲೊಕೇಷನ್ ನೋಡಿದರೆ ಯಾರಾದರೂ ನಿಬ್ಬೆರಗಾಗುತ್ತಾರೆ. ಈ ಆಫೀಸಿನ ಎದುರುಗಡೆ ಹೆಸರಾಂತ ಸಿಟಿ ಕಾಲೇಜು ಇದ್ದರೆ, ಅದರ ಎಡಭಾಗದಲ್ಲಿ ಬೆಂಗಳೂರು ಇಂಟರ್‌ನ್ಯಾಷನಲ್ ಅಕಾಡೆಮಿ ಎಂಬ ಮತ್ತೊಂದು ಪ್ರತಿಷ್ಠಿತ ಸಂಸ್ಥೆಯಿದೆ. ಶ್ರವಣ್ ಶರ್ಮಾನ ನಯವಂಚಕ 420 ಗ್ಯಾಂಗು 2004ರಿಂದಲೇ ಇಂಥಾ ಆಯಕಟ್ಟಿನ ಜಾಗದಲ್ಲಿ ಹೈಟೆಕ್ ಬಲೆ ಹರಡಿ ಮಿಕಗಳ ಬೇಟೆಯಲ್ಲಿ ತೊಡಗಿದೆ.

"ಡರ್ಟಿ ಲೋಕಲ್ ಲಾಂಗ್ವೇಜ್" ಮಾತಾಡೋ ಜನ ಅಲ್ಲ, ಅವರ ಲೆವೆಲ್‌ಗೆ ಏನಿದ್ದರೂ ಇಂಗ್ಲಿಷ್ ಹಿಂದಿ ಮಾತ್ರ! ಇಷ್ಟೆಲ್ಲಾ ಎಲಿಜಿಬಲಿಟಿ ಇದ್ದಮೇಲೆ ಇನ್ನೇನು ಬೇಕು ಹೇಳಿ.

ನಿಜ ಹೇಳಬೇಕೆಂದರೆ ನಮ್ಮ ಬೆಂಗಳೂರಿನ ಮಧ್ಯಮ ವರ್ಗದ ಜನ ಯಾರನ್ನೂ ನಂಬೋದಿಲ್ಲ, ಬೇರೆಯವರ



ಈ ಶ್ರವಣ್ ಶರ್ಮಾ ಅಂಡ್ ಗ್ಯಾಂಗ್‌ನ ಕಾರ್ಯಾಚರಣೆಯ ಸ್ಟೈಲೇ ಬೇರೆ. ಇವರ ಕತೆ ಯಾರೋ ಹಳ್ಳಿಗಾಡಿನ ಅಮಾಯಕರನ್ನು ಯಾಮಾರಿಸೋ ಕತೆ ಥರದ್ದಲ್ಲ ಅಥವಾ ವಿನಿವಿಂಕ್ ಶಾಸ್ತ್ರಿಯಂಥ ದೇವಸ್ಥಾನದ ಪೂಜಾರಿ ಲೆವೆಲ್‌ನ ಟೋಪಿಯೂ ಅಲ್ಲ, ಇದು ಐನಾತಿ ಹೈಟೆಕ್ ಟೋಪಿ! ಈ ದಂಧೆಗಾಗಿ ಈತ ಕನಿಷ್ಠ ಅರ್ಧ ಡಜನ್ ಕಂಪನಿಗಳನ್ನು ಸ್ಥಾಪಿಸಿದ್ದಾನೆ. ಕಂಪನಿಗಳ ಪಟ್ಟಿ ನೋಡಿ. ವೆಗಾಜೀಲ್ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್, ಮಿರಿಯಾಡ್ ಟೀಮ್ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್, ಇ-ಸೆಂಟ್ರಿಕ್ ಬ್ಯುಸಿನೆಸ್ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್, ಇಂಡಿಯಾ ಟ್ರಾವೆಲ್ ಹೌಸ್, ಆರ್ಬಿಸಾನ್ ಇಂಡಿಯಾ, ದ ಲರ್ನಿಂಗ್ ಟ್ರೀ... ಹೀಗೇ ಪಟ್ಟಿ ಮುಂದುವರೆಯುತ್ತದೆ. ಹಾಗೆ ಪ್ರತಿ ಕಂಪನಿಗೂ ಒಂದೊಂದು ಪ್ರತ್ಯೇಕ ವೆಬ್‌ಸೈಟನ್ನೂ ಪ್ರಾರಂಭಿಸಿದ್ದಾನೆ.


ಅನಿಕೇತ್ ಶರ್ಮಾ


ವಾಸ್ತವದಲ್ಲಿ ಈ ಎಲ್ಲಾ ಕಂಪನಿಗಳೂ ಒಂದೇ ಆಗಿದ್ದು ಇವರ ಕೈಯಲ್ಲಿ ಸಿಕ್ಕಬೀಳುವ ಗಿರಾಕಿಗಳನ್ನು ಮರುಳು ಮಾಡಲಿಕ್ಕಷ್ಟೆ ಹೀಗೆ ನಾನಾ ಬಣ್ಣಗಳಲ್ಲಿ, ನಾನಾ ವೇಷಗಳಲ್ಲಿ ಶರ್ಮಾ ಅಂಡ್ ಗ್ಯಾಂಗ್ ಕಾಣಿಸಿಕೊಂಡಿದೆ. ಆದರೆ ಈ ಎಲ್ಲಾ ಕಂಪನಿಗಳಿಗೂ ಒಂದೇ ಆಫೀಸ್ ಇದ್ದು, ಅದರ ಅಡ್ರೆಸ್ಸು... ಕ್ಷಮಿಸಿ, ಅವರು ಅದನ್ನು ಬರೀ ಆಫೀಸ್ ಅಂತಾ ಕರೆಯೋದಿಲ್ಲ, ಕಾರ್ಪೊರೇಟ್ ಆಫೀಸ್ ಅಂತ ಹೇಳಿಕೊಳ್ಳುತ್ತಾರೆ.

ಈ ಕಂಪನಿಯ ಎಕ್ಸಿಕ್ಯೂಟಿವ್‌ಗಳು ಸೂಟು ಬೂಟು ಧರಿಸಿರುತ್ತಾರೆ. ಕುತ್ತಿಗೆಯಲ್ಲಿ ಒಂದು ಟೈ ನೇತಾಡ್ತಾ ಇರುತ್ತೆ, ಯಾವಾಗಲೂ ಐಷಾರಾಮಿ ಕಾರುಗಳಲ್ಲೇ ಓಡಾಡುತ್ತಾರೆ. ಸಾಲದ್ದಕ್ಕೆ, ತೆಳ್ಳಗೆ ಬೆಳ್ಳಗಿನ ನಾರ್ತ್ ಇಂಡಿಯನ್ಸ್ ಬೇರೆ.


ವಿಷಯ ಹಾಗಿರಲಿ, ಬಹಳ ಮಂದಿ ಅಣ್ಣ ತಮ್ಮ, ಬಂಧುಬಳಗ ಯಾರನ್ನೂ ಹತ್ತಿರ ಸೇರಿಸೋಲ್ಲ, ಆದರೆ ಈ ಮೇಲಿನ ಅರ್ಹತೆ ಇರೋ "ದೊಡ್ಡ" ಮನುಷ್ಯರು ಸಿಕ್ಕರೆ ಮಾತ್ರ ಅಯಸ್ಕಾಂತಕ್ಕೆ ಅಂಟಿಕೊಳ್ಳೋ ಹಾಗೆ ಅಂಟಿಕೊಂಡುಬಿಡುತ್ತಾರೆ. ಅವರು ಪುಂಗಿ ಊದಲು ಶುರು ಮಾಡೋದೇ ತಡ, ಇವರು ಗೋಣು ಆಡಿಸಲು ಶುರು. ತಮ್ಮ ಕೈಯಲ್ಲಿ ಇದ್ದಬದ್ದುದನ್ನೆಲ್ಲಾ ಈ ಹೈಟೆಕ್ ಮೋಸಗಾರರ ಬಾಯಿಗೆ ಹಾಕಿದ ನಂತರ ಬಾಯಿ ಬಡಿದುಕೊಳ್ಳುವ ಸರದಿ ಇವರದು. ಈ ನಮ್ಮ ಜನಕ್ಕೆ ಮೋಸದ ಅರಿವಾಗುವ ಹೊತ್ತಿಗಾಗಲೇ ಕೆಟ್ಟು ಬರ್ಬಾತ್ ಆಗಿರುತ್ತಾರೆ. ಈ ಶ್ರವಣ್ ಶರ್ಮಾ ಅಂಡ್ ಗ್ಯಾಂಗ್‌ನ ಕೈಗೆ ಸಿಕ್ಕ ಸಾವಿರಾರು ಮಂದಿಯ ಗತಿ ಯಥಾವತ್ ಹೀಗೇ ಆಗಿದೆ.

ಈ ವೆಗಾಜೀಲ್ ಎಂಬ ಬ್ಲೇಡ್ ಕಂಪನಿ ಜನರನ್ನು ನಂಬಿಸಲು ಮಾಡಿದ, ಮಾಡುತ್ತಿರುವ ಮೋಡಿಗಳನ್ನು ನೋಡಿ. ಮೊದಲನೆಯದಾಗಿ ಈ ಆಫೀಸಿನ ಒಳಹೊಕ್ಕ ವ್ಯಕ್ತಿ ಒಮ್ಮೆಲೇ ಮರುಳಾಗಿಬಿಡುತ್ತಾನೆ. ಯಾಕೆಂದರೆ ಇದು ನೆಟ್‌ವರ್ಕ್ ಮಾರ್ಕೆಟಿಂಗ್ ಆಫೀಸ್ ಎಂದು ನಿಮಗೆ ಅನಿಸುವುದೇ ಇಲ್ಲ, ಬದಲಿಗೆ ಯಾವುದೋ ವಿದೇಶಿ ಬ್ಯಾಂಕ್‌ನ ಒಳಹೊಕ್ಕ ಅನುಭವವಾಗುತ್ತದೆ. ಸಂಪೂರ್ಣ ಏರ್‌ಕಂಡಿಷನ್ಡ್ ಆಫೀಸು. ಎಲ್ಲವೂ ಕಂಪ್ಯೂಟರ್‌ಮಯ. ಅಷ್ಟು ಸಾಲದೆಂಬಂತೆ ಕಚೇರಿಯ ಗೋಡೆಗಳ ಮೇಲೆ ಶ್ರೀರಾಮ, ಶ್ರೀಕೃಷ್ಣ ಹನುಮಂತ, ಲಕ್ಷ್ಮಿ, ಸರಸ್ವತಿ ಮುಂತಾದ ಎಲ್ಲಾ ಪ್ರಮುಖ ದೇವರುಗಳ ಫೋಟೊಗಳನ್ನು ಅಚ್ಚುಕಟ್ಟಾಗಿ ಫಿಕ್ಸ್ ಮಾಡಲಾಗಿದೆ.

ಈ ಎಲ್ಲಾ ಅರೇಂಜ್‌ಮೆಂಟ್‌ಗಳನ್ನು ನಮ್ಮ ಮಿಡ್ಲು ಕ್ಲಾಸು ಮಂದಿ ಬಹುವಾಗಿ ಮೆಚ್ಚುತ್ತಾರೆ. ಇಂಥಾ ಮೆಚ್ಚುಗೆಯ ಭಾವದಲ್ಲಿ ಹಾಗೆ ಕಂಪನಿಯ ಎಂ.ಡಿ. ಶ್ರವಣ್ ಶರ್ಮಾನ ಛೇಂಬರ್ ಕಡೆ ನೀವು ಹೆಜ್ಜೆ ಹಾಕಿದರೆ ಸದಾ ಹಸನ್ಮುಖಿಯಾಗಿ ಅರೆ ಧ್ಯಾನಾವಸ್ಥೆಯಲ್ಲಿ ಇರುವಂತೆ ಕಾಣುವ ಈತ "ಹರೇರಾಮ ಹರೇಕೃಷ್ಣ ರಾಮಕೃಷ್ಣ ಹರೇಹರೇ" ಎಂದು ಮಂತ್ರ ಪಠಿಸುತ್ತಿರುತ್ತಾನೆ. ಅಲ್ಲಿಗೆ ಒಂದು ಸುತ್ತಿನ ಮೋಡಿ ಮುಕ್ತಾಯ.


ರಾಜೇಶ್ ಬಿದ್ದಪ್ಪ

ಇನ್ನು ಮುಂದಿನ ಹಂತದಲ್ಲಿ ಈ ದಗಾದಂಧೆಯಲ್ಲಿ ಚೆನ್ನಾಗಿ ಪಳಗಿರುವ ಪಾರ್ಟನರ್‌ಗಳು ನೀಟಾಗಿ ಎಕ್ಸಿಕ್ಯೂಟಿವ್ ಡ್ರೆಸ್‌ಗಳಲ್ಲಿ ಪ್ರತ್ಯಕ್ಷವಾಗುತ್ತಾರೆ. ವೆಗಾಜೀಲ್ ಕಂಪನಿಯಲ್ಲಿ ಹಣ ಹೂಡಿದರೆ ಒಂದು ಕರಾರು ಪತ್ರವನ್ನು ರಿಜಿಸ್ಟರ್ ಮಾಡಿಸಿಕೊಡುವುದಾಗಿ ನಂಬಿಸುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಗ್ಯಾರಂಟಿ ಸರ್ಟಿಫಿಕೇಟ್ ಕೊಡುವುದಾಗಿ ಭರವಸೆ ನೀಡುತ್ತಾರೆ. ಅದಕ್ಕೆ ಸಾಕ್ಷಿಯಾಗಿ ಈ ಹಿಂದೆ ಹಣ ಹೂಡಿದವರಿಗೆ ಕೊಟ್ಟಿರುವ ಸರ್ಟಿಫಿಕೇಟ್‌ಗಳ ಪ್ರತಿಗಳನ್ನು ನಿಮ್ಮ ಕೈಗಿಡುತ್ತಾರೆ. ಇಷ್ಟೆಲ್ಲಾ ಆದಮೇಲೆ ಅಪನಂಬಿಕೆಗೆ ಆಸ್ಪದವಾದರೂ ಎಲ್ಲಿದೆ ಹೇಳಿ?


ಸುಧೀರ್ ಆನಂದ್

ಮೇಲಾಗಿ ಇವರು ಹೇಳುವ ಪ್ರಕಾರ ಕಂಪನಿಯಲ್ಲಿ ರಾಯಲ್, ಪ್ರೀಮಿಯಂ, ಗೋಲ್ಡ್ ಮುಂತಾದ ನಾನಾ ಲಾಭದಾಯಕ ಸ್ಕೀಮುಗಳಿವೆ. ನಿಮ್ಮ ಸಾಮರ್ಥ್ಯಕ್ಕೆ ತಕ್ಕಹಾಗೆ 11,000 ರೂಪಾಯಿಗಳಿಂದ ಹಿಡಿದು ಲಕ್ಷಗಳವರೆಗೂ ಹಣ ಹೂಡಬಹುದು. ಹಾಗೆ ಹಣ ಹೂಡಿದವರಿಗೆ ಉಡುಗೊರೆಯಾಗಿ ಮೊದಲಿಗೆ ಗೋಲ್ಡ್ ಕಾಯಿನ್‌ಗಳನ್ನು ಕೊಡುತ್ತಾರೆ. ಹೀಗೆ ಮೆಂಬರ್ ಆದವರು ತಮ್ಮ ಅಡಿಯಲ್ಲಿ ಮತ್ತಿಬ್ಬರು ಬಕ್ರಾಗಳನ್ನು ತಂದು ಇವರಿಗೆ ಒಪ್ಪಿಸಿದರೆ ಸಾಕು. ನಿಮಗೆ ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ನಿಮ್ಮ

ಸ್ಕೀಮ್‌ಗೆ ತಕ್ಕಹಾಗೆ ಬೋನಸ್ ಹಣ ಕೊಡುವ ಗ್ಯಾರ ಕೊಡುತ್ತಾರೆ. ಒಂದು ವೇಳೆ ನೀವು ಹೂಡಿರುವ ಹ ವಾಪಾಸ್ ತೆಗೆದುಕೊಳ್ಳಬೇಕೆನಿಸಿದರೆ ಕೇವಲ ಹದಿನೈ ದಿನಗಳಲ್ಲಿ ಮನಿ ಬ್ಯಾಕ್ ಗ್ಯಾರಂಟಿ ಅನ್ನುತ್ತಾರೆ. ಹೀ ಆಕರ್ಷಕ ಮಾತುಗಳಿಂದ ಜನರನ್ನು ಮರುಳು ಮಾ ಹಣ ತೊಡಗಿಸುವ ದೊಡ್ಡ ಜಾಲವೇ ಇದೆ.

ಕೆಲವೇ ಉದಾಹರಣೆಗಳನ್ನು ಗಮನಿಸೋಣ. ಕಂಪನಿಯ ಮೇಲೆ ಪೊಲೀಸ್ ಕಂಪ್ಲೈಂಟ್ ಕೊಟ್ಟಿರ ಬೆಂಗಳೂರಿನ ಕನಕಪುರ ರಸ್ತೆಯ ಕುವೆಂಪುನಗರದ ನಿವ ಶ್ರೀಹರ್ಷ ವಿಜಯ್‌ಕುಮಾರ್ ಎಂಬುವವರು ಬಾ ಎಂಬ ಏಜೆಂಟ್‌ನ ಮಾತಿಗೆ ಮರುಳಾಗಿ 2,34,9 ರೂ.ಗಳನ್ನು ಪಾವತಿಸಿದರು. ವ ಇಬ್ಬರನ್ನು ನೆಟ್‌ವರ್ಕ್‌ಗೆ ಸೇರಿಸಿ ಪ್ರತಿ ಮೂರು ತಿಂಗಳಿಗೆ 18,0 ಬೋನಸ್ ಕೊಡುತ್ತಾರೆಂಬ ಆಮಿಷ ಬಲಿಯಾಗಿ ಅವರ ಅಣ್ಣ ಮ ಅತ್ತಿಗೆಯರಿಂದಲೂ ತಲಾ 2,34,9 ಹಣ ಕಟ್ಟಿಸಿದರು. ಮೊದಲಿಗೆ ಒಂ ಕಂತು ಬೋನಸ್ ಕೊಟ್ಟ ಕಂ ಯವರು ನಂತರ ಸತಾಯಿಸಲು ಶು ಮಾಡಿದರು. ಕಂಪನಿ ಕಚೇರಿಗೆ ಹೋ ಗಲಾಟೆ ಮಾಡಿದಾಗ ಇದೇ ಶ್ರವ ಶರ್ಮ ಚೆಕ್ ಬರೆದು ಕೊಟ್ಟ, ಆ ಆ ಚೆಕ್ ಕೂಡಾ ಬೌನ್ಸ್ ಆಯಿ ನಂತರ ಶ್ರೀಹರ್ಷ ಕುಟುಂಬದವರು ನಮ್ಮ ಹಣ ನಿವ ಸೆಟಲ್ ಮಾಡಿ ಎಂದು ಎರಡು ತಿಂಗಳಿಂದಲೂ ಅಲೆ ಬೇಸತ್ತು ಈಗ ಪೊಲೀಸರಿಗೆ ದೂರು ಕೊಟ್ಟಿದ್ದಾರೆ.

ಕನಕಪುರದ ಚಂದ್ರಪ್ಪ ಎಂಬುವವರು ಕಿರಾಣಿ ಅಂ ನಡೆಸಿ ಜೀವನ ಮಾಡುತ್ತಿದ್ದಾರೆ. ಇವರನ್ನು ಸಂಪರ್ಕಿಸಿ ಅರುಣ್ ಮತ್ತು ಭಾರತಿ ಎಂಬ ಐನಾತಿ ಏಜೆಂಟ್‌ಗ ಅಂಗೈಯಲ್ಲೇ ಆಕಾಶ ತೋರಿಸಿದರು. ಆದರ ಅನುಮಾನಗೊಂಡ ಚಂದ್ರಪ್ಪ ಮ ಸಂಗಡಿಗರು ಅವರು ಕೊಟ್ಟಿದ್ದ ಬ್ಯಾಂ ಗ್ಯಾರಂಟಿ ಪ್ರತಿಯನ್ನು ಹಿಡಿದುಕೊಂ ಇಂಡಿಯನ್ ಓವರ್‌ಸೀಸ್ ಬ್ಯಾಂಕ ಮ್ಯಾನೇಜರ್‌ಅನ್ನು ಕಂಡು ಈ ಬ್ಯಾಂ ಗ್ಯಾರಂಟಿ ಪತ್ರದ ಬಗ್ಗೆ ವಿಚಾರಿಸಿದ ಬ್ಯಾಂಕ್ ಮ್ಯಾನೇಜರ್ ಇದು ಒರಿಜಿನ ಗ್ಯಾರಂಟಿ ಪತ್ರವೆಂದೂ ಒಂದು ವೇ ಕಂಪನಿ ಹಣ ಕೊಡದಿದ್ದರೆ ನ ಬ್ಯಾಂಕ್‌ನಿಂದಲೇ ಹಣ ಪಾವತಿ ಮಾ ವುದಾಗಿ ಭರವಸೆ ಕೊಟ್ಟ ನಂ ಚಂದ್ರಪ್ಪನಿಗೆ ಅನುಮಾನ ಪಡ ಇನ್ನೇನೂ ಉಳಿದಿರಲಿಲ್ಲ. ಅ ಉತ್ಸಾಹದಲ್ಲಿ ತಮ್ಮ ನೆಂಟರು, ಸ್ನೇಹಿತರೆಲ್ಲರನ್ನೂ ನೆಟ್‌ವರ್ಕ್‌ಗೆ ಸೇರಿಸಿ ಒಟ್ಟಾರೆ 28 ಲಕ್ಷ ಹಣವ ತೊಡಗಿಸಿದ್ದಾರೆ. ಆದರೆ ಇದುವರೆಗೂ ಅವರಿಗೆ ಯಾ


ಮುಕುಂದ್ ರೆಡ್ಡಿಯ ಫಾರ್ಮುಲಾ

ಕಳೆದ ಮೂರು ತಿಂಗಳಿನಿಂದ ತಮ್ಮ ಹಣ ವಾಪಸ್ ಕೊಡುವಂತೆ ವೆಗಾಜೀಲ್ ಕಂಪನಿಯವರ ಮೇಲೆ ಜನರ ಒತ್ತಡ ಹೆಚ್ಚಾಗುತ್ತಿದ್ದಂತೆ ಶ್ರವಣ್ ಶರ್ಮ ಎಂಬ ಹೊಸ ಡೈರೆಕ್ಟರ್ ಒಬ್ಬರನ್ನು ರಂಗಕ್ಕಿಳಿಸಿದ. ಈ ಹೊಸ ಡೈರೆಕ್ಟರ್ ನಿಮ್ಮೆಲ್ಲರ ಹಣವನ್ನು ವಾಪಸ್ ಮಾಡಿ ಕಂಪನಿಯನ್ನು ಮತ್ತೆ ಲಾಭದಾಯಕವಾಗಿ ನಡೆಸಿ ನಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತಾರೆ ಎಂದು ಭರ್ಜರಿ ಭಾಷಣ ಬಿಗಿದ. ಅದರಂತೆಯೇ ಮುಕುಂದ್ ರೆಡ್ಡಿ ಅಲ್ಲಿ ನೆರೆದಿದ್ದ ಸುಮಾರು ನೂರು ಜನರಿಗೆ ಆಶ್ವಾಸನೆ ನೀಡಿದ. ಯಾವುದೋ ಒಂದು ಆಸ್ತಿಯನ್ನು ಅಡಮಾನ ಇಡುತ್ತಿರುವುದಾಗಿಯೂ, ಅದರಿಂದ ಬರುವ ಹಣದಿಂದ ಎಲ್ಲರ ದುಡ್ಡನ್ನೂ ವಾಪಸ್ ಕೊಡುತ್ತೇನೆಂದೂ, ತನ್ನ ಮೇಲೆ ವಿಶ್ವಾಸ ಇಟ್ಟು ಸ್ವಲ್ಪ ಕಾಲ ತಾಳ್ಮೆಯಿಂದ ಕಾಯಬೇಕೆಂದು ಮನವೊಲಿಸಿದ. ಈ ಹೊಸ ಡೈರೆಕ್ಟರ್‌ನ ಮಾತನ್ನೂ ನಂಬಿದ ಮಂದಿ ಹಾಗೇ ಗೊಣಗಾಡುತ್ತಾ ಮತ್ತೆ ಒಂದೂವರೆ ತಿಂಗಳು ದೂಡಿದರು. ಕೊನೆಗೆ ಈ ರೆಡ್ಡಿಯ ಮಾತೂ ಸುಳ್ಳು ಅಂತ ಗೊತ್ತಾದಾಗ ಜನ ರೊಚ್ಚಿಗೆದ್ದು ಮುಂದಿನ ಹಾದಿ ತುಳಿಯುತ್ತಿದ್ದಾರೆ. ಆದರೆ ಇದ್ದಕ್ಕಿದ್ದಂತೆ ಧುತ್ತನೇ ಪ್ರತ್ಯಕ್ಷವಾದ ಈ ಮುಕುಂದ್‌ರೆಡ್ಡಿಗೂ ಆ ಶ್ರವಣ್ ಶರ್ಮನಿಗೂ ಅದೇನು ಅಂಡರ್‌ಸ್ಟ್ಯಾಂಡಿಂಗ್ ಇದೆ ಎಂಬುದೇ ಒಂದು ನಿಗೂಢ!!

ಪೊಲೀಸರ ಪಾತ್ರವೇನು?

ಇಲಾಖೆಯಲ್ಲಿ ದಕ್ಷ ಅಧಿಕಾರಿಯೆಂದು ಹೆಸರು ಮಾಡಿರುವ ಇನ್‌ಸ್ಪೆಕ್ಟರ್ ಎಸ್.ಕೆ.ಉಮೇಶ್ ಇತ್ತೀಚೆಗೆ ಜಯನಗರ ಪೊಲೀಸ್‌ಠಾಣೆಗೆ ಬಂದಿದ್ದಾರೆ. ಶ್ರವಣ್ ಶರ್ಮಾನನ್ನು ಈಗಾಗಲೇ ಬಂಧಿಸಿದ ಪೊಲೀಸರು ಏಪ್ರಿಲ್ 1 ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಮುಂದಿನ ತನಿಖೆಗಾಗಿ 13 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದುಕೊಂಡಿದ್ದಾರೆ. ವೆಗಾಜೇಲ್ ಕಂಪನಿಯ ಆಫೀಸಿನಿಂದ ಕಂಪ್ಯೂಟರ್‌ಗಳನ್ನು ಹಾಗೂ ಲೆಕ್ಕಪತ್ರದ ಫೈಲುಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ತನಿಖೆ ಮುಂದುವರೆದಿದೆ. ಹೀಗಾಗಿ ಹಣ ಕಳೆದುಕೊಂಡಿರುವ ಕೆಲವರಲ್ಲಿ ತಮಗೆ ನ್ಯಾಯ ಸಿಗಬಹುದೆಂಬ ಆಶಾಭಾವ ಮೂಡಿದೆ.

ಇದೆಲ್ಲಾ ಪಾಸಿಟಿವ್ ಸ್ಟೆಪ್‌ಗಳು. ಆದರೆ ಇಲ್ಲಿ ಒಂದು ಮಹತ್ತರವಾದ ತೊಡಕು ಕಂಡುಬರುತ್ತಿದೆ. ವಾಸ್ತವದಲ್ಲಿ ಇದು ಬಹಳ ಪೂರ್ವಯೋಜಿತವಾದ, ವ್ಯವಸ್ಥಿತವಾದ ಅಪರಾಧವಾಗಿದ್ದು ಇದರ ಹಿಂದೆ ಬಹು ದೊಡ್ಡ ಜಾಲವೇ ಇದೆಯೆಂಬುದು ಮೇಲುನೋಟಕ್ಕೇ ಕಂಡುಬರುವ ಸಂಗತಿ. ಕರ್ನಾಟಕದಲ್ಲಿ ಮಾತ್ರವಲ್ಲದೆ ಈ ಖತರ್‌ನಾಕ್ ಜಾಲ ದೇಶಾದ್ಯಂತ ಹಲವು ರಾಜ್ಯಗಳಲ್ಲಿ ಹರಡಿಕೊಂಡಿದೆ. ಸುಮಾರು 3000 ಜನರಿಂದ 50 ಕೋಟಿ ರೂಪಾಯಿಗಳನ್ನು ಲಪಟಾಯಿಸಿದ್ದಾರೆ ಎಂಬುದು ಈ ಸದ್ಯ ಕೇಳಿಬರುತ್ತಿರುವ ಮಾಹಿತಿ. ಇದು ಹಲವು ಪಟ್ಟು ಹೆಚ್ಚಾಗಿರುವ ಸಾಧ್ಯತೆಯನ್ನು ನಾವು ತಳ್ಳಿಹಾಕುವಂತಿಲ್ಲ. ಆದರೆ ಪೊಲೀಸರು ಈ ಪ್ರಕರಣವನ್ನು ಒಂದು ಮಾಮೂಲಿ ಚೆಕ್ ಬೌನ್ಸ್ ಅಥವಾ ಚೀಟಿಂಗ್ ಕೇಸು ಎಂಬಂತೆ ಲಘುವಾಗಿ ಪರಿಗಣಿಸಿರುವಂತೆ ಕಾಣುತ್ತಿದೆ. ಇದು ಈ ಪ್ರಕರಣದ ತನಿಖೆಗೆ ಬಹುಮುಖ್ಯವಾದ ತೊಡಕು.



ಇನ್‌ಸ್ಪೆಕ್ಟರ್ ಉಮೇಶ್

ನಾವು ಗಮನಿಸಲೇಬೇಕಾದ ಮತ್ತೊಂದು ಅಂಶವಿದೆ. ಹಣ ಕಳೆದುಕೊಂಡ ಬಡಪಾಯಿಗಳು ಕಳೆದ ಮೂರು ತಿಂಗಳಿನಿಂದ ಈ ವೆಗಾಜೇಲ್ ಕಚೇರಿಯ ಮುಂದೆ ಜೋರು ಗಲಾಟೆ ಮಾಡುತ್ತಿದ್ದಾರೆ. ನಿತ್ಯ ಏನಿಲ್ಲವೆಂದರೂ ನೂರು ಜನ ಜಮಾಯಿಸುತ್ತಿದ್ದರೆಂದು ನೊಂದ ಬಡಪಾಯಿಗಳು ಹೇಳುತ್ತಿದ್ದಾರೆ. ಪೊಲೀಸ್ ಠಾಣೆಗೆ ಕೇವಲ ಅರ್ಧ ಕಿಲೋಮೀಟರ್ ದೂರದಲ್ಲಿರುವ ವೆಗಾಜೇಲ್ ಆಫೀಸಿನ ಮುಂದೆ ಇಷ್ಟೆಲ್ಲಾ ನಡೆಯುತ್ತಿದ್ದರೂ ಪೊಲೀಸರ ಗಮನಕ್ಕೆ ಇದು ಬಾರಲಿಲ್ಲವೆಂದರೆ ಇದನ್ನು ನಿರ್ಲಕ್ಷ್ಯವೆನ್ನದೆ ವಿಧಿಯಿಲ್ಲ.

ಈ ಕಂಪನಿಯ ಮೇಲೆ ದೂರು ದಾಖಲಿಸಲು ಹೋದಾಗ ಪೊಲೀಸರು ದೂರು ದಾಖಲಿಸಿಕೊಳ್ಳದೆ ಏನೇನೋ ಸಬೂಬು ಹೇಳಿ ಸಾಗಹಾಕಿದರೆಂದು ಕೆಲವು ಫಿರ್ಯಾದುದಾರರು ಹೇಳುತ್ತಿದ್ದಾರೆ. ಮಾಧ್ಯಮಗಳಲ್ಲಿ ಸುದ್ದಿಯಾಗಿ ವಿಷಯ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಕೆಲವು ದೂರುಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂಬುದು ಅವರ ಅಳಲು. ಆದರೆ ಇನ್‌ಸ್ಪೆಕ್ಟರ್ ಉಮೇಶ್ ಹೇಳುವುದೇ ಬೇರೆ. ಕಂಪ್ಲೈಂಟ್ ಕೊಡಲು ಯಾರೂ ಮುಂದೆ ಬರದೆ, ಎಲ್ಲರೂ ಹಿಂಜರಿಯುತ್ತಿದ್ದ ಸಂದರ್ಭದಲ್ಲಿ ಅವರು ಕೆಲವರಿಗೆ ಧೈರ್ಯ ತುಂಬಿ ಕೇಸು ದಾಖಲಿಸಿಕೊಂಡಿದ್ದಾರಂತೆ. ಇದೇ ಸತ್ಯವಾದರೆ ನಾವು ಅವರಿಗೆ ಅಭಿನಂದನೆ ಹೇಳಲೇಬೇಕು. ಮುಂದಿನ ದಿನಗಳಲ್ಲಿ ಈ ಕೇಸಿನ ತನಿಖೆ ಯಾವ ದಿಕ್ಕಿನತ್ತ ಸಾಗುತ್ತದೆ ಎಂಬುದರಿಂದ ಈ ಆರೋಪದ ಸತ್ಯಾಸತ್ಯತೆ ಹೊರಬರುತ್ತದೆ, ಆ ಮಾತು ಬೇರೆ. ಅದೇನೇ ಇರಲಿ, ಈ ಕೇಸಿನಲ್ಲಿ ನೊಂದವರಿಗೆ ನ್ಯಾಯ ಸಿಗಲಿ ಎಂಬುದಷ್ಟೇ ನಮ್ಮ ಹಾರೈಕೆ.

ಇಲಾಖೆಯ ಮೇಲಧಿಕಾರಿಗಳು ಪರಿಗಣನೆಗೆ ತೆಗೆದುಕೊಳ್ಳಲೇಬೇಕಾದ ಪ್ರಮುಖ ಅಂಶವೊಂದಿದೆ. ಏನೆಂದರೆ ಈ ಹಗರಣ ಕೇವಲ ಜಯನಗರ ಠಾಣೆಯ ವ್ಯಾಪ್ತಿಗೆ ಸೀಮಿತವಾದುದಲ್ಲ. ಈ ಖತರ್‌ನಾಕ್ ಜಾಲ ಕರ್ನಾಟಕದ ಹಲವು ಜಿಲ್ಲೆಗಳಿಗೆ, ಅಷ್ಟೇ ಏಕೆ, ಹಲವು ರಾಜ್ಯಗಳಿಗೆ ವಿಸ್ತರಿಸಿದೆ. ಈ ಪ್ರಕರಣದ ಪ್ರಮುಖ ಆರೋಪಿಗಳಲ್ಲೊಬ್ಬ ವಿದೇಶದಿಂದ ಕಾರ್ಯಾಚರಣೆ ನಡೆಸುತ್ತಿದ್ದಾನೆ. ಅಮಾಯಕರನ್ನು ಬಲೆಗೆ ಕೆಡವಿಕೊಳ್ಳಲು ಇಂಟರ್‌ನೆಟ್, ವೆಬ್‌ಸೈಟ್‌ಗಳನ್ನು ಯಥೇಚ್ಛವಾಗಿ ಬಳಸಿದ್ದಾರೆ. ಆದ್ದರಿಂದ ಬಹುಶಃ ಈ ಕೇಸು ಸೈಬರ್ ಅಪರಾಧದ ವ್ಯಾಪ್ತಿಗೂ ಬರುತ್ತದೆ. ಹೀಗೆ ಅಗಾಧವಾಗಿರುವ ಈ ಪ್ರಕರಣದ ತನಿಖೆಯ ಹೊರೆಯನ್ನು ಕೇವಲ ಜಯನಗರ ಪೊಲೀಸರ ಹೆಗಲಿಗೆ ಕಟ್ಟುವುದು ಯಾವ ರೀತಿಯಿಂದಲೂ ಸೂಕ್ತವಲ್ಲ. ಆದ್ದರಿಂದ ಪೊಲೀಸ್ ಇಲಾಖೆ ಈ ಪ್ರಕರಣವನ್ನು ಬಹಳ ಗಂಭೀರವಾಗಿ ಪರಿಗಣಿಸಿ ಸಿಒಡಿ ತನಿಖೆಗೆ ಆದೇಶಿಸುವುದು ಯೋಗ್ಯ. ಆ ಮೂಲಕ ತನಿಖೆಯನ್ನು ವ್ಯಾಪಕಗೊಳಿಸಿ, ಆದಷ್ಟು ಶೀಘ್ರ ಈ ಜಾಲವನ್ನು ಬೇಧಿಸಲು ಅನುಕೂಲವಾಗುತ್ತದೆ. ನೂತನ ಡಿಜಿಪಿ ಮಾನ್ಯ ಇನ್‌ಫೆಂಟ್ ಅವರ ಅಲ್ಪ ಅವಧಿಯಲ್ಲಿ ಇಂಥದೊಂದು ಸಾಧನೆ ಮಾಡುವ ಅವಕಾಶ ಒದಗಿ ಬಂದಿದೆ. ಸಾಹೇಬರು ಇತ್ತ ಗಮನ ಹರಿಸುವರೆ?

ಶ್ ಗ್ಯಾರಂಟಿ ಪತ್ರವನ್ನೂ ನೀಡಿಲ್ಲ, ಅವರು ಹೇಳಿದ್ದಂತೆ ನಸ್ ಹಣವನ್ನೂ ಕೊಡಲಿಲ್ಲ. ಈಗ ಅವರು ತಮ್ಮ ವಾಪಸ್ ಕೊಡಿಸುವಂತೆ ಪೊಲೀಸರ ಮೊರೆ ೋಗಿದ್ದಾರೆ.

ಉತ್ತರ ಕರ್ನಾಟಕದ ಮತ್ತೊಬ್ಬ ರೈತ ಯುವಕ ಜಮೀನನ್ನು ಸ್ವಾಧೀನಪಡಿಸಿಕೊಂಡು ಕೆಐಎಡಿಬಿ ದ್ದ 23 ಲಕ್ಷಗಳನ್ನು ಏಜೆಂಟ್‌ಗಳ ಮಾತಿಗೆ ಮರುಳಾಗಿ ಣ್ ಶರ್ಮ ಅಂಡ್ ಗ್ಯಾಂಗ್‌ನ ಬಾಯಿಗೆ ಹಾಕಿ ತಪಿಸುತ್ತಿದ್ದಾನೆ. ಬಿಟಿಎಂ ಲೇಔಟ್‌ನ ಪ್ರಸನ್ನ ಬುವವರು ತಮ್ಮ ನಿವೃತ್ತಿಯಿಂದ ಬಂದ 11 ಲಕ್ಷಗಳನ್ನು ಮಕ್ಕಳ ಹೆಸರಿನಲ್ಲಿ ವೆಗಾಜೇಲ್‌ನಲ್ಲಿ ತೊಡಗಿಸಿ ದಿಕ್ಕುತೋಚದಂತಾಗಿದ್ದಾರೆ. ತುಮಕೂರಿನ ನಿವೃತ್ತ ರ್ ಒಬ್ಬರು 5 ಲಕ್ಷ ಹೂಡಲೇಬೇಕು ಎಂದು ಯಿಸಿದ ಏಜೆಂಟ್ ಮಿತ್ರನ ಮಾತಿಗೆ ಮಣಿದು ಕೈಯಲ್ಲಿದ್ದ ಹಣದ ಜೊತೆಗೆ ಮನೆಯಲ್ಲಿದ್ದ ನಗಳನ್ನೂ ಒತ್ತೆ ಇಟ್ಟು 5 ಲಕ್ಷ ರೂ. ತೊಡಗಿಸಿದ್ದಾರೆ, ಗೆ ಕಂಪನಿಯಿಂದ ಯಾವಾಗ ವಾಪಾಸ್ ಬರುತ್ತದೋ ು ಕಾಯುತ್ತಿದ್ದಾರೆ. ಗೋಪಿ ಎಂಬ ಅಂಗವಿಕಲನ ವನ್ನೂ ಸಹ ಈ ರಣಹದ್ದುಗಳು ಕಸಿದಿದ್ದಾರೆ ಎಂದರೆ ವನ್ನು ಮನುಷ್ಯರು ಅಂತಾ ಕರೆಯೋದಾದರೂ ಹೇಗೆ? ಕೆದಕಿದಂತೆಲ್ಲಾ ಭಿನ್ನವಿಭಿನ್ನವಾದ ಸಾವಿರಾರು ಕತೆಗಳು ಕೊಳ್ಳುತ್ತವೆ.

ಈ ಕಂಪನಿಯ ಡೈರೆಕ್ಟರ್‌ಗಳ ಪಟ್ಟಿಯನ್ನು ನಿಸಿ. ಶ್ರವಣ್ ಶರ್ಮ ಇದರ ಮುಖ್ಯಸ್ಥ. ಗಳೂರಿನಲ್ಲೇ ಇರುವ ಈತನ ಸುಪುತ್ರ ಕೇತ್ ಶರ್ಮ ಮತ್ತು ಈಗ ಹಾಲಿ ಫೋರ್ನಿಯ (ಅಮೆರಿಕ)ದಲ್ಲಿರುವ ಮತ್ತೊಬ್ಬ ರಿಷಭ್ ಶರ್ಮ ಇಬ್ಬರೂ ಕಂಪನಿ ಕ್ಟರ್‌ಗಳು. ಅಂದರೆ ಈತನ ಇಡೀ ಬಂಬವೇ ಈ ದಂಧೆಗಿಳಿದಿದೆ. ಪ್ರದೀಪ್‌ರಾಜ್ ಮಾ ಎಂಬ ಉತ್ತರ ಭಾರತೀಯ ಮತ್ತೊಬ್ಬ ಕ್ಟರ್. ಇದೇ ಬ್ಲೇಡ್ ದಂಧೆಯಲ್ಲಿ ಳುಗಿರುವ ಮಾರ್ವಾಡಿ ಲಲಿತ್ ಜೈನ್ ಎಂಬ ಂಡಿ ವೆಗಾಜೇಲ್‌ನ ಅನಧಿಕೃತ ಡೈರೆಕ್ಟರ್. ದೆ ಕಂಪನಿಯ ಹಣಕಾಸು ಮತ್ತು ಪತ್ರಗಳನ್ನು ನೋಡಿಕೊಳ್ಳುವವರು ಸಿದ್ಧಾರ್ಥ, ಮಲಾಲ್ ಶರ್ಮ, ಮೋಹನ್‌ಲಾಲ್ ಂತಾದವರು ಉತ್ತರ ಭಾರತೀಯರೇ. ಈ ನೆಯಲ್ಲಿ ಇವರ ಜೊತೆಗೆ ಕೈ ಜೋಡಿಸಿರುವ ಯರೆಂದರೆ ಸಿ.ವಿ.ಗುರುರಾಜ್- ಈತ ಬಳ್ಳಾಪುರದ ವೆಂಕಟಸ್ವಾಮಿ ಬುವವರ ಸಂತಾನ. ಮತ್ತೊಬ್ಬ ೕರ್ ಆನಂದ್- ಸದಾ ಟುಬೂಟು ಧರಿಸಿ ಖದರ್‌ನಲ್ಲಿ ಾಡುವ ಈತ ಮೂಲತಃ ಗಳೂರಿಗ. ಹಿಂದೊಮ್ಮೆ ಎಸ್ ಕಾಲೇಜಿನಲ್ಲಿ ಹೋಟೆಲ್ ನೇಜ್‌ಮೆಂಟ್ ಬಗ್ಗೆ ಪಾಠ ಡುತ್ತಿದ್ದ. ನಂತರ ಕಾಫಿ ಡೇ ಂತಾದ ಹೋಟೆಲ್‌ಗಳಲ್ಲಿ ದಷ್ಟು ಕಾಲ ಕೆಲಸ ಡಿದ್ದಾನೆ. ನಂತರ ಹೀಗೆ ಬಂ ಉದ್ಯೋಗ ಕಂಡುಕೊಂಡು ಪಿಕ್ಕವರ ಂಡಾಮೋಚುತ್ತಿದ್ದಾನೆ. ಡಗಿನ ಮೂಲದ ರಾಜೇಶ್ ದ್ದಪ್ಪ ಎಂಬ ಆಸಾಮಿ ಇದರ ಟಜಿಕ್ ಹೆಡ್ ಹುದ್ದೆಯಲ್ಲಿದ್ದಾನೆ, ಈ ಕಂಪನಿಯ ಜೆಯಲ್ಲಿ ಲೀಡರ್‌ಗಳು ಎಂದು ಕರೆಯಲಾಗುವ ಷ್ಟಿಟ ಏಜೆಂಟ್‌ಗಳಿಗೆ ತರಬೇತಿ ನೀಡುವುದು ತನ ಕಾಯಕ. ಈ ಪಟ್ಟಿಗೆ ಎಚ್‌ಎಸ್‌ಆರ್ ಔಟ್‌ನ ಬಿಲ್ಡರ್ ಮುಕುಂದರೆಡ್ಡಿಯನ್ನು ಈಗಿನ ಟ್ಟವನ್ನು ನಿಭಾಯಿಸಲೆಂದು ಹೊಸ ಡೈರೆಕ್ಟರ್ ಸೇರ್ಪಡೆ ಮಾಡಿದ್ದಾರೆ.

ಇತ್ತ ಶ್ರವಣ್ ಶರ್ಮ ಅರೆಸ್ಟ್ ಆಗುತ್ತಿದ್ದಂತೆ ಬಹಳ ಂದಿ ಡೈರೆಕ್ಟರ್‌ಗಳು ತಮ್ಮ ಫೋನ್‌ಗಳನ್ನು ಸ್ವಿಚ್‌ಆಫ್ ಡಿ, ನಾಪತ್ತೆಯಾಗಿದ್ದಾರೆ. ನಿರಂತರ ಪ್ರಯತ್ನದ ನಂತರ ಜೇಶ್ ಬಿದ್ದಪ್ಪ ಎಂಬ ಸ್ಟ್ರಾಟಜಿಕ್ ಹೆಡ್ ಫೋನ್‌ಗೆ , ಈ ಅಪವಹಾರದ ಬಗ್ಗೆ ವಿಚಾರಿಸಲಾಗಿ "ಅದರ ಗ್ಗೆ ನನಗೇನೂ ಗೊತ್ತಿಲ್ಲ, ನಾನು ಅಲ್ಲಿಗೆ ಹೋಗಿ ಡುವರೆ ತಿಂಗಳಾಯ್ತು" ಅಂದ. "ಹೋಗಲಿ, ಅದಕ್ಕೆ ಂಚೆ ಏನು ನಡೀತಿತ್ತು ಅಂತಾದರೂ ಹೇಳಿ ಸ್ವಾಮಿ" ದರೆ "ನಾನು ಜಸ್ಟ್ ಔಟ್ ಸೈಡರ್ ಸಾರ್ ನನಗೇನೂ ೕತಿರಲಿಲ್ಲ" ಅಂದುಬಿಟ್ಟ. "ಅಲ್ಲಾರೀ ನೀವು ಆ ಪನಿಯ ಒಬ್ಬ ಡೈರೆಕ್ಟರ್ ಆಗಿ ಈ ಥರಾ ಹೇಳಿದರೆ ಗೆ ಅಂತಾ ಕೇಳಿದ್ರೆ, ನಾನು ಜಸ್ಟ್ ಅಡ್ವೈಸ್ ಮಾಡ್ತಾ ದ್ದೆ ಅಷ್ಟೆ ಸಾರ್" ಅಂದ. "ಈ ಥರಾ ಕಳ್ಳ ಮಾರ್ಗದಲ್ಲಿ ೋಗಬೇಡಿ, ಒಳ್ಳೇ ರೀತೀಲಿ ಬಾಳಿ ಅಂತಾ ಅವರಿಗೆ ಅಡ್ವೈಸ್ ಮಾಡ್ತಾ ಇದ್ದರಾ?" ಅಂತ ಕೇಳುತ್ತಿದ್ದಂತೆ ನನಗೆ ಹುಷಾರಿಲ್ಲ, ದಯವಿಟ್ಟು ಬಿಟ್ಟುಬಿಡಿ ಸಾರ್ ಅಂತ ಹೇಳಿ ಕಟ್‌ಮಾಡೇಬಿಟ್ಟ ಆಸಾಮಿ. ಅಂದಹಾಗೆ ಈ ಬಿದ್ದಪ್ಪ ಏಜೆಂಟ್‌ಗಳು ಜನರನ್ನು ಹೇಗೆ ಯಾಮಾರಿಸಬೇಕು ಎಂಬ ಬಗ್ಗೆ ಟ್ರೈನಿಂಗ್ ಕೊಡುತ್ತಿದ್ದ ಎಂಬುದನ್ನು ನಾವು



ವೆಗಾಜೇಲ್ ಕಂಪೆನಿಯ ಕಚೇರಿ

ಮರೆಯುವಂತಿಲ್ಲ. ಈಗ ಆರೋಪಿಗಳು ನಿರೀಕ್ಷಣಾ ಜಾಮೀನಿಗೆ ಪ್ರಯತ್ನಿಸುತ್ತಿದ್ದಾರೆಂದು ಸುದ್ದಿ. ಇದೇ ಬುಧವಾರ ಕೋಟುಧಾರಿ ಸುಧೀರ್ ಆನಂದ್ ಪೊಲೀಸ್ ಠಾಣೆಯಲ್ಲಿ ಕುಳಿತು ಮೊಬೈಲ್ ಸಂಭಾಷಣೆಯಲ್ಲಿ ನಿರತನಾಗಿದ್ದ ಧಾಟಿ ನೋಡಿದರೆ ಈ ಖೂಳರು ಈ ಕೇಸುಗಳ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ.

ಒಟ್ಟಾರೆ ಈ ಜಾಲದ ಕಾರ್ಯಾಚರಣೆಯ ಶೈಲಿಯನ್ನು ನೋಡಿದರೆ ಇವರು ಈ ಫೀಲ್ಡ್‌ನಲ್ಲಿ ತುಂಬಾನೇ ಪಳಗಿರುವ ಆಸಾಮಿಗಳು ಎಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ಆದ್ದರಿಂದ ಈ ಹಿಂದೆ ಯಾರ್‍ಯಾರಿಗೆ ಎಲ್ಲೆಲ್ಲಿ ತಲೆಬೋಳಿಸಿದ್ದಾರೆ ಎಂಬುದನ್ನು ಪೊಲೀಸ್ ಇಲಾಖೆ ಕೂಲಂಕಷವಾಗಿ ಪರಿಶೀಲಿಸಬೇಕು.

ಹೆಡ್‌ಕ್ವಾರ್ಟರ್‌ನಲ್ಲಿರುವ ಈ ಮಹಾನುಭಾವರಲ್ಲದೆ ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಕಾರ್ಯಾಚರಣೆ ನಡೆಸಿ ಜನರನ್ನು ಹಳ್ಳಕ್ಕೆ ಕೆಡವಿ, ಈ ದಂಧೆಯಲ್ಲಿ ಕಮೀಷನ್ ಪಡೆದು ತೇಗುತ್ತಿರುವ ಹಲವಾರು ಖತರ್‌ನಾಕ್ ಮೀರ್‌ಸಾಧಕ್‌ಗಳಿದ್ದಾರೆ. ಪ್ರಮುಖರೆಂದರೆ ಮೈಸೂರಿನ ಚಂದ್ರು, ನೆಲಮಂಗಲದ ಬಿ.ವಿ.ಚಂದ್ರಶೇಖರ್, ತುಮಕೂರಿನ ಲೀಡರ್ ಬೆಳ್ಳೂರು ಕಾಂತರಾಜು, ಫ್ರಾಡ್‌ಗಳಲ್ಲಿ ಪಳಗಿರುವ ಬೆಂಗಳೂರಿನ ಭಾರತಿ ಮತ್ತು ಆಕೆಯ ತಮ್ಮ ಬಾಬು, ಎಂ.ಬಿ.ದೀಪು... ಹೀಗೇ ಪಟ್ಟಿ ಮುಂದುವರೆಯುತ್ತದೆ.

ಈ ನೆಟ್‌ವರ್ಕ್ ಲೀಡರ್‌ನ ಅಡಿಯಲ್ಲಿ ಹತ್ತಾರು ಏಜೆಂಟ್‌ಗಳಿರುತ್ತಾರೆ. ಒಂದು ಅರ್ಥದಲ್ಲಿ ಯಶಸ್ವಿಯಾಗಿ ಈ ದಂಧೆ ನಡೆಯಬೇಕಾದರೆ ಈ ಲೀಡರ್‌ಗಳೇ ಕಾರಣ. ಸಾರ್ವಜನಿಕರ ಕೋಟ್ಯಾಂತರ ರೂಪಾಯಿಗಳನ್ನು ನಿರ್ನಾಮ ಮಾಡಿ ತಾವು ಮಾತ್ರ ಲಕ್ಷಾಂತರ ಕಮೀಷನ್ ಪಡೆದು ಬೆಚ್ಚಗಿರುವವರ ಇಂಥವರ ಬಗ್ಗೆ ಸರಿಯಾದ ತನಿಖೆಯಾಗಿ ಈ ತಲೆಹಿಡುಕರನ್ನು ಮಟ್ಟ ಹಾಕಿದರೆ ಬ್ಲೇಡ್ ದಂಧೆಗೆ ಕಡಿವಾಣ ಹಾಕಬಹುದು.

ಈ ನೆಟ್‌ವರ್ಕ್ ಮಾರ್ಕೆಟಿಂಗ್‌ನ ಪ್ರಾದೇಶಿಕ ಕಚೇರಿಗಳು ಈಗ ಹಾಲಿ ಹೈದರಾಬಾದ್, ದೆಹಲಿ, ಕೋಲ್ಕೊತ್ತಾ, ಸಿಲ್‌ಗುರಿಗಳಲ್ಲಿರುವುದಾಗಿಯೂ ಹಾಗೂ ಚೆನ್ನೈ, ಪೂನಾ, ನಾಗ್‌ಪುರ, ಮುಂಬೈ, ಕೊಯಮತ್ತೂರು ಮುಂತಾದ ಕಡೆ ಶೀಘ್ರದಲ್ಲೇ ಪ್ರಾರಂಭಿಸುವುದಾಗಿ ವೆಗಾಜೇಲ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.


ಈಗ ಲಭ್ಯವಿರುವ ಮಾಹಿತಿ ಪ್ರಕಾರ ಈಗಾಗಲೇ ರಾಜಸ್ಥಾನಕ್ಕೆ ತಮ್ಮ ಬ್ಲೇಡ್ ದಂಧೆಯನ್ನು ವಿಸ್ತರಿಸಿದ್ದಾರೆ. ಕೇರಳದಲ್ಲೂ ಹಲವು ಮಂದಿಗೆ ಈಗಾಗಲೇ ವೆಗಾಜೇಲ್‌ನ ಟೋಪಿ ಬಿದ್ದಿದ್ದು ಈ ಬಗ್ಗೆ ಆಗಲೇ ದೂರುಗಳು ಕೇಳಿಬಂದಿವೆ. ಲಕ್ನೋ ನಗರದ ಹಜರತ್‌ಗಂಜ್‌ನಲ್ಲಿ ಪ್ರಾರಂಭ ಮಾಡಿದ್ದ ವೆಗಾಜೇಲ್ ಪ್ರಾದೇಶಿಕ ಕಚೇರಿಯನ್ನು ಇತ್ತೀಚೆಗೆ ಮುಚ್ಚಲಾಗಿದೆ. ಕಾರಣ ನಿರೀಕ್ಷೆಯಂತೆ ಈ ಹಲಾಲುಕೋರರು ಹಣ ಪಾವತಿ ಮಾಡದಿದ್ದಕ್ಕೆ ಬೇಸತ್ತ ಜನ ಕಚೇರಿ ಮುಂದೆ ಗಲಾಟೆ ಮಾಡಿ, ಮಾಮೂಲಿಯಂತೆ ಕೇಸ್ ದಾಖಲಾಗಿ ಕಚೇರಿಯನ್ನು ಮುಚ್ಚಿಸಲಾಗಿದೆ. ಸಹರಾ ನ್ಯೂಸ್ ಚಾನೆಲ್‌ನಲ್ಲಿ ಕೆಲಸ ಮಾಡುವ ಮನೀಶ್ ತಿವಾರಿ ಎಂಬುವವರು ಗೆಳೆಯರೊಬ್ಬರ ಒತ್ತಾಯಕ್ಕೆ ಮಣಿದು ಈ ನೆಟ್‌ವರ್ಕ್‌ಗೆ ಸೇರಿಕೊಂಡು ಹಣ ಕಳೆದುಕೊಂಡಿದ್ದಾರೆ. ಅವರಿಗೆ ಫೋನಾಯಿಸಿದಾಗ ಹೇಗಾದರೂ ಮಾಡಿ ತಮ್ಮ ಹಣ ವಾಪಾಸ್ ಕೊಡಿಸುವಂತೆ ನಮ್ಮ ತನಿಖಾ ತಂಡಕ್ಕೇ ದುಂಬಾಲು ಬಿದ್ದರು. ಲಕ್ನೋದಿಂದ ಹಲವರು ಬೆಂಗಳೂರಿನ ಹೆಡ್‌ಆಫೀಸಿಗೂ ಬಂದು ಗಲಾಟೆ ಮಾಡಿಹೋಗಿದ್ದಾರೆ.

ಹೀಗೆ ಕೆದಕುತ್ತಾ ಹೋದಂತೆಲ್ಲಾ ಹನುಮಂತನ ಬಾಲದಂತೆ ಬೆಳೆಯುವ ಈ ಬ್ಲೇಡ್ ಜಾಲದ ವಿಸ್ತಾರ ನಮ್ಮ ಊಹೆಗೂ ನಿಲುಕುವುದಿಲ್ಲ. ಈ ಬಗ್ಗೆ ಕಂಪನಿಯ ಡೈರೆಕ್ಟರ್ ಲಲಿತ್ ಜೈನ್ ಅವರನ್ನು ಪ್ರಶ್ನಿಸಿದಾಗ ಅವರು ಹೇಳಿದ್ದಿಷ್ಟು. "ಕರ್ನಾಟಕ್ ಔರ್ ಆಂಧ್ರ ಮೇ ಹಮಾರಾ ಬ್ಯುಸಿನೆಸ್ ಅಚ್ಛಾ ಚಲ್‌ರಹಾ ಹೈ, ಬಾಕೀ ಜಗಹ್ ಮೆ ತೋಡಾ ತೋಡಾ ಹೈ." ಈ ಜಾಲವನ್ನು ಯಾವುದೇ ಕಾರಣಕ್ಕೂ ಲಘುವಾಗಿ ಪರಿಗಣಿಸಿ ಬಿಟ್ಟುಬಿಡುವಂತಿಲ್ಲ. ಒಂದುವೇಳೆ ಇವರೇನಾದರೂ ಬಚಾವಾದರೆ ಒಂದಲ್ಲಾ ಒಂದು ರೀತಿಯಲ್ಲಿ ಬ್ಲೇಡ್ ಹಾಕುವ ದಂಧೆ ಮುಂದುವರೆಸುವುದು ಖಚಿತ.

ಶ್ರವಣ್ ಶರ್ಮನನ್ನು ಆದಷ್ಟು ಶೀಘ್ರ ಜಾಮೀನಿನ ಮೇಲೆ ಬಿಡುಗಡೆ ಮಾಡಿಸಿಕೊಳ್ಳುತ್ತೇವೆ ಎಂದು ಕಂಪನಿಯ ಜನರು ವಿಶ್ವಾಸದಲ್ಲಿದ್ದಾರೆ. 13 ನೇ ತಾರೀಖಿನವರೆಗೆ ಪೊಲೀಸ್ ಕಸ್ಟಡಿ ಇದೆಯಲ್ಲಾ ಜಾಮೀನು ಹೇಗೆ ಸಿಗುತ್ತೆ ಅಂತ ಪ್ರಶ್ನಿಸಿದರೆ ಅದೇನೂ ಸಮಸ್ಯೆಯಿಲ್ಲ, ಇನ್ನೂ ಎರಡು ಮೂರು ದಿನಗಳಲ್ಲಿ ಮತ್ತೆ ಅವರನ್ನು ಜೆ.ಸಿ.ಗೆ ಕೊಟ್ಟುಬಿಡ್ತಾರೆ. ಅದಾದ ತಕ್ಷಣ ಬೇಲ್ ಆಗಿಬಿಡುತ್ತೆ ಅಂತಾ ಬಹಳ ಆತ್ಮವಿಶ್ವಾಸದಿಂದ ಕಂಪನಿ ವಕ್ತಾರರು ಮಾತಾಡುತ್ತಿದ್ದಾರೆ ಅಂತ ವಿಶ್ವಸನೀಯ ಮೂಲಗಳಿಂದ ಸುದ್ದಿ. ಎಲ್ಲಕ್ಕಿಂತ ಮಿಗಿಲಾಗಿ ಈಗ ಹಾಕಿರುವ ಕೇಸಿನಲ್ಲಿ ಅಷ್ಟೇನೂ ಬಲವಿಲ್ಲ, ಆರಾಮಾಗಿ ಜಾಮೀನು ಸಿಕ್ಕಿಬಿಡುತ್ತೆ ಅಂತ ಕೇಸಿನ ಎಫ್‌ಐಆರ್ ಪರಿಶೀಲಿಸಿದ ನುರಿತ ವಕೀಲರೊಬ್ಬರ ಅಭಿಪ್ರಾಯ. ಇಂಥಾ ಎಲ್ಲಾ ರೂಮರ್‌ಗಳಿಗೆ, ಅನುಮಾನಗಳಿಗೆ ತೆರೆ ಎಳೆಯುವಂತೆ ಈ ಪ್ರಕರಣದ ತನಿಖೆ ನಡೆಯಲಿ, ನೊಂದವರಿಗೆ ನ್ಯಾಯ ಸಿಗಲಿ ಎಂಬುದೇ ನಮ್ಮ ನಿಮ್ಮೆಲ್ಲರ ಹಾರೈಕೆ... ಅಲ್ಲವೇ?

ವೆಗಾಜೇಲ್‌ನ ಪ್ರಮುಖರ ದೂರವಾಣಿ ಪಟ್ಟಿ

ಶ್ರವಣ್ ಶರ್ಮ	- 9844035538
ಸಿ.ವಿ.ಗುರುರಾಜ್	- 9886036454
ಲಲಿತ್ ಜೈನ್	- 9449857656
ಮುಕುಂದ್ ರೆಡ್ಡಿ	- 9343827572
ರಾಜೇಶ್ ಬಿದ್ದಪ್ಪ	- 9449847772/ 9449847783
ಎಂ.ಬಿ. ದೀಪು	- 9945569986
ಭಾರತಿ	- 9379943202
ಅರುಣ್	- 9886047527
ಟಿ.ಪಿ.ಮಂಜುನಾಥ್	- 9341846011



ಯಡ್ಡಿ ಆಫ್ ಸದಾನಂದ ಸೇಫ್

ಕರ್ನಾಟಕ ಬಿಜೆಪಿ ಪಾರ್ಟಿಯೊಳಗೆ ಯಡಿಯೂರಪ್ಪನವರ ಸರ್ವಾಧಿಕಾರದ ದಿನಗಳು ಮುಗಿದಂತೆ ಕಾಣುತ್ತಿದೆ.

ಬಿಜೆಪಿ ಹೈಕಮಾಂಡ್ ಹಾಗೂ ರಾಜ್ಯ ಬಿಜೆಪಿ ನಾಯಕರು ಯಡ್ಡಿಯನ್ನು ದೂರ ತಳ್ಳುತ್ತಿರುವುದು ಇದುವರೆಗಿನ ವಿದ್ಯಮಾನವಾಗಿತ್ತು, ಈಗ ನೋಡಿದರೆ ಸಾಕ್ಷಾತ್ ಯಡ್ಡಿ ಕ್ಯಾಂಪಿನಿಂದಲೇ ಬೆಂಬಲಿಗ ಶಾಸಕರು ದೂರ ಸರಿಯಲು ಶುರು ಮಾಡಿದ್ದಾರೆ!


ಯಡ್ಡಿಯ ಅಧಿಕಾರ ದಾಹ ಮತ್ತು ನಿತ್ಯ ಬಂಡಾಯಗಳೆಲ್ಲಾ ನಿರರ್ಥಕ ಕಸರತ್ತು ಎನ್ನುವ ಶಾಸಕರ ಭಾವನೆಯೇ ಇದಕ್ಕೆ ಕಾರಣವಾಗಿದೆ. ಯಡ್ಡಿಯ ಕಟ್ಟಾ ಬೆಂಬಲಿಗರಂತೆ ಇದುವರೆಗೂ ಪೋಜು ಕೊಡುತ್ತಿದ್ದವರೆಲ್ಲಾ ಈಗ ಖಾಸಗಿಯಾಗಿ ಏನೇನು ಕತೆ ಹೇಳುತ್ತಿದ್ದಾರೆಂಬುದು ಇಂಟೆರೆಸ್ಟಿಂಗಾಗಿದೆ.

ವಿ.ಸೋಮಣ್ಣನಿಗೆ ಯಡ್ಡಿಯ ಪರ ಕೂಗು ಹಾಕಿ ಸಾಕಾದಂತಿದೆ. ಹಾಗಾಗಿ ಸದಾನಂದ ಗೌಡರೊಂದಿಗೆ ಆತ್ಮೀಯರಾಗಿರುವ ಒಬ್ಬರೊಂದಿಗೆ ಇತ್ತೀಚೆಗೆ ಮಾತನಾಡುತ್ತಾ ಯಡಿಯೂರಪ್ಪನವರಿಗೂ ಸಿ.ಎಂ.ಗೂ ಕಾಂಪ್ರಮೈಸ್ ಮಾಡಿಸಿಬಿಡಿ ಸಾರ್ ಎಂದು ಅಲವತ್ತುಕೊಂಡಿದ್ದಾರೆ. ಅಷ್ಟೇ ಅಲ್ಲದೆ "ಸದಾನಂದ ಗೌಡರು ಒಳ್ಳೆಯವರು, ನಮ್ಮ ಖಾತೆಗಳ ವಿಷಯದಲ್ಲಿ ತಲೆ ಹಾಕಲ್ಲ, ಕಿರಿಕಿರಿ ಮಾಡಲ್ಲ, ಏನ್ ಮಾಡೋದು ಯಡಿಯೂರಪ್ಪನವರ ಋಣ ತಿಂದಿದ್ದೇವೆ. ಹಾಗಾಗಿ ಜೊತೆಯಲ್ಲಿದ್ದೀನಿ ಅಷ್ಟೇ" ಅಂತಲೂ ಗೋಳಾಡುತ್ತಿದ್ದಾರೆ.

ರಾಜ್ಯ ಬಿಜೆಪಿಯೊಳಗಿನ ಅಧಿಕಾರದ ಕಚ್ಚಾಟದ ಬೆಂಕಿ ಇನ್ನು ಮುಂದೆ ದೊಡ್ಡದಾಗಲಾರದೆಂಬುದನ್ನು ಇದು ತೋರಿಸುತ್ತಿದೆ.

ಯಡ್ಡಿ ಹಾಗೂ ಸದಾನಂದ ಗೌಡರ ನಡುವೆ ಕಾಂಪ್ರಮೈಸ್ ಆಗಲಿ ಎಂಬ ಅನಿಸಿಕೆ ಸ್ವತಃ ಯಡ್ಡಿಗಿದೆಯೋ ಇಲ್ಲವೊ ಆದರೆ ಯಡ್ಡಿ ಬೆಂಬಲಿಗರ ಶಾಸಕರಿಗಂತೂ ಆ ಅಭಿಪ್ರಾಯ ಇರುವಂತಿದೆ. ಇದಕ್ಕೆ ಒಂದು ಡಜನ್ ಕಾರಣಗಳಿರಬಹುದು.

ಬಿಜೆಪಿ ಹೈಕಮಾಂಡ್ ಯಡ್ಡಿಯ ಗಲಾಟೆಗಳನ್ನು ಕೇರ್ ಮಾಡುವುದಿಲ್ಲ ಎನ್ನುವುದು ಅನೇಕ ಸಾರಿ ಸಾಬೀತಾಗಿದೆ. ಜೊತೆಗೆ ಸದಾನಂದ ಗೌಡರು ಹೈಕಮಾಂಡ್‌ನೊಂದಿಗೆ ವಿಧೇಯರಾಗಿರುತ್ತಾ ಪಾರ್ಟಿ ನಾಯಕರನ್ನು ಖುಷಿಯಾಗಿಟ್ಟಿದ್ದಾರೆ. ಅದೇ ಸಮಯದಲ್ಲಿ ಸಿ.ಎಂ. ಹುದ್ದೆ ಕೈತಪ್ಪಿ ಹೋಗದಂತೆ ನಿತ್ಯ ಹೊಸ ದಾಳ ಉರುಳಿಸುತ್ತಿದ್ದಾರೆ. ಪಾರ್ಟಿ ರಾಜ್ಯಾಧ್ಯಕ್ಷ ಈಶ್ವರಪ್ಪನವರ ಬೆಂಬಲವೂ ಅವರಿಗೆ ಧೈರ್ಯ ತುಂಬುತ್ತಿದೆ. ಮತ್ತೊಂದೆಡೆ ಯಡ್ಡಿ ಕ್ಯಾಂಪ್‌ನಲ್ಲಿದ್ದ ಸಚಿವ-ಶಾಸಕರುಗಳ ಹತಾಶೆ ಏನೆಂದರೆ, ಅವರೆಲ್ಲಾ ಬಯಸಿದಂತೆ ತಕ್ಷಣದಲ್ಲಿ ಯಡ್ಡಿಗೆ ಸಿ.ಎಂ. ಕುರ್ಚಿ ಸಿಕ್ಕರೆ ಮಾತ್ರ ಇವರೆಲ್ಲಾ ರಾಜಕೀಯವಾಗಿ ಸೇಫ್ ಆಗುತ್ತಾರೆ. ಹಾಗಾಗದೆ ಯಡ್ಡಿಯ ನಿತ್ಯ ಬೀದಿ ಜಗಳದಲ್ಲಿ ಮೊದಲಿನಂತೆ ಕಾಣಿಸಿಕೊಳ್ಳುತ್ತಾ ಹೋದರೆ ಮುಂದೆ ಕಷ್ಟವಾಗಲಿದೆ ಎನ್ನುವ ಆತಂಕ ಅವರಿಗೆ.



ದಿನಾ ಜಗಳ ತೆಗೆಯುವುದರ ಬದಲಾಗಿ ಇನ್ನುಳಿದಿರುವ ಒಂದೂವರೆ ವರ್ಷ ಅಧಿಕಾರವನ್ನು ಉಪಯುಕ್ತವಾಗಿ ಬಳಸಿಕೊಂಡು ಸಾಕಷ್ಟು ಹಣ ಮಾಡಿಕೊಂಡು ಹಿಂಬಾಲಕರಿಗೂ ಕೊಂಚ ತಿನ್ನಿಸಿ ಕ್ಷೇತ್ರದ ಅಭಿವೃದ್ಧಿಗೂ ಗಮನ ಕೊಟ್ಟರೆ ಒಳ್ಳೆಯದಲ್ಲವಾ ಅನಿಸಿಬಿಟ್ಟಿದೆ ಇವರಿಗೆ.

ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಗೆಲ್ಲಬೇಕೆಂದರೆ, ಅದಕ್ಕೂ ಮೊದಲು ಬಿಜೆಪಿ ಟಿಕೆಟ್ ಸಿಗಬೇಕೆಂದರೆ ಈ ಬಂಡಾಯ ಶಾಸಕರಿಗೆ ಈ ತಕ್ಷಣ ಯುದ್ಧ ವಿರಾಮ ಘೋಷಿಸದೆ ವಿಧಿಯಿಲ್ಲದಂತಾಗಿದೆ.

ಹೀಗೆ ಯೋಚಿಸುತ್ತಿರುವವರ ಪೈಕಿ ಒಬ್ಬರಾದ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಯಡ್ಡಿ ಹತ್ತಿರ ಕುಳಿತು "ಸಾರ್, ಈಗ ನೀವು ಸುಮ್ಮನೆ ಪಾರ್ಟಿ ಪ್ರೆಸಿಡೆಂಟ್ ಸ್ಥಾನ ಒಪ್ಪಿಕೊಳ್ಳಿ. ಇನ್ನೊಂದು ವರ್ಷದಲ್ಲೇ ಎಲೆಕ್ಷನ್ ಬರುತ್ತೆ, ಆಗ ಮೆಜಾರಿಟಿ ಸಿಕ್ಕರೆ ಸಿ.ಎಂ. ಆಗಬಹುದು. ನಾವೆಲ್ಲಾ ಆಗಲೂ ನಿಮ್ಮ ಪರವಾಗೇ ಮಾತಾಡ್ತೀವಿ" ಎಂದು ಪುಸಲಾಯಿಸಿದ್ದಾರೆ. ಈ ರಾಜಿಕಬೂಲಿಯ ಮಾತುಗಳು ಯಡ್ಡಿಗೆ ಕಿರಿಕಿರಿ ಉಂಟು ಮಾಡಿದರೂ, ತನಗೆ ಮೊದಲಿನಂತೆ ಶಾಸಕರ ಬೆಂಬಲವಿಲ್ಲ ಎನ್ನುವುದು ಯಡ್ಡಿಗೂ ಮನವರಿಕೆಯಾಗಿದೆ. ಲಿಂಗಾಯತ ಶಾಸಕರೆಲ್ಲಾ ತನ್ನ ಹಿಂದೆ ಇದ್ದಾರೆಂದು ಯಡ್ಡಿ ಅದೆಷ್ಟೇ ಚೀರಿಕೊಂಡರು ಅದು ನಿಜ ಸಂಗತಿಯಲ್ಲ.



ಸಾರ್ವಭೌಮ ಬಗಲಿ, ಬೆಳ್ಳುಬ್ಬಿ ವೀರಣ್ಣ ಚರಂತಿಮಠ, ರಾಜೂ ಕಾಗೆ, ಅಭಯ ಪಾಟೀಲ, ಸೊಗಡು ಶಿವಣ್ಣ ರವೀಂದ್ರನಾಥ್ ಸೇರಿದಂತೆ ಕನಿಷ್ಠ ಒಂದು ಡಜನ್ ಲಿಂಗಾಯತ ಶಾಸಕರಿಗೆ ಯಡ್ಡಿಯ ನಾಯಕತ್ವ ಬೇಕಾಗಿಲ್ಲ. ಇದಕ್ಕೆ ಹಳೆಯ ಸೇಡು, ಯಡ್ಡಿ ಸಿ.ಎಂ. ಆಗಿದ್ದಾಗ ತೋರಿದ್ದ ನಿರ್ಲಕ್ಷ್ಯಗಳು ಕಾರಣವಾಗಿದೆ. ಇದಲ್ಲದೆ ಲೋಕಲ್ ಡೈನಾಮಿಕ್ಸ್‌ಗಳು ಪ್ರಭಾವ ಬೀರುತ್ತಿವೆ. ಬರೀ ಯಡ್ಡಿ ಅಥವಾ ಲಿಂಗಾಯತರ ಹೆಸರು ಹೇಳಿಕೊಂಡು ನಾಳೆ ಚುನಾವಣೆಗೆ ಹೋದರೆ ಸೋಲುವ ಸಾಧ್ಯತೆ ಇವರಿಗೆಲ್ಲಾ ಈಗಲೇ ಕಾಣುತ್ತಿದೆ. ಯಡ್ಡಿ ಕ್ಯಾಂಪಿನಲ್ಲಿದ್ದ ಕಟ್ಟಾಳುಗಳ ಇನ್ನೊಂದು ಸಮಸ್ಯೆ ಏನೆಂದರೆ ತಮ್ಮ ಸರ್ಕಾರ ಹಾಗೂ ಪಕ್ಷದ ವಿರೋಧ ಕಟ್ಟಿಕೊಂಡರೆ ದುಡ್ಡು ಮಾಡಲಾಗುವುದಿಲ್ಲ ಎಂಬ ಭಯ.

ನಿರಾಣಿ ತರದವರಿಗೆ ತಮ್ಮ ಉದ್ಯಮ ಸಾಮ್ರಾಜ್ಯದ ಪೋಷಣೆಗೆ ಹಾಗೂ ರಾಜಕೀಯ ಭವಿಷ್ಯದ ರಕ್ಷಣೆಗೆ ಸಿಕ್ಕಾಪಟ್ಟೆ ಹಣ ಬೇಕಾಗಿದೆ. ದುಡ್ಡು-ಅಧಿಕಾರ ಎರಡೂ ಸಿಗುವ ಸದಾನಂದ ಗೌಡರೊಂದಿಗೆ ಮುನಿಸಿಕೊಂಡು ಹಣ, ಅಧಿಕಾರ ಯಾವುದು ಸಿಗದ ಯಡ್ಡಿ ಜೊತೆ ಇವರು ತಾನೆ ಯಾಕಿರುತ್ತಾರೆ ಹೇಳಿ?

ಸರ್ಕಾರದೊಳಗೆ ಸಂಘ ಪರಿವಾರ

ಯಡ್ಡಿ ಬೆಂಬಲಿಗರ ಬಾಲ ಕಟ್ ಮಾಡಲು ಬಿಜೆಪಿ ನಾಯಕರು ಈಗ ಹೊಸ ತಂತ್ರ ಹೂಡಿದ್ದಾರೆ. ಸಂ[illegible] ಪರಿವಾರದ ಅನೇಕ ಹಿರಿಯ ತಲೆಗಳನ್ನು ಬೇರೆ ಬೇ[illegible] ಇಲಾಖೆಗಳ ಕೆಲಸ ಕಾಯಕಗಳ ಮೇಲೆ ನಿಗಾ ಇಡಲ[illegible] ಈಗ ಅನಧಿಕೃತವಾಗಿ ನೇಮಿಸಲಾಗಿದೆ. ಈಗ ಸದಾನಂ[illegible] ಗೌಡರ ಕೈಯಲ್ಲೇ ಸುಮಾರು ಇಪ್ಪತ್ತೆರಡು ಖಾತೆಗಳಿ[illegible] ಇವೆಲ್ಲವನ್ನು ಏಕಕಾಲಕ್ಕೆ ನಿಭಾಯಿಸುವಂತಹ ದಕ್ಷತೆಯೇನ[illegible] ಗೌಡರಿಗಿಲ್ಲ. ಆದರೂ [illegible] ಇಲಾಖೆಗಳ ಕೆಲಸ ಕಾರ್ಯಗ[illegible] ತಕ್ಕಮಟ್ಟಿಗೆ ನಡೆದುಕೊಂಡ[illegible] ಹೋಗುವಂತೆ ಈ ಸಂಘ ಪ[illegible] ವಾರಗಳೇ ನೋಡಿಕೊಳ್ಳುತ್ತಿ[illegible] ಅದೇ ರೀತಿ ಯಡ್ಡಿ ಬೆಂಬಲಿ[illegible] ಸಚಿವ-ಶಾಸಕರುಗಳ ಕೆಲ[illegible] ಕಾರ್ಯಗಳ ಮೇಲೂ ಒಂದ[illegible] ತರದ Check and Balance ಇಡುವ ಆರ್‌ಎಸ್‌ಎಸ್ ವಿಧಾನವೊಂದನ್ನು ಸೈಲೆಂಟಾ[illegible] ಜಾರಿಗೆ ತರಲಾಗಿದೆ. ಹಾಗಾ[illegible] ಬಂಡಾಯ ಶಾಸಕರಿಗೆ ಈಗ "ಸುಮ್ಮನಿದ್ದರೆ ಲಾಭ ನಮ್ಮದ[illegible] ದಂಗೆಯೆದ್ದರೆ ಕಷ್ಟ ತಪ್ಪದು" ಎನ್ನುವಂತಾ ಸ್ಥಿತಿ.

ಈ ನಡುವೆ ಸರ್ಕಾರದ ದಿನನಿತ್ಯದ ಕೆಲಸಗಳ[illegible] ಯಡ್ಡಿಯ ಹತೋಟಿಯನ್ನು ಅಳಿಸಿ ಹಾಕುವ ಕೆಲಸವ[illegible] ನಡೆದಿದೆ. ಮುಖ್ಯಮಂತ್ರಿಗಳ ಕಾರ್ಯಾಲಯದಲ್ಲಿದ್ದ ಅನೇ[illegible] ಪ್ರಮುಖ ಯಡ್ಡಿ ನಿಷ್ಠ ಅಧಿಕಾರಿಗಳನ್ನು ಸದಾನಂದ ಗೌಡ[illegible] ಎತ್ತಿ ಆಚೆಗೆಸೆದಿದ್ದಾರೆ. ತೀರಾ ಇತ್ತೀಚೆಗೆ ಸಿ.ಎಂ. ಮಾಧ್ಯ[illegible] ಸಲಹೆಗಾರರಾಗಿದ್ದ ಆರ್.ಪಿ.ಜಗದೀಶ್ ಹೊರಹಾಕಲ್ಪಟ್ಟಿದ್ದಾ[illegible] ತುಮಕೂರು ಜಿಲ್ಲಾಧಿಕಾರಿಯಾಗಿದ್ದ ಯಡ್ಡಿ ಹಾಗ[illegible] ಸಿದ್ಧಗಂಗಾ ಸ್ವಾಮಿಯ ಶಿಷ್ಯ ಸಿ.ಸೋಮಶೇಖರ್ ಕೂ[illegible] ವರ್ಗ ಆಗಿದ್ದಾರೆ. ಅವರ ಜಾಗಕ್ಕೆ ಡಿ.ಸಿ.ಯಾಗಿ ಬಂದಿರು[illegible] ಆರ್.ಕೆ ರಾಜು ದಾವಣಗೆರೆ ಬಿ.ಜೆ.ಪಿ ಸಂಸದ ಸಿದ್ದೇಶ್ವರ[illegible] ಅಳಿಯ. ಈ ಸಿದ್ದೇಶ್ ಯಡ್ಡಿಯ ಬೆಂಬಲಿಗರ[illegible] ಎಂಬುದಿಲ್ಲಿ ಗಮನಾರ್ಹ.

ಇದೆಲ್ಲದರ ಸಾರಾಂಶವಿಷ್ಟೆ. ಬಿಜೆಪಿಯ ಕೇಂದ್ರ ಹಾಗ[illegible] ರಾಜ್ಯ ನಾಯಕರು ಯಡ್ಡಿ ಬಗ್ಗೆ ಒಂದು ನಿರ್ಧಾರ[illegible] ಬಂದಂತಿದೆ. ಕೊಂಚ ನಷ್ಟವಾದರೂ ಪರವಾಗಿಲ[illegible] ಚೇತರಿಸಿಕೊಳ್ಳಲು ಸ್ವಲ್ಪ ನಿಧಾನವಾದರೂ ಅಡ್ಡಿಯಿಲ[illegible] ಕರ್ನಾಟಕ ರಾಜಕೀಯದಲ್ಲಿ ಮುಂದಿನ ದಿನಗಳ[illegible] ಬಿಜೆಪಿಯು "ಮೈನಸ್ ಯಡಿಯೂರಪ್ಪ" ಆಗಿಯೆ[illegible] ಮುಂದುವರೆಯಲಿ ಎನ್ನುವುದೇ ಆ ನಿರ್ಧಾರವಿರುವಂತಿ[illegible] ಯಡಿಯೂರಪ್ಪನಿಗೆ ಇದು ರಾಜಕೀಯ ಜೀವನದ ಕಷ್ಟಕಾಲ[illegible] ಒಂದು ಕಡೆ ಹೈಕಮಾಂಡಿನ ಬೆಂಬಲವಿಲ್ಲ, ರಾ[illegible] ಬಿಜೆಪಿಯ ನಾಯಕರು ಜೊತೆಗಿಲ್ಲ, ಸರ್ಕಾರದ ಮೇಲಿ[illegible] ಹಿಡಿತ ಕರಗಿಹೋಗಿದೆ. ಆಯಕಟ್ಟಿನ ಸ್ಥಾನಗಳಲ್ಲಿ[illegible] ಸ್ವಜಾತಿಯ ಉನ್ನತಾಧಿಕಾರಿ ಬೆಂಬಲಿಗರೂ ಪೆಟ್ಟು ತಿಂ[illegible] ದ್ದಾರೆ. ಇತ್ತೀಚೆಗಿನ ಹೈಕೋರ್ಟ್ ತೀರ್ಪು ಲೋಕಾಯು[illegible] ಸಂಸ್ಥೆಯನ್ನು ಬಿಜೆಪಿಗಳ ಕಂಟ್ರೋಲಿನಿಂದ ವಿಮೋಚ[illegible] ಮಾಡಲಿದೆ. ಇದೆಲ್ಲಕ್ಕಿಂತ ಹೆಚ್ಚಿನದಾಗಿ ಸದಾ ತ[illegible] ಜೊತೆಗಿರುತ್ತಿದ್ದ, ಸಾಕಷ್ಟು ದುಡ್ಡು ಮಾಡಿಕೊಂಡಿರು[illegible] ಸ್ವಜಾತಿಯ ಮತ್ತು ಕಟ್ಟಾ ಬೆಂಬಲಿಗರ ಗುಂಪು ಈ[illegible] ಕರಗಿಹೋಗುತ್ತಿದೆ.

ಕರ್ನಾಟಕದ ಜನರ ಅನೇಕ ಸಮಸ್ಯೆಗಳ ಪೈಕಿ ಸದ್ಯ[illegible] ಯಡ್ಡಿ ಎಂಬ ಸಮಸ್ಯೆ ತಣ್ಣಗಾದಂತೆ ಕಾಣುತ್ತಿದೆ.

• ಪಾರ್ವತೀ[illegible]

ಪ್ರಜಾತಂತ್ರದ ಕುರಿತು

▶2

ಏಕೆ ಹೀಗಾಗುತ್ತದೆ? ಇದು ಕೇವಲ ಯೋಜನೆಗಳ ಅನುಷ್ಠಾನದಲ್ಲಿ ಆಗುತ್ತಿರುವ ಲೋಪಗಳೆಂದುಕೊಂಡರೆ ತಪ್ಪಾದೀತು. ಏಕೆಂದರೆ ಈ ದೇಶದ ಸಂಪನ್ಮೂಲ ಈ ರೀತಿಯಲ್ಲಿ ಜನತೆಯ ಅದರಲ್ಲೂ ಶೋಷಿತರ ಕಲ್ಯಾಣಕ್ಕೆ ವೆಚ್ಚ ಮಾಡಬಾರದೆಂದೂ ಅದೆಲ್ಲವನ್ನೂ ಈ ದೇಶಕ್ಕೆ ಅಭಿವೃದ್ಧಿ ತಂದುಕೊಡುವ ಖಾಸಗಿ ಮತ್ತು ವಿದೇಶೀ ಬಂಡವಾಳಕ್ಕೆ ಮೂಲಭೂತ ಸೌಕರ್ಯ ಒದಗಿಸಲು ವಿನಿಯೋಗಿಸಬೇಕೆಂಬ ಒಪ್ಪಂದಕ್ಕೆ ಭಾರತ ಮತ್ತು ಕರ್ನಾಟಕ ಸರ್ಕಾರಗಳು ಸಹಿ ಮಾಡಿವೆ. ಅದಕ್ಕೆಂದೇ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ Fiscal Responsibility Act-2002 - ವಿತ್ತೀಯ ಹೊಣೆಗಾರಿಕೆ ಕಾಯಿದೆ-2002 ಎಂಬ ಶಾಸನವನ್ನು ಎಲ್ಲಾ ಪಕ್ಷಗಳು ಒಕ್ಕೊರಲಿನಿಂದ ಜಾರಿಮಾಡಿವೆ. ಈ ಕಾಯಿದೆ[illegible] ಸರಳವಾಗಿ ಹೇಳುವುದಾದರೆ: "ಸರ್ಕಾರ ತನ್ನ ವೆಚ್ಚವನ್ನು ಕಡಿಮೆ ಮಾಡಿಕೊಂಡು ಆದಾಯ ಜಾಸ್ತಿ ಮಾಡಿಕೊಳ್ಳಬೇಕು ಮತ್ತು ಖಾಸಗಿ ಮತ್ತು ವಿದೇಶೀ ಬಂಡವಾಳಕ್ಕೆ ಪೂರಕವಾದ ನೀತಿಗಳನ್ನು ಜಾರಿಗೆ ತರಬೇಕು. ಇದಕ್ಕಾಗಿ ಬಡಜನರಿಗೆ ಆರೋಗ್ಯ, ಶಿಕ್ಷಣ, ವಸತಿ, ಆಹಾರ ಮತ್ತು ಇನ್ನಿತರ ಬಾಬತ್ತುಗಳಿಗೆ ಕೊಡುತ್ತಿರುವ ರಿಯಾಯತಿಯನ್ನು ನಿಲ್ಲಿಸಬೇಕು ಮತ್ತು ಕುಡಿಯುವ ನೀರನ್ನೂ ಒಳಗೊಂಡಂತೆ ಸರ್ಕಾರ ಜನರಿಗೆ ಒದಗಿಸುತ್ತಿರುವ ಸೇವೆ ಮತ್ತು ಸರಕುಗಳಿಗೆ ಎಷ್ಟು ವೆಚ್ಚವಾಗುತ್ತದೋ ಅಷ್ಟು ಹಣವನ್ನು ಪಡೆಯಬೇಕು. ಅಷ್ಟು ಮಾತ್ರವಲ್ಲ; ಪ್ರತಿ ವರ್ಷ ವೆಚ್ಚದಲ್ಲಿ ಎಷ್ಟು ಕಡಿತಮಾಡಲಾಗಿದೆ ಮತ್ತು ಮುಂದಿನ ಐದು ವರ್ಷಗಳಲ್ಲಿ ಈ ವೆಚ್ಚ ಯಾವ ಪ್ರಮಾಣದಲ್ಲಿ ಕಡಿಮೆ ಮಾಡಲಾಗುತ್ತದೆ ಎಂಬ "ಮಧ್ಯಂತರ ವಿತ್ತೀಯ ಯೋಜನೆ"ಯನ್ನು ಬಜೆಟ್ ದಾಖಲೆಯೊಂದಿಗೇ ಸದನದಲ್ಲಿ ಮಂಡಿಸಬೇಕು.

ಸರ್ಕಾರಗಳು ಜನರ ಕಲ್ಯಾಣ ಮಾಡಬೇಕೆಂದು ತಾಕೀತು ಮಾಡುವ ನಮ್ಮ ಸಂವಿಧಾನಕ್ಕಿಂತ ಈ ಒಪ್ಪಂದಕ್ಕೆ ಎಷ್ಟು ಬದ್ಧರೆಂದರೆ ಬಜೆಟ್ ಭಾಷಣ ಪ್ರಾರಂಭವಾಗುವುದೇ "ಸರ್ಕಾರ Fiscal Responsibility Act-2002 - ಗೆ ಬದ್ಧವಾಗಿದೆ" ಎಂಬ ಘೋಷಣೆಯೊಂದಿಗೆ. ಹೀಗಾಗಿ ಬಜೆಟ್ ಎಷ್ಟೇ ರಹಸ್ಯ ಡಾಕ್ಯುಮೆಂಟ್ ಎಂದು ಸರ್ಕಾರ ಹೇಳಿದರೂ ಜನರ ಕಲ್ಯಾಣದ ಬಾಬತ್ತಿಗೆ ಮುಂದಿನ ಐದು ವರ್ಷಗಳಲ್ಲಿ ಎಷ್ಟು ಹಣ ಕಡಿತ ಮಾಡಲಾಗುವುದೆಂದು ಈಗಾಗಲೇ ಘೋಷಿತವಾಗಿದೆ. ಆದ್ದರಿಂದಲೇ SCSP ಗೆ ನೀಡಬೇಕಿದ್ದ ಹಣ ಕಡಿತವಾಗುತ್ತಲೇ ಹೋಗುತ್ತದೆ. ನೀಡಿದ ಹಣವೂ ವೆಚ್ಚವಾಗದೆ ವಾಪಸ್ ತಿಜೋರಿ ಸೇರಿ ಅಲ್ಲಿಂದ ಕಾರ್ಪೊರೇಟ್ ಬೊಕ್ಕಸ ಸೇರುತ್ತಾ ಹೋಗುತ್ತದೆ.

ಏಕೆ ಹೀಗಾಗುತ್ತಿದೆ. ಅಂಬೇಡ್ಕರ್ 1947ರಲ್ಲೇ ಹೀಗೆ ಹೇಳಿದ್ದರು:

"ಸಮಾನತೆಯಿರದ ಸಮಾಜದಲ್ಲಿ ಕೇವಲ ಸಮಾನತೆಯನ್ನು ಕಡ್ಡಾಯ ಮಾಡದೆ ಸ್ವಾತಂತ್ರ್ಯವನ್ನು ಮಾತ್ರ ಕಡ್ಡಾಯ ಮಾಡಿದರೆ ಅದು ಅಸ್ತಿತ್ವದಲ್ಲಿರುವ ಶೋಷಕ ಶಕ್ತಿಗಳನ್ನೇ ಬಲಗೊಳಿಸುತ್ತದೆ. ಪಾಶ್ಚಿಮಾತ್ಯ ದೇಶಗಳ ಸಂಸದೀಯ ಪ್ರಜಾತಂತ್ರದ ಇತಿಹಾಸ ಅದನ್ನೇ ರುಜುವಾತು ಮಾಡಿದೆ. ನಮ್ಮಂಥ ದೇಶದಲ್ಲಂತೂ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಆಳವಾಗಿ ಬೇರು ಬಿಟ್ಟಿದ್ದು ಅದನ್ನು ಬುಡಮಟ್ಟ ತೊಡೆಯದೆ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿರುವುದಿಲ್ಲ. ಹೀಗಾಗಿ ನಮ್ಮ ದೇಶದಲ್ಲಿ ಸಮಾನತೆಯನ್ನು ಸಾಂವಿಧಾನಿಕವಾಗಿಯೇ ಮೂಲಭೂತ ಹಕ್ಕನ್ನಾಗಿ ಮಾಡಬೇಕು. ದೇಶದ ಎಲ್ಲಾ ಸಂಪತ್ತುಗಳನ್ನು ರಾಷ್ಟ್ರೀಕರಿಸಬೇಕು. ಸಂಪತ್ತು ಒಂದು ಕಡೆ ಕೇಂದ್ರೀಕರಣಗೊಳ್ಳದಂಥ ಆರ್ಥಿಕ ನೀತಿ ಕಡ್ಡಾಯವಾಗಬೇಕು... ಆದಾಗದಿದ್ದರೆ ಈ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಮತ್ತು ಕಂದರಗಳು ಹೆಚ್ಚುತ್ತಲೇ ಹೋಗಿ ಈ ಸಂಸದೀಯ ಪ್ರಜಾತಂತ್ರದ ಅಡಿಪಾಯವೇ ಕುಸಿದುಬೀಳುತ್ತದೆ."

63 ವರ್ಷಗಳ ಸ್ವತಂತ್ರ ಭಾರತ ಅಂಬೇಡ್ಕರ್‌ರವರ ಈ ಪ್ರತಿಮಾತಿಗೂ ಪುರಾವೆ ಒದಗಿಸಿಲ್ಲವೇ? ಆರ್ಥಿಕ ಮತ್ತು ಅಸಾಮಾಜಿಕ ಸಮಾನತೆಗಾಗಿ ಬುಡಮಟ್ಟದ ಸಂಘರ್ಷದ ಬಗ್ಗೆ ಒತ್ತಿಲ್ಲದೆ ಕೇವಲ ಶಾಸಕಾಂಗದಲ್ಲಿ ಪ್ರಾತಿನಿಧ್ಯಕ್ಕಾಗಿ ಹೋರಾಡುವ 'ರಾಜಕೀಯ' ಪ್ರಯತ್ನಗಳು ನಮ್ಮ ಪ್ರಜಾತಂತ್ರಕ್ಕೆ ಹತ್ತಿರುವ ಕಾರ್ಪೊರೇಟ್ ಕ್ಯಾನ್ಸರ್ ಅನ್ನು ಹೋಗಲಾಡಿಸಬಲ್ಲದೇ?

ಶಂಕರ್ ಬಿದರಿ ಕಲಿಯಬಹುದಾದ ಪಾಠಗಳು

ಕರ್ನಾಟಕ ರಾಜ್ಯ ಪೊಲೀಸ್ ಮುಖ್ಯಸ್ಥರ ಹುದ್ದೆಯನ್ನು ...ಕರ್ ಬಿದರಿ ಕಳೆದುಕೊಂಡಿದ್ದಾರೆ. ಆವರದನ್ನು ...ಯವಾದ ರೀತಿಯಲ್ಲೇನು ಪಡೆದಿರಲಿಲ್ಲವಾದ್ದರಿಂದ ...ಹುದ್ದೆ ಕೈತಪ್ಪುವುದು ಗ್ಯಾರಂಟಿಯಾಗಿತ್ತು. ಈ ಬಗ್ಗೆ ...ಯಾರೂ ಬೇಸರ ಪಡುವ ಅಗತ್ಯವೂ ಇಲ್ಲ.

ಆದರೆ ಈ ಪ್ರಕರಣದ ತೀರ್ಪು ಪ್ರಕಟಿಸುವಾಗ ...ಜ್ಯ ಹೈಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ...ವೆಲ್ಲ ಗಂಭೀರವಾಗಿ ಪರಿಗಣಿಸಬೇಕಿದೆ.

ಪರಮಭ್ರಷ್ಟ ಯಡಿಯೂರಪ್ಪ ಸಿಎಂ ಆಗಿದ್ದಾಗ ಈ ...ೊಲೀಸ್ ಮುಖ್ಯಸ್ಥರ ಹುದ್ದೆಯನ್ನು ಜನತೆಯ ರಕ್ಷಣೆಗಾಗಿ ...ರುವ ಹಾಗೂ ಇಡೀ ಕಾನೂನು ಸುವ್ಯವಸ್ಥೆಯ ...ಸ್ತುವಾರಿ ನೋಡಿಕೊಳ್ಳುವ ಅಧಿಕಾರಿಯ ಹುದ್ದೆ ...ಎಂಬುದಾಗಿ ಪರಿಗಣಿಸದೆ ತನ್ನ ವೈಯಕ್ತಿಕ ತೆವಲುಗಳ ...ಕ್ಷಣೆಗಾಗಿ ಇರಬೇಕಾದ ಸೇನಾಧಿಪತಿ ಹುದ್ದೆ ಎಂಬಂತೆ ...ಾವಿಸಿದ್ದರು.

ಹಾಗಾಗಿಯೇ ತಮಗಿದ್ದ ಮುಖ್ಯಮಂತ್ರಿಯ ...ಧಿಕಾರವನ್ನು ದುರುಪಯೋಗ ಮಾಡಿಕೊಂಡು ಅರ್ಹ ...ಮೂವರು ಅಧಿಕಾರಿಗಳ ಪೈಕಿ ಕಡಿಮೆ ಅರ್ಹತೆಯ ...ಬಿದರಿಯನ್ನು ಡಿಜಿಪಿಯಾಗಿ ನೇಮಿಸಲು ಬಯಸಿದ್ದರು. ...ಬಹಳ ಮುಖ್ಯವಾಗಿ ಬಿದರಿಯವರ ಅನರ್ಹತೆಯನ್ನು ...ಬಿಂಬಿಸುವಂತಿದ್ದ ಎಸ್‌ಟಿಎಫ್ ದೌರ್ಜನ್ಯ ಕುರಿತಂತೆ ...ಷನಲ್ ಹ್ಯೂಮನ್ ರೈಟ್ಸ್ ಕಮಿಷನ್‌ನ ವರದಿಯನ್ನು ...ಕಡೆಗಣಿಸಿ ಈ ನೇಮಕ ಮಾಡಲಾಗಿತ್ತು. ಇದಕ್ಕಿದ್ದ ...ಇನ್ನೊಂದು ಆಯಾಮ ಏನೆಂದರೆ ಎ.ಆರ್.ಇನ್‌ಫ್ಯಾಂಟ್ ...ಸರ್ವ ಮುಸ್ಲಿಮರಾಗಿರುವುದರಿಂದ ಅವರನ್ನು ರಾಜ್ಯ ...ಪೊಲೀಸ್ ಮುಖ್ಯಸ್ಥರನ್ನಾಗಿಸಲು ಬಿಜೆಪಿಗಳ ಗಲೀಜು ...ಸಿದ್ಧಾಂತಕ್ಕೆ ಸಹಮತವಿರಲಿಲ್ಲ.

ಈಗಿನ ಹೈಕೋರ್ಟ್ ತೀರ್ಪು ಈ ವಿಚಾರಗಳನ್ನೆಲ್ಲಾ ಬಗೆಹರಿಸಿದೆ ಬಿಡಿ. ಆದರೆ ರಾಜ್ಯ ಸರ್ಕಾರ ಈ ತೀರ್ಪಿನ ವಿರುದ್ಧ ಮನಃ ಸುಪ್ರೀಂಕೋರ್ಟ್‌ನಲ್ಲಿ ಅಪೀಲು ಸಲ್ಲಿಸಲು ಹೊರಟಿದೆ. ಇದರರ್ಥ ಶಂಕರ್ ಬಿದರಿಯವರ ಮೇಲಿರುವ ದೌರ್ಜನ್ಯ ಹತ್ಯೆಗಳ ಹಾಗೂ ಒಟ್ಟಾರೆ ಮಾನವ ಹಕ್ಕುಗಳ ಉಲ್ಲಂಘನೆಗಳ ಆರೋಪಗಳು ಅಷ್ಟು ಮುಖ್ಯವಲ್ಲ ಎಂದಾಗುವುದಿಲ್ಲವೇ?

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಬಿದರಿ ಹಾಗೂ ಆಗ ತಮಿಳುನಾಡು ಎಸ್‌ಟಿಎಫ್ ಮುಖ್ಯಸ್ಥರಾಗಿದ್ದ ವಾಲ್ಟರ್ ದೇವರಂ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಗಳಲ್ಲಿ ಒಟ್ಟು 66 ಮಂದಿಯ ಹತ್ಯೆ ನಡೆದದ್ದನ್ನು ಹೇಳಿದೆ. ಹಾಗೆ ಜೀವ ತೆತ್ತವರ ಪೈಕಿ 36 ಮಂದಿ ಅನುಮಾನಾಸ್ಪದ ರೀತಿಯಲ್ಲಿ ಸತ್ತಿದ್ದಾರೆಂತಲೂ ಸ್ಪಷ್ಟವಾಗಿ ಹೇಳಿದೆ. ಅಲ್ಲದೆ ಎಸ್‌ಟಿಎಫ್ ಪೊಲೀಸರಿಂದ ಅತ್ಯಾಚಾರಕ್ಕೊಳಗಾದ ಅನೇಕ ಮಹಿಳೆಯರ ಹೇಳಿಕೆಗಳನ್ನು ಪಡೆದು ವರದಿಯಲ್ಲಿ ದಾಖಲಿಸಿದೆ. ಆಗ ಈ ಕಾರ್ಯಾಚರಣೆಗಳು ನಡೆಯುತ್ತಿದ್ದಾಗ 'ರ್‍ಯಾಂಬೋ' ರೀತಿ ಪೋಜು ಕೊಡುತ್ತಿದ್ದ ಬಿದರಿ ಈಗ ಕೋರ್ಟ್‌ನಲ್ಲಿ 'ನಾನಾಗ ಡೆಪ್ಯೂಟಿ ಕಮಾಂಡರ್ ಆಗಿದ್ದೆ. ಈ ದೌರ್ಜನ್ಯ ಅತ್ಯಾಚಾರಗಳಿಗೆ ನಾನೊಬ್ಬನೇ ಹೊಣೆಯಲ್ಲ' ಎನ್ನುತ್ತಿದ್ದಾರೆ. ಇದೆಂತಹ ವಿಪರ್ಯಾಸ!



ವೀರಪ್ಪನ್‌ನ ಸೊಕ್ಕಡಗಿಸಿದ ಸಾಹಸಿ ಈ ಬಿದರಿ ಎಂಬ ಮಾತು ಈಗಲೂ ಚಾಲ್ತಿಯಲ್ಲಿದೆ. ಅದು ಸ್ವಲ್ಪ ನಿಜವಿರಲೂಬಹುದು. ಆದರೆ ಬಿದರಿ ಸೇರಿದಂತೆ ಕರ್ನಾಟಕದ ಯಾವ ದೊಣ್ಣೆ ನಾಯಕರು ಒಂದು ಪ್ರಶ್ನೆಗೆ ಇವತ್ತಿಗೂ ಉತ್ತರ ನೀಡಿಲ್ಲ.


ವೀರಪ್ಪನ್ ಮುನ್ನೂರು ಆನೆಗಳನ್ನು ಕೊಂದು ದಂತ ಕದ್ದು ಮಾರಿಕೊಂಡ ಎಂಬ ಆರೋಪವಿತ್ತು. ಅದು ನಿಜ ಎಂದಾದರೆ ಅಷ್ಟು ದಂತಗಳನ್ನು ಖರೀದಿಸಿದವ ರ್‍ಯಾರು? ವೀರಪ್ಪನ್ ಸಾವಿರಾರು ಟನ್ ಗಂಧದ ಮರ ಕಳ್ಳಸಾಗಾಣಿಕೆ ಮಾಡುತ್ತಿದ್ದ ಎನ್ನಲಾಗುತ್ತಿತ್ತು. ಹಾಗಾದರೆ ಅಷ್ಟೂ ಗಂಧದ ಮರ ತಲುಪಿದ್ದು ಎಲ್ಲಿಗೆ?

ಈ ನೆಟ್‌ವರ್ಕ್‌ನಲ್ಲಿದ್ದವರ್‍ಯಾರು? ಅದರ ಫಲಾನುಭವಿಗಳ್ಯಾರಾಗಿದ್ದರು?

ಇವೆಲ್ಲ ನೂರಾರು ಕೋಟಿ ರೂಪಾಯಿಗಳ ದಂಧೆ. ನಾವೆಲ್ಲ ಗಮನಿಸಿದಂತೆ ವೀರಪ್ಪನ್ ಅಲ್ಯೂಮಿನಿಯಂ ಪ್ಲೇಟ್‌ನಲ್ಲಿ ಅನ್ನ ಸಾರು ಕಲಸಿ ತಿಂದು ಹವಾಯಿ ಚಪ್ಪಲೀಲಿ ಓಡಾಡುತ್ತಿದ್ದ. ಅವನು ದಂತ ಗೋಪುರದಲ್ಲೂ ಇರಲಿಲ್ಲ, ಗಂಧದ ಮಂಚದಲ್ಲೂ ಮಲಗಲಿಲ್ಲ. ಹಾಗಾದರೆ ಈ ಕಾಡಿನಿಂದ ಹೊರಬರುತ್ತಿದ್ದ ಮಾಲುಗಳು ನಾಡಿನಲ್ಲಿ ಯಾರ ಕೈ ಸೇರುತ್ತಿದ್ದವೆಂಬುದನ್ನು ಪೊಲೀಸರು ಪತ್ತೆ ಹಚ್ಚಲಿಲ್ಲ ಯಾಕೆ?

ಬಿದರಿಯವರ ದಕ್ಷತೆ ಇಲ್ಲಿ ಯಾಕೆ ಕೆಲಸ ಮಾಡಲಿಲ್ಲ!

ಸಂಪಾದಕೀಯ



bparvateesha@gmail.com

• ಪಾರ್ವತೀಶ

ವೀರಪ್ಪನ್ ಆಗಲಿ ಅಥವಾ ಅವನ ತಂಡದ ಪ್ರಮುಖರಾಗಲಿ ಮುಂದೊಂದು ದಿನ ಈ ವಿಚಾರಗಳನ್ನು ಹೇಳಬಹುದೆಂಬುದು ಪೊಲೀಸರಿಗೆ ಖಾತ್ರಿಯಾಗಿತ್ತು. ಹಾಗಾಗಿಯೇ 1995ರ ಸೆಪ್ಟೆಂಬರ್‌ನಲ್ಲಿ ವೀರಪ್ಪನ್ ತಂಡದ ಅರ್ಜುನ, ಅಯ್ಯನ್ ದೊರೆ ಹಾಗೂ ಮೇಕೆ ರಂಗಸ್ವಾಮಿಗೆ ಪೊಲೀಸರ ಕಸ್ಟಡಿಯಲ್ಲಿದ್ದಾಗಲೇ ಬಲವಂತ ವಾಗಿ ಸೈನೆಡ್ ತಿನ್ನಿಸಿ ಪ್ರಾಣಹರಣ ಮಾಡಲಾಯಿತು.

ಕರ್ನಾಟಕ ಪೊಲೀಸರಿಗೆ ಈ ತರದ ಸಾಮೂಹಿಕ ಹತ್ಯೆಗಳನ್ನು ನಡೆಸುವ ಪರಿಪಾಠವಿದೆ.

2007ರ ಜುಲೈ 10ರಂದು ನಡೆದ ಅತ್ಯದ್ಭ ನಕ್ಸಲ್ ಎನ್‌ಕೌಂಟರ್ ಇದಕ್ಕೆ ಜೀವಂತ ಸಾಕ್ಷಿಯಾಗಿದೆ. ಮೆಣಸಿನ ಹಾಡ್ಯ ಸಮೀಪದ ಒಡೆಯರ ಮಠದ ಆದಿವಾಸಿ ರೈತ ರಾಮಗೌಡ್ಲು-ಕಾವೇರಮ್ಮನವರ ಮನೆಯೊಳಗೆ ಐವರನ್ನು ಕರ್ನಾಟಕ ಪೊಲೀಸರು ಅವತ್ತು ಗುಂಡಿಟ್ಟು ಕೊಲೆ ಮಾಡಿದರು.

ಈ ಐವರ ಪೈಕಿ ದಿನಕರ ಯಾನೆ ಚನ್ನಪ್ಪ ಕಲ್ಲೂರ ಮಾತ್ರ ನಕ್ಸಲ್ ಹೋರಾಟಗಾರನಾಗಿದ್ದ.

ಅವತ್ತು ಬೆಳಗ್ಗೆ ಆಕಸ್ಮಾತ್ತಾಗಿ ತಪಾಸಣೆಗೆ ಬಂದಿದ್ದ ಪೊಲೀಸರು ಚನ್ನಪ್ಪನನ್ನು ನೋಡಿ ಸ್ಥಳದಲ್ಲೇ ಗುಂಡಿಟ್ಟು ಕೊಂದರು. ಅದಾದನಂತರ ಅವತ್ತು ಅದೇ ಮನೆಯಲ್ಲಿದ್ದ ಸ್ಥಳೀಯ ಯುವಕರಾದ ಪರಮೇಶ್ವರ ಹಾಗೂ ಸುಂದರೇಶರ ಪ್ರಾಣ ತೆಗೆದರು. ಕೆಲಹೊತ್ತಿನ ನಂತರ ಮೇಲಧಿಕಾರಿಗಳಿಂದ ಬಂದ ಆದೇಶದಂತೆ ವೃದ್ಧ ರೈತ ದಂಪತಿಗಳಾದ ಕಾವೇರಮ್ಮ-ರಾಮಗೌಡ್ಲುರಿಗೂ ಗುಂಡಿಕ್ಕಿ ಸಾಯಿಸಲಾಯಿತು.

ಈ ಘಟನೆ ನಡೆದ ಮರುದಿನವೇ ನಾವೊಂದಿಷ್ಟು ಜನ ಸತ್ಯಾಂಶವೇನೆಂದು ತಿಳಿಯಲು ಹೋಗಿದ್ದೆವು. ಮೈ ನಡುಗುವಂತಹ ಈ ಕೊಲೆಗಳ ವಿವರಗಳನ್ನು ಪ್ರಶಾಂತ ನೆಂಬ ಹುಡುಗ ಬಾಲಕ ಕಾಡಿನೊಳಗೆ ನಮಗೆ ಸಿಕ್ಕಾಗ ನಿರೂಪಿಸಿದ್ದ. ಆತ ಕಾವೇರಮ್ಮನ ಕಿರಿಯ ಮಗ. ಈ ಹತ್ಯೆಗಳು ಒಂದಾದಮೇಲೊಂದರಂತೆ ನಡೆಯುತ್ತಿದ್ದಾಗ ಪ್ರಶಾಂತ ಪೊಲೀಸರ ಕಣ್ತಪ್ಪಿಸಿ ಮನೆಯಿಂದ ಓಡಿ ತಪ್ಪಿಸಿಕೊಂಡಿದ್ದ.

ಶಂಕರ್ ಬಿದರಿ ಆಗ ರಾಜ್ಯದ ಲಾ ಅಂಡ್ ಆರ್ಡರ್‌ನ ಮುಖ್ಯಸ್ಥರಾಗಿದ್ದರು ಮತ್ತು ಅವರ ಸಮ್ಮತಿಯಿರದೆ ಈ ಕೊಲೆಗಳು ನಡೆಯುವ ಸಂಭವವಿರಲೇ ಇಲ್ಲ.

ಅದೇ ಅವಧಿಯಲ್ಲಿ ನಕ್ಸಲ್ ಬೆಂಬಲಿಗರ ಪಟ್ಟಿ ಪ್ರಕಟಿಸಿ ಪತ್ರಕರ್ತರು, ಬುದ್ಧಿಜೀವಿಗಳು ಹಾಗೂ ಇನ್ನಿತರ ಹೋರಾಟಗಾರರನ್ನು ಬೆದರಿಸುವ ಒಂದು ಹೀನ ಪ್ರಯತ್ನವನ್ನು ರಾಜ್ಯ ಪೊಲೀಸರು ಮಾಡಿದ್ದರು. ಅದೂ ಕೂಡ ಬಿದರಿಯವರ ಕಾರ್ಯವೈಖರಿಗೆ ಉದಾಹರಣೆಯಾಗಿತ್ತು.

ಈಗೊಂದು ಮೂರ್ನಾಲ್ಕು ತಿಂಗಳ ಹಿಂದೆ ಯಡಿಯೂರಪ್ಪ ಗುಲ್ಬರ್ಗಾದ ತಿಕ್ಕಲು ಹೆಂಗಸೊಬ್ಬಳ ಹತ್ತಿರ ಹೋಗಿ 'ಭವಿಷ್ಯ' ಕೇಳಲು ಕೈ ಮುಗಿದು ನಿಂತಿದ್ದಾಗ ಬಿದರಿಯೂ ಜೊತೆಗಿದ್ದರು.

ಸಮಸ್ತ ಮೀಡಿಯಾಗಳೆದುರೆ, "ನಾನು ಡಿಜಿಪಿ ಶಂಕರ್ ಬಿದರಿ ಬಂದಿದ್ದೇನೆ" ಎನ್ನುತ್ತಾ ಪೆದ್ದುಪೆದ್ದಾಗಿ ತಮ್ಮ ಭವಿಷ್ಯದ ಬಗ್ಗೆ ಕೇಳಿ ಕೈಮುಗಿದು ನಿಂತಿದ್ದರು. ಅಷ್ಟೇ ಹುಂಬತನದಿಂದ ಎಸ್‌ಟಿಎಫ್ ದೌರ್ಜನ್ಯಗಳನ್ನು ಸಮರ್ಥಿಸಿಕೊಂಡು ಈಗ ಕೋರ್ಟ್‌ನಲ್ಲಿ ಹೇಳಿಕೆ ನೀಡುತ್ತಾ 'ನಾನೇನು ಸದ್ದಾಂ ಹುಸೇನ್ ಅಲ್ಲ, ಲಿಬಿಯಾದ ಸರ್ವಾಧಿಕಾರಿಗಿದ್ದ ಗಡಾಫಿಯೂ ಆಗಿರಲಿಲ್ಲ' ಎಂದು ವಾದಿಸಿ ಛೀಮಾರಿ ಹಾಕಿಸಿಕೊಂಡಿದ್ದಾರೆ.

ಮೂರೂವರೆ ದಶಕಗಳ ಕಾಲ ಉನ್ನತ ಪೊಲೀಸ್ ಹುದ್ದೆಗಳಲ್ಲಿದ್ದರೂ ಬಿದರಿಗೆ ಪ್ರಜಾಪ್ರಭುತ್ವದ ಬಗ್ಗೆಯಾಗಲಿ, ಸೆಕ್ಯುಲರ್ ಮೌಲ್ಯಗಳಾಗಲಿ, ವಿನಯವಾಗಲಿ ಮೈಗೂಡಿಲ್ಲ ಎಂಬುದನ್ನು ಈ ಘಟನೆಗಳು ತೋರಿಸುತ್ತಿವೆ.

ಪ್ರಜಾಪ್ರಭುತ್ವದ ಮೌಲ್ಯಗಳು ಆಳವಾಗಿ ಬೇರುಬಿಟ್ಟಿರುವ ಸಮಾಜದಲ್ಲಿ ಬಿದರಿ ತರದ ವ್ಯಕ್ತಿಗಳು ತಮ್ಮ ಅಕೃತ್ಯಗಳಿಗೆ ವಿಚಾರಣೆ ಎದುರಿಸಲೇಬೇಕಾಗುತ್ತದೆ.

ಆದರೆ ದುರದೃಷ್ಟವಶಾತ್ ಕರ್ನಾಟಕದಲ್ಲಿ ಅಂತಹ ಪರಿಸ್ಥಿತಿ ಕಾಣುತ್ತಿಲ್ಲ.


'ವಿಜಯವಾಣಿ' ಟೈಟಲ್ ಜಗಳ

ಕ್ಯಾಸಬ್ಲಾಂಕ ತರದ ತಮಾಷಿ ಪ್ರಸಂಗವು!



ವಿಜಯವಾಣಿ ಶುರುವಾಗಿದೆ.

ಕನ್ನಡದ ಈಗಿನ ಆರು ಪ್ರಮುಖ ದಿನಪತ್ರಿಕೆಗಳನ್ನು ಮೀರಿಸುವಂತೆ ವಿಜಯವಾಣಿ ಮೊಳಗಲಿದೆಯಾ ಎಂಬುದು ಮುಂದಿನ ದಿನಗಳಲ್ಲಿ ತೀರ್ಮಾನವಾಗಲಿದೆ. ಅದಷ್ಟು ಸುಲಭವೆಲ್ಲ ಎಂಬುದು ಎಷ್ಟು ವಾಸ್ತವವೋ ವಿಜಯ ಸಂಕೇಶ್ವರ್ ಉಡಾಫೆಯಾಗಿ ಏನನ್ನೂ ಮಾಡುವುದಿಲ್ಲ ಎಂಬುದೂ ಅಷ್ಟೇ ನಿಜ. ಮೊನ್ನೆ ಹೊಸ 'ವಿಜಯ ವಾಣಿ'ಗೆ best wishes ಹೇಳಲು ನಮ್ಮ ಪತ್ರಿಕಾ ತಂಡದ ಕೆಲವರು ಏಪ್ರಿಲ್ 1 ರಂದು ಹೋಗಿದ್ದೆವು. ಚಾಮರಾಜಪೇಟೆಯ ಆಫೀಸಿನೊಳಗೆ ಕಾಲಿಟ್ಟರೆ ತುಂಬ ಅಚ್ಚುಕಟ್ಟಾಗಿ ಅರೇಂಜ್ ಮಾಡಿರುವ ನೂರಾರು ಕಂಪ್ಯೂಟರ್‌ಗಳು, ಅವುಗಳ ಎದುರು ಕೂತು ಶಿಸ್ತಾಗಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ... ಇಡೀ ವಾತಾವರಣ ಮುದಗೊಳಿಸುವಂತಿತ್ತು. ಕ್ಷಣ ನಿಂತು ನೋಡಿದರೆ ಹಳೆಯ ಗೆಳೆಯರನೇಕರು ಕಂಡರು. ಶಿವರುದ್ರಪ್ಪ ಆರ್.ಜಿ. ಹಳ್ಳಿ ನಾಗರಾಜ್, ರುದ್ರಣ್ಣ ಹರ್ತಿಕೋಟೆ, ಕನಕಪುರದ ಮಿತ್ರ ಯೋಗ ರವೀಶ್ ಭಾರತ... ಹೀಗೆ. ಸಂಪಾದಕ ತಿಮ್ಮಪ್ಪ ಭಟ್ಟರ ಕ್ಯಾಬಿನ್ ಹೊಕ್ಕಾಗ ಸಂಕೇಶ್ವರರ ಅತ್ಯಂತ ನಂಬಿಕಸ್ಥ ಜೊತೆಗಾರ ಹುಬ್ಬಳ್ಳಿಯ ಮಿತ್ರ ಬೋಜಶೆಟ್ಟರ್ ಕೂಡ ಸಿಕ್ಕರು. 'ವಿಜಯವಾಣಿ'ಯು ಕರ್ನಾಟಕದ ಜನರಿಗೆ ಒಳ್ಳೆಯದನ್ನು ಮಾಡಲಿ' ಎಂದು ಹಾರೈಸಿ, ನೇರ ಮೇಲಿನ ಮಹಡಿಗೆ ಹೋಗಿ ಆನಂದ್ ಸಂಕೇಶ್ವರ್‌ರ ಕೈಕುಲುಕಿ ಕೆಲಹೊತ್ತು ಮಾತಾಡುತ್ತಾ ಕುಳಿತಾಗ ನಿಮಿಷಕ್ಕೊಬ್ಬರಂತೆ ಗಣ್ಯರ ಆಗಮನವಾಗುತ್ತಿತ್ತು. ಆಗೊಂದು ನೂರು ಯುವಕರಿದ್ದ ಗುಂಪೊಂದರ ಆಗಮನವಾಯಿತು. 'ಇವರ್‍ಯಾರಪ್ಪ' ಎಂದು ನಾನೆಲ್ಲಾ ನೋಡಿದರೆ ಮುತಾಲಿಕ್ ರೈ!



ಆತನೂ ಶುಭಾಶಯ ಹೇಳಲು ಬಂದಿದ್ದರೆ ಹಿಂಬಾಲಕರು ಮೊದಲ ಶೋ ಸಿನಿಮಾ ನೋಡಲು ಥಿಯೇಟರ್‌ಗೆ ನುಗ್ಗುವಂತೆ ಪತ್ರಿಕಾ ಕಚೇರಿಯೊಳಗೆ ನುಗ್ಗಿದ್ದರು. ಈ ದಡ್ಡರ ಗುಂಪಿನ ನಾಯಕನಿಗೆ ಒಂದು ಪೇಪರ್ ಆಫೀಸಿನೊಳಗೂ ಸಹ 'show of strength' ಬೇಕಿತ್ತಾ ಎಂದುಕೊಳ್ಳುತ್ತಾ ಹೊರಟೆವು. ನೂತನ ವಿಜಯವಾಣಿಯು ಜನಪರವಾಗಿರಲಿ, ಜಾತ್ಯತೀತವಾಗಿರಲಿ ಎಂಬುದಷ್ಟೇ ನಮ್ಮ ನಿರೀಕ್ಷೆ. ಈ ಪತ್ರಿಕೆಯ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಎಡಿಷನ್‌ಗಳನ್ನು ಮಠಾಧೀಶರುಗಳ ಕೈಲಿ ಲಾಂಚ್ ಮಾಡಿಸಲಾಗಿದೆ. ಜೊತೆಗೆ ಇತರ ಅತಿಥಿಗಳು ಇದ್ದರಾದರೂ ಎದ್ದು ಕಾಣುತ್ತಿದ್ದುದು ಈ ಖಾವಿಧಾರಿಗಳೆ. ಕೆಲವು ಜನ ತಮ್ಮ ಜಾತಿ ಮಠಾಧೀಶರ ಮಾತು ಕೇಳಿ ಆಕಸ್ಮಾತ್ತಾಗಿ ಒಂದು ಓಟ್ ಹಾಕಬಹುದೇ ವಿನಃ ಪತ್ರಿಕೆ ಯೊಂದನ್ನು ಪ್ರತಿದಿನ ಖರೀದಿಸಲಾರರೆಂಬುದು ನಮ್ಮ ಗ್ರಹಿಕೆ.

ಆ ವಿಚಾರ ಬಿಟ್ಟು ವಿಜಯವಾಣಿ ಕುರಿತಂತೆ ನಡೆದ ಒಂದು ಜಗಳದ ಬಗ್ಗೆ ಇಲ್ಲಿ ಹೇಳಬೇಕು. ವಿಜಯ ಕರ್ನಾಟಕದ ಮಾಲೀಕರಾಗಿರುವ ಟೈಮ್ಸ್ ಆಫ್ ಇಂಡಿಯಾದ ಧಣಿಗಳು 'ವಿಜಯವಾಣಿ'ಯು ತಮ್ಮ ಪತ್ರಿಕೆಯ 'ವಿಜಯ' ಪದವನ್ನೇ ಹೊಂದಿರುವುದರಿಂದ ತಮ್ಮ ಪತ್ರಿಕೆಗೆ (ಬ್ಯುಸಿನೆಸ್‌ಗೆ) ತೊಂದರೆಯಾಗುತ್ತದೆಂದು ಸಂಕೇಶ್ವರ್‌ಗೆ ಲೀಗಲ್ ನೋಟೀಸ್ ಕಳಿಸಿದ್ದರು. ಆದರೆ ಈ ವಿಚಾರವನ್ನು ಟೈಮ್ಸ್ ದಕ್ಕಿಸಿಕೊಳ್ಳಲಾಗಲಿಲ್ಲ ಬಿಡಿ. ಆದರೆ ಪತ್ರಿಕೆಯ ಗುಣಮಟ್ಟದ ವಿಚಾರಕ್ಕೆ ಪೈಪೋಟಿ ನಡೆಸುವುದನ್ನು ಬಿಟ್ಟು ಹೀಗೆ ಹೆಸರಿಗಾಗಿ ಜಗಳಕ್ಕೆ ನಿಲ್ಲುವುದು ತಮಾಷೆಯಾಗಿ ಕಾಣುತ್ತಿದೆ. ಟೈಮ್ಸ್ ಧಣಿಗಳ ತರ್ಕವನ್ನೇ ಮುಂದುವರಿಸಿ ಹೇಳುವುದಾದರೆ, ಸಂಯುಕ್ತ ಕರ್ನಾಟಕದ 'ಕರ್ನಾಟಕ' ವಿಜಯ ಕರ್ನಾಟಕದಲ್ಲೂ ಇದೆ. ಅದಕ್ಕೇನು ಮಾಡಬೇಕು. ಪ್ರಜಾವಾಣಿಯಲ್ಲಿನ 'ವಾಣಿ' ಉದಯವಾಣಿಯೊಳಗೂ ಇದೆಯಲ್ಲ.



ಪತ್ರಿಕೆ ಅಂದರೆ ಬರೀ ದುಡ್ಡು ಅಂದುಕೊಂಡರೆ ಇಂಥ ಜಗಳಗಳು ಹುಟ್ಟಿಕೊಳ್ಳುತ್ತದೆ. ಕೆಲವು ಯಂತ್ರಮಾನವರಿಗೆ ಅದು ಮನಾಪಲಿಯ ಮನೋಭಾವದಿಂದ ಹೊಳೆಯುವ ಆಕ್ಷೇಪಣೆಯಾಗಿರುತ್ತದೆ.

ಈ ವಿಚಾರ ಹೇಳುವಾಗ ಲಂಕೇಶರು ಬರೆದಿರುವ 'ವಾರ್ನರ್ ಬ್ರದರ್ಸ್ ಮತ್ತು ಮಾರ್ಕ್ಸ್ ಬ್ರದರ್ಸ್' ಎಂಬ ಲೇಖನ ನೆನಪಾಗುತ್ತಿದೆ. ಲಂಕೇಶರ 'ಈ ನರಕ ಈ ಪುಲಕ' ಎನ್ನುವ ಸಿನಿಮಾ ಲೇಖನಗಳ ಪುಸ್ತಕದಲ್ಲಿ ಇದಿದೆ.

ಅಮೆರಿಕದಲ್ಲಿ ವಾರ್ನರ್ ಬ್ರದರ್ಸ್ ಹಾಲಿವುಡ್‌ನ ಹೆಸರಾಂತ ಸಿನಿಮಾ ನಿರ್ಮಾಪಕರು. ಅವರು 1941 ರ ಸುಮಾರಿನಲ್ಲಿ ಕ್ಯಾಸಬ್ಲಾಂಕಾ ಎನ್ನುವ ಸಿನಿಮಾ ನಿರ್ಮಿಸಿದ್ದರು. ಕ್ಯಾಸಬ್ಲಾಂಕಾ

▶15

ತುಮಕೂರು ವಿವಿಯಲ್ಲಿ ಶರ್ಮ ಎಂಬ ಶನಿ



ಹಿಂದೂ ಪುರಾಣಗಳಲ್ಲಿ ಶನಿ ಎಂಬ ಒಂದು ಪ್ರಮುಖ ಪಾತ್ರವಿದೆ. ಈ ಶನಿ ತನ್ನ ಅಹಂಕಾರ ಹಾಗೂ ಸಂಕುಚಿತ ದೃಷ್ಟಿಯಿಂದಾಗಿ ಕಂಡಕಂಡವರನ್ನೆಲ್ಲಾ ಕಾಡಿ, ಹೇಳಲು ಸಾಧ್ಯವಿಲ್ಲದಷ್ಟು ಕಷ್ಟ ಕೋಟಲೆಗಳನ್ನು ಕೊಟ್ಟು ವಿಚಿತ್ರ ಖುಷಿ ಅನುಭವಿಸುತ್ತಾನೆ. ಈಗಲೂ ಶನಿಯೆಂದರೆ ನಮ್ಮ ಜನರಲ್ಲಿ ಸಹಜ ಭಕ್ತಿಭಾವಕ್ಕಿಂತ ಭಯಭೀತಿಯೇ ಆವರಿಸುತ್ತದೆ. ತುಮಕೂರು ವಿಶ್ವವಿದ್ಯಾಲಯಕ್ಕೆ ಕಳೆದ ಮೂರು ವರ್ಷಗಳಿಂದ ಇಂಥಾ ಒಂದು ಶನಿ ಹಿಡಿದು ಬಿಟ್ಟಿದೆ. ಈ ಶನಿಕಾಟಕ್ಕೆ ಇಡೀ ವಿದ್ಯಾರ್ಥಿ ಸಮುದಾಯ ಹಾಗೂ ಶಿಕ್ಷಕ ಸಮುದಾಯ ತತ್ತರಿಸಿಹೋಗಿದೆ.

ಈ ಶನಿಯ ಹೆಸರೇ ಡಾ.ಎಸ್.ಸಿ. ಶರ್ಮ. ಈತನ ತಲೆಯಲ್ಲಿ ಸನಾತನ ಬ್ರಾಹ್ಮಣ ವಾದದ ಕಸ ಮತ್ತು ಕೋಮುವಾದಿ ವಿಷಗಳು ಹದವಾಗಿ ಬೆರೆತು ಹೋಗಿವೆ. ಹೀಗಾಗಿ ಈತ ಇಲ್ಲಿಗೆ ವಕ್ಕರಿಸಿದಾಗಿನಿಂದ ವಿವಿ ಒಳಗೆ ಪ್ರಜಾತಾಂತ್ರಿಕ ಮೌಲ್ಯಗಳಾಗಲಿ, ಕಾನೂನಿನ ಪಾಲನೆಯಾಗಲಿ ಕಿಂಚಿತ್ತೂ ಇಲ್ಲವಾಗಿದೆ. ವಾಕರಿಕೆ ಹುಟ್ಟಿಸುವಂಥ ಈ ಶನಿಯ ಕೆಲವು ಕೃತ್ಯಗಳನ್ನು ನೋಡೋಣ.

ಈಗ ಹಾಲಿ ಚರ್ಚೆಯಲ್ಲಿರುವ ವಿಷಯವನ್ನೇ ತೆಗೆದುಕೊಳ್ಳಿ. ತುಮಕೂರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗೊಂಡಾಗ ವಿವಿಯ ಲಾಂಛನ ಯಾವ ರೀತಿಯಲ್ಲಿರಬೇಕೆಂಬ



ಚರ್ಚೆಯಲ್ಲಿ ಜಿಲ್ಲೆಯ ಸಾಹಿತಿಗಳು, ಶಿಕ್ಷಣ ಕ್ಷೇತ್ರದ ಗಣ್ಯರು, ಸಂಘಸಂಸ್ಥೆಗಳ ಮುಖಂಡರು ಮುಂತಾದವರ ಅಭಿಪ್ರಾಯಗಳನ್ನು ಪಡೆದು ಜಿಲ್ಲೆಯ ಸಾಂಸ್ಕೃತಿಕ ಸಾಮಾಜಿಕ ಹಾಗೂ ಭೌಗೋಳಿಕ ಅಂಶಗಳನ್ನು ಪ್ರತಿಬಿಂಬಿಸುವಂಥ ಒಂದು ಲಾಂಛನವನ್ನು ರೂಪಿಸಿ ಚಲಾವಣೆಗೆ ತಂದಿದ್ದರು. ಈ ಲಾಂಛನದ ಬಗ್ಗೆ ಇಡೀ ಪ್ರದೇಶದಲ್ಲಿ ಮೆಚ್ಚುಗೆ, ಅಭಿಮಾನಗಳು ಮೂಡಿದ್ದವು. ಕಳೆದ ಮೂರು ವರ್ಷಗಳ ಹಿಂದೆ ಈ ಶನಿ ಇಲ್ಲಿ ಕಾಲಿಡುವವರೆಗೆ ಈ ಲಾಂಛನದ ಬಗ್ಗೆ ಒಂದಾದರೂ ಅಪಸ್ವರವಿರಲಿಲ್ಲ.

ಈತ ಬಂದನಂತರ ದಲಿತರ ಮತ್ತು ಇತರ ಕೆಳಜಾತಿಯವರ ಮೇಲೆ ವ್ಯವಸ್ಥಿತವಾಗಿ ದಾಳಿ ಮಾಡುತ್ತಾ ಆತನ ವಿರುದ್ಧ ಯಾರೂ ಸೊಲ್ಲೆತ್ತದಂಥಾ ವಾತಾವರಣವನ್ನು ನಿರ್ಮಿಸಿರುವ ಈ ಶರ್ಮನ ಕಣ್ಣಲ್ಲಿ ಈ ಲಾಂಛನವೊಂದು ಮುಳ್ಳಿನಂತೆ ಚುಚ್ಚುತ್ತಿದ್ದಿರಬೇಕು. ಆ ಮಣ್ಣಿನ ಸಹಜ ಪರಿಸರವನ್ನು ಬಿಂಬಿಸುತ್ತಿದ್ದ ಲಾಂಛನವನ್ನು ರಾತ್ರೋರಾತ್ರಿ ಬದಲಾಯಿಸಿ, ತನ್ನ ಕೊಳೆತ ಅಭಿರುಚಿಗೆ ತಕ್ಕಂತೆ ಕೋಮುವಾದವನ್ನು, ಸನಾತನವಾದವನ್ನು ಬಿಂಬಿಸುವ ಲಾಂಛನವೊಂದನ್ನು ಬಿಡುಗಡೆ ಮಾಡಿದ್ದಾನೆ. ಹೀಗೆ ಲಾಂಛನವನ್ನು ಬದಲಿಸುವಂಥ ಮಹತ್ವದ ತೀರ್ಮಾನವನ್ನು ತೆಗೆದು ಕೊಳ್ಳುವಾಗ ಕನಿಷ್ಠ ಔಪಚಾರಿಕತೆಯನ್ನೂ ಪಾಲಿಸದೆ ತಾನೊಬ್ಬನೇ ತೀರ್ಮಾನ ತೆಗೆದುಕೊಂಡಿದ್ದಾನೆ.

ಆದರೆ ಈತನ ಹಿಟ್ಲರ್ ವರ್ತನೆಯಿಂದ ರೋಸಿ ಹೋಗಿದ್ದ ವಿದ್ಯಾರ್ಥಿಗಳು, ಶಿಕ್ಷಕರು, ಸಾಹಿತಿಗಳು, ಸಂಘಸಂಸ್ಥೆಗಳೆಲ್ಲಾ ಒಟ್ಟಾಗಿ ತಮ್ಮ ಸ್ವಾಭಿಮಾನದ ಸಂಕೇತದಂತಿದ್ದ ಲಾಂಛನವನ್ನು ಉಳಿಸಿಕೊಳ್ಳಲು ಹೋರಾಟಕ್ಕೆ ಸಜ್ಜಾಗಿದ್ದಾರೆ. ಇದೇ 16 ರಂದು ರಾಜ್‌ಭವನ್ ಚಲೋ ಕಾರ್ಯಕ್ರಮವನ್ನು ಎಸ್‌ಎಫ್‌ಐ ಮತ್ತಿತರರು ಘೋಷಿಸಿದ್ದಾರೆ. ದಸಂಸ ಸಂಘಟನೆ ಈಗಾಗಲೇ ಹಲವು ಬಾರಿ ಬೀದಿಗಿಳಿದು ಪ್ರತಿಭಟಿಸಿದೆ. "ವಿಸಿ ಹಠಾವೋ, ವಿವಿ ಬಚಾವೋ" ಎಂಬ ಘೋಷಣೆ ಈಗಾಗಲೇ ತುಮಕೂರಿನಾದ್ಯಂತ ಮೊಳಗುತ್ತಿದೆ. ಕರ್ನಾಟಕದಾದ್ಯಂತ ಪ್ರಗತಿಪರ ಶಕ್ತಿಗಳು ಈ ನ್ಯಾಯಯುತ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿವೆ. ಚೆಂಡು ಈಗ ರಾಜ್ಯಪಾಲರ ಅಂಕಣದಲ್ಲಿರುವುದರಿಂದ ಈ ಶನಿ ತುಮಕೂರಿನಿಂದ ತೊಲಗುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ.

ಈತ ಇಷ್ಟೆಲ್ಲಾ ಮಾಡುತ್ತಿರುವುದು ಯಾತಕ್ಕಾಗಿ? ಆತನ ಸಂಘ ಪರಿವಾರದ ಅಜೆಂಡಾವನ್ನು ಜಾರಿ ಮಾಡಲಿಕ್ಕಾಗಿ. ಅದರ ಕೆಲವು ಸ್ಯಾಂಪಲ್‌ಗಳು ಹೇಗಿವೆ ನೋಡಿ.

ಈತ ವಕ್ಕರಿಸಿದ ದಿನದಿಂದಲೇ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಎಲ್ಲೆಂದರಲ್ಲಿ ನಾಗರಕಲ್ಲುಗಳು ಶುರುವಾದವು. ವಿವಿಗೆ ಹೆಜ್ಜೆ ಇಡುತ್ತಿದ್ದಂತೆ ದೊಡ್ಡ ಆಂಜನೇಯನ ಗುಡಿಯೊಂದು ತಲೆಯೆತ್ತಿಬಿಟ್ಟಿತು. ಎಲ್ಲೆಲ್ಲೋ ಅಂಡಲೆಯುತ್ತಿದ್ದ ಪರಾವಲಂಬಿ ಪುರೋಹಿತರಿಗಾಗಿ ಕೆಲವಾರು ಕಾರ್ಯಕ್ರಮಗಳು ರೂಪುಗೊಂಡವು.

ಅಪ್ಪಟ ಆರೆಸ್ಸೆಸ್ ಸಿದ್ಧಾಂತಗಳನ್ನು ಬೋಧಿಸುವ ಹಲವಾರು ಕಾರ್ಯಕ್ರಮಗಳು ಸರ್ಕಾರದ ಖರ್ಚಿನಲ್ಲಿ ನಡೆದಿವೆ. ವೇದಾಂತ ಕಾರ್ಯಕ್ರಮ, ಭಗವದ್ಗೀತೆ ಪಾರಾಯಣ ಇತ್ಯಾದಿಗಳು ಮಾಮೂಲಿಯಾಗಿ ಬಿಟ್ಟಿವೆ. ಅಷ್ಟೆಲ್ಲಾ ಸಾಲದೆಂಬಂತೆ ವಿ.ಎಸ್. ಆಚಾರ್ಯ ಕಾಲವಾಗಿದ್ದೇ ತಡ, ಆತನ ಹೆಸರಿನ್ನು ಒಂದು ಭವನಕ್ಕೆ ಇಡಲಾಗಿದೆ. ಅಷ್ಟು ಮಾತ್ರವಲ್ಲ, ಈ ಹೊಸ ಲಾಂಛನದಲ್ಲಿ ಬಿಜೆಪಿಯ ಚುನಾವಣಾ ಚಿಹ್ನೆಯಾದ ಕಮಲವನ್ನೂ ಸೇರಿಸಲಾಗಿದೆ. ಈತ ಸಂವಿಧಾನ ಬಾಹಿರವಾಗಿ ತನ್ನ ಹಿಡನ್ ಅಜೆಂಡಾಗಳನ್ನು ಹೇಗೆ ಜಾರಿ ಮಾಡುತ್ತಿದ್ದಾನೆ ಎಂಬುದಕ್ಕೆ ಈ ಮೇಲಿನ ಉದಾಹರಣೆಗಳೇ ನಿದರ್ಶನ.

ಹಳೇ ಲೋಗೋ

ಕಮಲದ ಚಿತ್ರವಿರುವ ಹೊಸ ಲೋಗೋ

ಇನ್ನೂ ಈತನ ದಲಿತ ವಿರೋಧಿ ಧೋರಣೆಯನ್ನು ನೆನಸಿಕೊಂಡರೆ ಈ ಕ್ಷುದ್ರಜಂತುವನ್ನು ಕ್ಷಮಿಸುವುದು ಸಾಧ್ಯವೇ ಇಲ್ಲ. ಸುಮಾರು 60 ಮಂದಿ ಎಸ್‌ಸಿ-ಎಸ್‌ಟಿ ವಿದ್ಯಾರ್ಥಿಗಳು ತಮಗೆ ವಿವಿಯಿಂದ ಬರಬೇಕಿದ್ದ ಅಡಾಕ್ ಅಮೌಂಟ್ ಕೇಳಲೆಂದು ಹೋದಾಗ ಹಣ ಕೊಡಲು ನಿರಾಕರಿಸಿದ ಈತನ ಶಿಷ್ಯನಂತಿರುವ ರಿಜಿಸ್ಟ್ರಾರ್ ಆ ಹಣವನ್ನು ವಿವಿಯ ಅಭಿವೃದ್ಧಿಗೆ ಬಳಸಿಕೊಳ್ಳಲಾಗಿದೆ ಎಂದುಬಿಟ್ಟ. ಹಲವು ದಶಕಗಳಿಂದಲೂ ಜಾರಿಯಲ್ಲಿದ್ದ ಈ ಅನುದಾನವನ್ನು ಏಕಾಏಕಿ ನಿಲ್ಲಿಸಿದ್ದೇಕೆ ಎಂದು ಪ್ರಶ್ನೆ ಮಾಡಿದ ವಿದ್ಯಾರ್ಥಿಗಳ ಮೇಲೆ ಯಾವುದೇ ಗಲಾಟೆ ಇಲ್ಲದಿದ್ದರೂ ವಿನಾಕಾರಣ ಪೊಲೀಸ್ ಕೇಸು ಹಾಕಿಸಿದ್ದಾನೆ. ಇದೇ ಪ್ರಕರಣವನ್ನು ಮುಂದಿಟ್ಟುಕೊಂಡು ವಿದ್ಯಾರ್ಥಿಗಳನ್ನು ಪೋಷಕರನ್ನು ಬೆದರಿಸುವ ಹೀನಕೃತ್ಯಕ್ಕೆ ಇಳಿದಿದ್ದಾನೆ.

ಈತನ ಪುರೋಹಿತಶಾಹಿ ಹೀನ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತೊಂದು ಉದಾಹರಣೆ ನೋಡಿ. ಈ ಮೊದಲಿನ ವಿಸಿ ಆಗಿದ್ದ ಅನಂತರಾಮಯ್ಯ ನವರು ದಲಿತರಾಗಿದ್ದರು ಎಂಬ ಕಾರಣಕ್ಕೆ ಅವರು ಬಳಸುತ್ತಿದ್ದ ಯಾವ ವಸ್ತುವನ್ನೂ ಈತ ಬಳಸುತ್ತಿಲ್ಲವಂತೆ. ಅನಂತ ರಾಮಯ್ಯನವರು ಬಳಸಿದ್ದ ಕಾರನ್ನು ಈ ಕಾರಣಕ್ಕೆ ತ್ಯಜಿಸಿಬಿಟ್ಟಿದ್ದಾನೆ. ಎಂದರೆ ಈತನ ತಲೆಯಲ್ಲಿರುವ ಜಾತಿ ಕಸ ಎಷ್ಟು ಕೊಳೆತು ನಾರುತ್ತಿದೆ ಎಂಬುದು ಅರ್ಥವಾಗುತ್ತದೆ.

ಈತ ಪರೀಕ್ಷಾ ಶುಲ್ಕವನ್ನು ಏಕಾಏಕಿ ದುಪ್ಪಟ್ಟು ಮಾಡಿದ್ದನ್ನು ಹಿಂತೆಗೆದುಕೊಳ್ಳುವಂತೆ ಕೇಳಲು ಹೋದ ದಲಿತ ವಿದ್ಯಾರ್ಥಿಗಳಿಗೆ ಈತ ಹೇಳಿದ್ದೇನು ಗೊತ್ತೆ? ಫೀಸು ಕಟ್ಟಲು ಯೋಗ್ಯತೆ ಇಲ್ಲವೆಂದರೆ ಮನೇಲೇ ಇದ್ದುಬಿಡಿ ಅಂತ. ಅಲ್ಲಿಗೆ ಈ ಸಂಘ ಪರಿವಾರದ ಕಟ್ಟಾಳುವಿನ ನೀತಿ ಏನೆಂಬುದು ಸ್ಪಷ್ಟವಿದೆ.

ಸಂಘ ಪರಿವಾರದವರು ಕಟ್ಟಲು ಬಯಸಿರುವ ರಾಮರಾಜ್ಯ, ಹಿಂದೂ ರಾಷ್ಟ್ರ ಮುಂತಾದವು ಹೇಗಿರುತ್ತವೆ ಎಂಬ ಕಲ್ಪನೆ ಬಹಳ ಮಂದಿಗಿಲ್ಲ. ಅದೇನೋ ಸ್ವರ್ಗಕ್ಕೆ ಸಮವಿರಬಹುದು ಎಂದು ಬಹಳ ಅಂದುಕೊಂಡಿದ್ದಾರೆ. ಆದರೆ ಸಂಘ ಪರಿವಾರದ ಹುರಿಯಾಳು ಡಾ. ಎಸ್.ಸಿ. ಶರ್ಮ ತುಮಕೂರು ವಿವಿಯಲ್ಲಿ ಜಾರಿಗೆ ತಂದಿರುವ ಎಲ್ಲಾ ನೀತಿಗಳೂ ಅವರ "ಹಿಂದೂ ರಾಷ್ಟ್ರ"ದ ಸ್ಯಾಂಪಲ್‌ಗಳೇ! ಆದ್ದರಿಂದಲೇ ಬಾಬಾ ಸಾಹೇಬರು "ಅದು ಎಷ್ಟೇ ಬೆಲೆ ತೆತ್ತಾದರೂ ಸರಿ, ಈ ಹಿಂದೂ ರಾಷ್ಟ್ರ ನಿರ್ಮಾಣವನ್ನು ನಾವು ತಡೆಗಟ್ಟಬೇಕು" ಎಂದು ಹೇಳಿದ್ದು. ಇಲ್ಲದಿದ್ದರೆ ಈ ನಾಡಿನ ಬಹುಸಂಖ್ಯಾತ ಮನದಣಿದ ಈ ಮಕ್ಕಳಿಗೆ ಉಳಿಗಾಲವೇ ಇಲ್ಲ.

ರಾಜ್ಯಪಾಲರು ಈಗಲಾದರೂ ಶನಿ ಶರ್ಮನ ವಿರುದ್ಧ ಕ್ರಮ ಕೈಗೊಳ್ಳಲಿ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಶೋಷಿತ 'ಪೌರ'ರ 'ಕಾರ್ಮಿಕ' ಹಕ್ಕು ಹೋರಾಟ

ಇವರು ಎಲ್ಲರಿಗೂ ಬೇಕು, ಆದರೆ ಯಾರಿಗೂ ಬೇಡ!

ಇಂತಹದ್ದೊಂದು ವಿಪರ್ಯಾಸದ ಅನಿವಾರ್ಯ ಮತ್ತು ನಿರ್ಲಕ್ಷ್ಯಗಳ ನಡುವೆ ತೊಳಲಾಡುತ್ತಿರುವ ಪೌರಕಾರ್ಮಿಕರ ಶೋಷಣೆ ಒಂದೆರಡಲ್ಲ, ಅವನ್ನೆಲ್ಲ ಪ್ರತಿಭಟಿಸಬೇಕೆಂಬ ಕನಿಷ್ಠ ಧ್ವನಿಯೂ ಇಲ್ಲದ ಇವರು ಈ ಬಾರಿಯ ಅಂಬೇಡ್ಕರ್ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಜ್ಜಾಗಿದ್ದಾರೆ. ಏಪ್ರಿಲ್ 14 ರಂದು ತಮ್ಮೆಲ್ಲ ಶೋಷಣೆಯ ವಿರುದ್ಧ ಪೌರಕಾರ್ಮಿಕರು ಸಂಘಟಿತ ಪ್ರತಿಭಟನೆಗಿಳಿಯಲಿದ್ದಾರೆ. ಆ ಮೂಲಕ ದಮನಿತರ ಧ್ವನಿಯಾದ ಅಂಬೇಡ್ಕರ್‌ರ ತತ್ವಗಳನ್ನೆಲ್ಲ ಪ್ರತಿಮೆಯನ್ನಾಗಿಸಿದ ಸಮಾಜ, ಸರ್ಕಾರಗಳಿಗೆ ಅಂಬೇಡ್ಕರ್ ಜಯಂತಿಯ ನೈಜ ಆಚರಣೆಯ ರಿವಾಜು ತಿಳಿಸಿಕೊಡಲು ಮುಂದಾಗುವ ಗಟ್ಟಿ ಮನಸ್ಸು ಮಾಡಿದ್ದಾರೆ.

ಜಾತಿಯಲ್ಲಿ ಮಾದಿಗರು, ಯಾನಾದಿಗಳು, ಅರುಂಧತಿಗಳ್ ಎಂದೆಲ್ಲಾ ಗುರುತಿಸಿಕೊಳ್ಳುವ ಇವರನ್ನು ಅದರಲ್ಲೂ ಈ ವರ್ಗದ ಅನಕ್ಷರಸ್ಥ ಹೆಂಗಸರನ್ನು ನಗರ ಸ್ವಚ್ಛತೆಯ ಹೆಸರಲ್ಲಿ ಕಸಗುಡಿಸುವ ಕೆಲಸಕ್ಕೆ ವ್ಯವಸ್ಥಿತವಾಗಿ ಸೀಮಿತವಾಗಿಸಿರೋದೆ ಮೊದಲನೇ ಶೋಷಣೆ. ನೆಮ್ಮದಿಯ ಬದುಕು ಅರಸಿ ದೂರದೂರಿಂದ ಬಂದವರ ಕೈಗೆ ಗಾರ್ಡನ್ ಸಿಟಿ ನೀಡುತ್ತಿರೋದು ಪೊರಕೆಯನ್ನು. ಅಕ್ಷರದ ಗಂಧವೇ ತಿಳಿಯದ ನಿಮ್ಮಂತಹ ಹೆಂಗಸರಿಗೆ ಇನ್ನೇನು ಕೆಲಸ ಸಿಗುತ್ತೆ ಇದೇ ನಿಮಗೆ ಗತಿ ಎಂದೆಲ್ಲ ನೀತಿಬೋಧನೆ ಮಾಡುವ ಕಂಟ್ರಾಕ್ಟರುಗಳು ಇವರನ್ನು ಸ್ಲಮ್‌ಗೆ ಸೀಮಿತವಾಗಿಸುತ್ತಿದ್ದಾರೆ.

ಸರಿ, ಕಾಯಕ ಯಾವುದಾದರೇನು ಅದೂ ಅಲ್ಲದೆ ನಮ್ಮನ್ನು ಈ ಸಮಾಜ ಹಿಂದಿನಿಂದಲೂ ಇಂತಹ ಕೆಲಸಗಳಿಗೆ ತಾನೇ ಬಳಸಿಕೊಳ್ಳುತ್ತಿರೋದು ಎಂಬ ನೆಪದಲ್ಲಿ ಹೈಟೆಕ್ ಸಿಟಿಯ ಮೈ ತೊಳೆಯುವ ಕೆಲಸಕ್ಕಿಳಿದವರಿಗೆ ಮೇಲಿಂದ ಮೇಲೆ ವಂಚನೆ, ನಿಂದನೆಗಳು. ಬೆಂಗಳೂರು ನಗರ ನೀಟಾಗಿ ಕಾಣುವಲ್ಲಿ ಏನಿಲ್ಲವೆಂದರೂ ಇಂತಹ ಹದಿನೈದು ಸಾವಿರ ಪೌರಕಾರ್ಮಿಕರ ಶ್ರಮವಿದೆ. ನಸುಕಿನ 4.30ಕ್ಕೇ ಮೈಲುಗಟ್ಟಲೆ ನಡೆದು ಪೊರಕೆ ಹಿಡಿಯುವ ಇವರು ಬೆಂಗಳೂರು ಎಚ್ಚರವಾಗುವುದರೊಳಗೆ ರಸ್ತೆ ಗುಡಿಸಿ, ಕಸ ಎತ್ತಬೇಕು. ಆದರೆ ಇವರು ವಾಸಿಸುವ ಸ್ಲಮ್‌ಗಳು ಮಾತ್ರ ಅವ್ಯವಸ್ಥೆಗಳ ಆಗರ. ಅಲ್ಲಿ ಓಪನ್ ಜಾಗವೇ ಸ್ನಾನಗೃಹಗಳು. ಇಷ್ಟು ಪಾರ್ಥೇನಿಯಮ್ ಗಿಡಗಳ ಮರೆಯೇ ಶೌಚಾಲಯ. ಕನಿಷ್ಠ ಮೂಲಭೂತ ಸೌಕರ್ಯವೂ ಇಲ್ಲದ ಆ ಜಗವೂ ಕಾಯಮ್ಮಾಗಲ್ಲ, ಯಾರು ಯಾವಾಗ ಎತ್ತಂಗಡಿ ಮಾಡಿಸುತ್ತಾರೋ ಎಂಬ ಆತಂಕ.



ಜನರಿಂದ ಹತ್ತಾರು ಮಾತುಕೇಳಿ, ಮರ್ಜಿ ಪಡೆದು ನಗರ ಸ್ವಚ್ಛಗೊಳಿಸುವ ಇವರಿಗೆ ನೀಡುತ್ತಿರುವ ಸಂಬಳವಾದರೂ ತಿಂಗಳಿಗೆ ಕೇವಲ 2,000/- ಮಾತ್ರ. ಅಸಲಿಗೆ ಇಂತಹ ಕೆಲಸಕ್ಕೆ ಮಹಾನಗರ ಪಾಲಿಕೆಯು ಕನಿಷ್ಠ ರೂ.7300/- ನೀಡಬೇಕೆಂದು ಸರ್ಕಾರ 2011ರ ಫೆಬ್ರುವರಿಯಲ್ಲಿ ಆದೇಶ ಹೊರಡಿಸಿದೆಯಾದರೂ ಅದಕ್ಕೆ ಕಿಮ್ಮತ್ತಿನ ಬೆಲೆ ಇಲ್ಲ. ಆದರೂ ಬೆಂಗಳೂರಿನ 198 ವಾರ್ಡ್‌ಗಳ ಪೈಕಿ 170 ವಾರ್ಡ್‌ಗಳಲ್ಲಿ ನೀಡುತ್ತಿರುವುದು ಕೇವಲ 2000/- ಮಾತ್ರ. ಇನ್ನುಳಿದ ಕಡೆ ಹೋರಾಟ ಮಾಡಿದ್ದಕ್ಕೆ 2554/- ನೀಡಲಾಗುತ್ತಿದೆ. ಇವತ್ತಿನ ಬೆಲೆ ಏರಿಕೆಯ ಖರ್ಚುಗಳಿಗೆ ಲೆಕ್ಕ ಹಾಕಿದರೆ ಒಂದು ಕುಟುಂಬವಲ್ಲ ಒಬ್ಬ ಮನುಷ್ಯನೂ ಬದುಕಲು ಸಾಧ್ಯವಿಲ್ಲ. ಅದರಲ್ಲೂ ಬೆಂಗಳೂರಿನಂತ ನಗರದಲ್ಲಿ ಸಾಧ್ಯವೇ ಇಲ್ಲ. ಇವರದ್ದು ಒಂದರ್ಥದಲ್ಲಿ ಸಿಲಿಕಾನ್ ಸಿಟಿಯ ಭಿಕ್ಷುಕರ ಗಳಿಕೆಗಿಂತಲೂ ಕಡಿಮೆ ಇದು.

ಇವರು ವಾಸಿಸುವ ಸ್ಥಳದಲ್ಲಿ ಮೂಲ ಸೌಕರ್ಯವಿಲ್ಲದಿದ್ದರೂ ಅದಕ್ಕೆ ಇವರ ತಕರಾರಿಲ್ಲ. ಕಸಗುಡಿಸುವ ಕೆಲಸಕ್ಕೆ ನೀಡಬೇಕಾದ ಗಮ್‌ಬೂಟ್, ಗ್ಲೌಸ್‌ಗಳಂತಹ ಸಲಕರಣೆಗಳನ್ನು ಯಾವೊಬ್ಬ ಕಂಟ್ರಾಕ್ಟುದಾರನೂ ನೀಡುತ್ತಿಲ್ಲ. ಅದಕ್ಕೂ ಇವರ ತಕರಾರಿಲ್ಲ. ಆದರೆ ಮಾಡುವ ಕೆಲಸಕ್ಕೆ ವೇತನ ಕೊಡಿ ಎಂಬುದಷ್ಟೇ ಇವರ ಕೂಗು. ಮೂರು ವರ್ಷದ ಹಿಂದೆಯೇ 'ಬಿಬಿಎಂಪಿ ಗುತ್ತಿಗೆ ಪೌರಕಾರ್ಮಿಕರ ಸಂಘ'ವನ್ನು ಕಟ್ಟಿಕೊಂಡು ಇದಕ್ಕಾಗಿ ಅನೇಕ ಬಾರಿ ಬೇಡಿಕೊಂಡಿದ್ದಾರಾದರೂ ಇದುವರೆವಿಗೂ ಯಾರೂ ಸ್ಪಂದಿಸಿಲ್ಲ. ಈಗಾಗಲೇ ಹತ್ತಾರು ಬಾರಿ ಕಾರ್ಮಿಕ ಇಲಾಖೆ, ಬಿಬಿಎಂಪಿ ಕಚೇರಿ, ಸಚಿವರುಗಳ ಮನೆಬಾಗಿಲುಗಳಿಗೆ ಎಡತಾಕಿ ಬಂದಾಗಿದೆ. ಏನೂ ಪ್ರಯೋಜನವಾಗಿಲ್ಲ.

ಇಂತಹ ಕಾರ್ಮಿಕರಿಗೆಂದೇ ಗುತ್ತಿಗೆ ಕಾರ್ಮಿಕ ನಿಯಂತ್ರಣ ಕಾಯ್ದೆ, ವೇತನ ನೀಡಿಕೆ ಕಾಯ್ದೆ, ಕೈಗಾರಿಕಾ ವಿವಾದ ಕಾಯ್ದೆ, ಕನಿಷ್ಠ ವೇತನ ಕಾಯ್ದೆ- ಹೀಗೆ ಇನ್ನೂ ಏನೇನೋ ಕಾಯ್ದೆಗಳಿವೆ. ಆದರೆ ಅವೆಲ್ಲ ಇವರ ವಿಚಾರದಲ್ಲಿ ಇನ್ನೂ ಕಾರ್ಯಪ್ರವೃತ್ತವಾಗಿಲ್ಲ. ಏಕೆಂದರೆ ಇವಕ್ಕೆ ಚಾಲನೆ ನೀಡಬೇಕಾದ ಆಡಳಿತ ವರ್ಗವೇ ಇವರನ್ನು ನಿರ್ಲಕ್ಷಿಸಿ ಕೂತಿದೆ. ಅತಿ ಕಡಿಮೆ ಗುತ್ತಿಗೆಗೆ ಯಾರು ನಗರ ಸ್ವಚ್ಛತೆಯ ಟೆಂಡರ್ ಹಾಕುತ್ತಾರೋ ಅಂತಹ ಗುತ್ತಿಗೆದಾರರಿಗೇ ಕಾಂಟ್ರಾಕ್ಟ್ ನೀಡುವ ಮೂಲಕ ಸರ್ಕಾರವೇ ಇವರಿಗೆ ಕಡಿಮೆ ವೇತನ ನೀಡುವುದಕ್ಕೆ ಕಾರಣವಾಗುತ್ತಿದೆ.

ಅಂತು ಕಡೆಗೂ ಸಮಾಜಕ್ಕೆ ತಮ್ಮ ಅನಿವಾರ್ಯತೆ ಎಂಥದ್ದು ಮತ್ತು ಆ ಅನಿವಾರ್ಯತೆಗೆ ತಮಗೆ ಸಿಗುತ್ತಿರುವ ಭಿಕ್ಷೆಯ ಶಿಕ್ಷೆ, ವಂಚನೆಗಳೆಂತವು ಎಂಬುದನ್ನು ಸಾರ್ವಜನಿಕವಾಗಿ ತೆರೆದಿಟ್ಟು ಆಡಳಿತ ವರ್ಗದ ಗಮನ ಸೆಳೆಯಲು ಕಾರ್ಪೊರೇಷನ್ ಕಚೇರಿಯ ಮುಂದೆ ಸತ್ಯಾಗ್ರಹ ಹೂಡುತ್ತಿದ್ದಾರೆ. ಏಪ್ರಿಲ್ 14ರಂದು ಅಂಬೇಡ್ಕರ್ ಜಯಂತಿಯಿದ್ದು ಸತ್ಯಾಗ್ರಹದ ಸ್ಥಳದಲ್ಲೆ ಅದನ್ನಾಚರಿಸುವ ಮೂಲಕ ಅಂಬೇಡ್ಕರ್ ಜನ್ಮದಿನವನ್ನು ಸಾರ್ಥಕವಾಗಿ ಆಚರಿಸಲಿದ್ದಾರೆ. ಸಮಾಜದ ಅತ್ಯಂತ ಕಟ್ಟಕಡೆಯ ದಲಿತ ಸಮುದಾಯದ ಏಳಿಗೆಗೆ ಚಿಂತಿಸಿದ ಹೋರಾಡಿದ ಅಂಬೇಡ್ಕರ್‌ರ ಜಯಂತಿಯನ್ನು ದಲಿತರು ಇದಕ್ಕಿಂತ ವಿಶೇಷವಾಗಿ ಆಚರಿಸಲು ಸಾಧ್ಯವೇ. ಆದರೆ ಇವರೆಲ್ಲ ನ್ಯಾಯಕ್ಕಾಗಿ ಧರಣಿ ಕೂತ ಹೊತ್ತಲ್ಲಿ ಆಡಳಿತ ವರ್ಗದ ಯಾರೊಬ್ಬರಿಗೂ ಅಂಬೇಡ್ಕರರ ಭಾವಚಿತ್ರಕ್ಕೋ, ಪ್ರತಿಮೆಗೋ ಹಾರಹಾಕುವ ನೈತಿಕ ಹಕ್ಕಿರುವುದಿಲ್ಲ. ಹಾಗೇ ಮಾಡಿದ್ದೇ ಆದಲ್ಲಿ ಅದು ಅಂಬೇಡ್ಕರರಿಗೆ ಮಾಡಬಹುದಾದ ಅಪಚಾರವಾಗುತ್ತದಷ್ಟೇ.

ನಾಗರಿಕ ಸಮಾಜದಲ್ಲಿ 'ಪೌರ ಕಾರ್ಮಿಕ'ರೆಂಬ ಸಭ್ಯ ಮರುನಾಮಕರಣದ ಮೂಲಕ ದಲಿತರನ್ನು ಮತ್ತದೇ ಶೋಷಣೆಗೊಳಪಡಿಸುತ್ತಿರುವ ಕ್ರಮದ ವಿರುದ್ಧ ಸಾರ್ವಜನಿಕರೂ ಧ್ವನಿಯಾಗಬೇಕಿದೆ, ಬೆಂಬಲ ನೀಡಬೇಕಿದೆ. ಅಂದಿನ ದಿನ ತಮ್ಮನ್ನು ಬೆಂಬಲಿಸಿ ಸಾರ್ವಜನಿಕರೂ ಬರಲಿದ್ದಾರೆಂಬ ನಿರೀಕ್ಷೆಯಲ್ಲಿ ಅವರಿದ್ದಾರೆ. ನಮ್ಮ ಅಂಗಳ, ಬೀದಿ, ಊರು ಗುಡಿಸುವ ಅವರಿಗೆ ನಾವು ಅಷ್ಟಾದರೂ ಮಾಡಬೇಕಲ್ಲವೇ........?

• ಲಂಕೇಶ್ ಬಳಗ


ಕಾರವಾರ: ವಿನಂತಿ ಸಾವಿನ ಸುತ್ತ ಹೇತ್ಲಾಂಡಿ ಪೊಲೀಸರ ಹುತ್ತ!



ಸುಂದರ ಸಮುದ್ರ ನಗರಿ ಕಾರವಾರದ ಉದ್ದಗಲಕ್ಕೆ ಅನಾಚಾರ-ವಿಕೃತಿಗಳೇ ತುಂಬಿತುಳುಕುತ್ತಿದೆ! ಸ್ಥಳೀಯ ಶಾಸಕ ಕಂ ಮಂತ್ರಿ ಆನಂದ್ ಅಸ್ನೋಟಿಕರ್ ಎಂಬ ಕಂತ್ರಿ ಅಂಡವೇ ಕಾರವಾರಕ್ಕೆ ದೊಡ್ಡ ಶಾಪದಂತಾಗಿ ಹೋಗಿದ್ದಾನೆ!! ಒಂದೆಡೆ ಮಾಫಿಯಾ, ಮೈನ್ಸ್ (ಅದಿರು, ಮರಳು, ಕಲ್ಲಿಕಲ್ಲು) ಮಾಫಿಯಾ, ತೊಗಲೋದ್ಯಮ ಮಾಫಿಯಾ, ಡಾಕ್ಟರ್ ಮಾಫಿಯಾ, ವಿದ್ಯಾರ್ಥಿಗಳ ಕಾಮಕಾಂಡದ ಕ್ಲಿಪ್ಪಿಂಗ್ಸ್ ಹಂಚಿಕೆ ಮಾಫಿಯಾ... ಒಂದಾ..... ಎರಡಾ.. ಕಾರವಾರದ ತುಂಬೆಲ್ಲ ಅಕ್ರಮ-ಅನೈತಿಕ ದಂಧೆಗಳೇ ದಂಧೆಗಳು!!

ಹಾಗೆ ನೋಡಿದರೆ ಜಿಲ್ಲೆಯ ಪ್ರತಿ ತಾಲ್ಲೂಕಲ್ಲೂ ಪೊಲೀಸ್ ವ್ಯವಸ್ಥೆ ಎಂಬುದು ಕುಸಿದುಬಿದ್ದಿದೆ. ಇತ್ತೀಚಿನ ವರ್ಷಗಳಲ್ಲಿ ಕಾರವಾರಕ್ಕೆ ಬರುವ ಎಸ್ಪಿಗಳಿಗೇಕೋ ತಮ್ಮ ಜಿಲ್ಲಾ ಪೊಲೀಸ್ ತಂಡದ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತಿಲ್ಲ. ಬಹುತೇಕ ಪಿಐ, ಸಿಪಿಐ ಮತ್ತು ಪಿಎಸ್ಐಗಳಿಗೆ ಕರ್ತವ್ಯಪ್ರಜ್ಞೆ, ಖಾಕಿ ನಿಯತ್ತುಗಳೇ ಇಲ್ಲ, ಬರೀ ಮಾಮೂಲಿ ಬಗ್ಗೆಯಷ್ಟೇ ಆಸಕ್ತಿ-ಆಸೆ. ಹೀಗಾಗಿ ಕ್ರಿಮಿನಲ್ ಕರಾಮತ್ತು, ಕಾನೂನುಬಾಹಿರ ಕಾರ್ಯಾಚರಣೆಗಳು ನಿರಂತರ-ನಿರಾತಂಕವಾಗಿ ನಡೆಯುತ್ತಿವೆ.

ಈಗ ಕಾರವಾರದಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠನ ಹೆಸರು ಕೆ.ಟಿ. ಬಾಲಕೃಷ್ಣ ಈತ ಒಂಥರಾ ಬೆಪ್ಪು ತಕ್ಕಡಿಯಂಥ ಖಾಕಿ ಸಾಹೇಬ. ಈತನ ಪೊಲೀಸ್ ಪಡೆಯ ಕಣ್ಣೆದುರೇ ಆಗಬಾರದೆಲ್ಲ ಆಗುತ್ತಿದೆ; ಅಕ್ರಮ-ಅನೈತಿಕತೆ-ಅನ್ಯಾಯ ಘೋರಾಗಿದೆ. ಇದೆಲ್ಲ ಪೊಲೀಸ್ ಅಧಿಕಾರಿಗಳು ಕಂಡೂ ಕಾಣದಂತೆ ನಿಯಮಿತವಾಗಿ ವಸೂಲಿಯಷ್ಟೇ ಮಾಡಿಕೊಂಡಿದ್ದಾರೆ. ಈ ಮೂಗರ್ಜಿಗಳ ಜಿಲ್ಲೆಯಲ್ಲಿ ಖಡಕ್ ಪ್ರತಿಭಟನೆಯೂ ಕಡಿಮೆ. ಹೀಗಾಗಿ ಪೊಲೀಸ್ ಅಧಿಕಾರಿಗಳು ಆರಾಮಾಗಿದ್ದು ಬಿಡುತ್ತಾರೆ.




ಕೆ.ಟಿ.ಬಾಲಕೃಷ್ಣ

ಜಿಲ್ಲೆಯಲ್ಲಿ ಮಟ್ಕಾ, ಓಸಿ, ರಿಕ್ರಿಯೇಟ್ ಕ್ಲಬ್ಬು ಜೂಜು ಅಡ್ಡೆ, ಲಾಟರಿ ಅಂಕದ ಹಾವಳಿ ಮಿತಿಮೀರಿ ಹೋಗಿದೆ; ಸೆಕ್ಸ್ ಸಂಬಂಧ ಕ್ರೈಮ್ ರೇಟ್ ಏರಿದೆ. ಅಮಾಯಕ ಹುಡುಗೀರ ಮಾನ-ಪ್ರಾಣಹರಣವಾಗುತ್ತಿದೆ. ಹಲವೆಡೆ ಸ್ವಯಂಘೋಷಿತ ಸೂಪರ್ ಕಾಪ್-ಟಾಪ್‌ಕಾಪ್‌ಗಳೇ ಮುಂದೆ ನಿಂತು ದೋನಂಬರ್ ದಂಧೆಗೆ ಸಹಕಾರ ಕೊಟ್ಟು 'ಕೂಲಿ' ಪಡೆಯುತ್ತಿದ್ದಾರೆ. ಅಸಹ್ಯ ಸಂಗತಿ ಎಂದರೆ, ಈ ಖಾಕಿ ಕಿರಾತಕರೇ ಸ್ಥಳೀಯ ಪತ್ರಿಕೆಗಳಲ್ಲಿ ತಮ್ಮವರಿಂದ ಹೊಗಳಿಸಿ ಬರೆಸಿಕೊಂಡು, ಅಭಿನಂದನೆಯ ಆ್ಯಡ್ ಕೊಡಿಸಿ ತಮಗೆ ತಾವೇ ತಾರೀಫು ಮಾಡಿಕೊಳ್ಳುತ್ತಿದ್ದಾರೆ. ಇವರ ಅಸಲಿಯತ್ತು ಗೊತ್ತಿರುವ ಜನ ಒಳಗೊಳಗೇ ಧಿಕ್ಕರಿಸಿ ಉಗಿಯುತ್ತಿದ್ದಾರೆ; ಖಾಕಿ ಪವರ್ ಭಯದಿಂದ ಖಾಸಗಿಯಾಗಷ್ಟೇ ನಕ್ಕು ಹಗುರಾಗುತ್ತಿದ್ದಾರೆ.

ಇಂಥ ಕರ್ಮಗೇಡಿ ಖಾಕಿಗಳ ಮೇಲೆ ಎಸ್ಪಿ ಬಾಲಕೃಷ್ಣಗೆ ಹಿಡಿತವೇ ಇಲ್ಲ! ಉದಾಸೀನ ಪ್ರವೃತ್ತಿಯ ಈ ಎಸ್ಪಿಯನ್ನು ಈತನ ಅಧೀನಾಧಿಕಾರಿಗಳೇ ಪಳಗಿಸಿಟ್ಟುಕೊಂಡಿದ್ದಾರೆ. ಹೀಗಾಗಿ ಕಾರವಾರದ ಬಡ ಬಾಲಕಿ ವಿನಂತಿ ಸಾಳ್ಗಾಂವ್ಕರ್ ಅಂಥವರು ಇದ್ದಕ್ಕಿದ್ದಂತೆ ನಿಗೂಢವಾಗಿ ಸತ್ತರೂ ನಿರ್ದಿಷ್ಟ-ಪೂರ್ವ ತನಿಖೆ ನಡೆಯುತ್ತಿಲ್ಲ; ಮಂತ್ರವಾದಿಯ ದೇವಾಲಯಕ್ಕೆ ಹೋಗಿದ್ದ ಹದಿಹರೆಯದ ಯುವತಿ ಸೀಮಾ ಕೋಳೇಕರ್‌ಳಂಥ ನಿಸ್ಸಹಾಯಕಿಯರು ಕಣ್ಮರೆಯಾಗಿ ತಿಂಗಳೆಂಟು ಕಳೆದರೂ ಕೇಳುವವರೇ ಇಲ್ಲ!!

ಜಿಲ್ಲಾ ಕೇಂದ್ರ ಕಾರವಾರದ-ಎಸ್ಪಿ ಬಾಲಕೃಷ್ಣರ ಕಣ್ಣಳತೆಯಲ್ಲೇ ಇರುವ-ಪೊಲೀಸ್ ಪಡೆಯ ಖಾಕಿ ದ್ರೋಹ-ಕರ್ತವ್ಯಭ್ರಷ್ಟತೆ ಸಾರಿ-ಸಾರಿ ಹೇಳುವ ಸ್ಯಾಂಪಲ್ ಒಂದು ಇಲ್ಲಿದೆ. ಕಾರವಾರದ ಕೋಡಿಬಾಗದ ಶಿವಾಜಿ ವಾಡದ ಹದಿಮೂರು ವರ್ಷದ ಹೈಸ್ಕೂಲು ವಿದ್ಯಾರ್ಥಿನಿ ವಿನಂತಿ ಸಂಶಯಾಸ್ಪದವಾಗಿ ಸಾವಿಗೀಡಾಗಿ ಎರಡು ತಿಂಗಳೇ ಕಳೆದಿದೆ. ಆದರೆ ಪ್ರಕರಣ ಮಾತ್ರ ತಾರ್ಕಿಕ ಅಂತ್ಯ ಕಾಣದೆ ದಿನಗಳೆದಂತೆ ನಿಗೂಢವಾಗುತ್ತಿದೆ. ಇದೊಂದು ಕೊಲೆಯೋ? ಆತ್ಮಹತ್ಯೆಯೋ ಎಂದು ಗಟ್ಟಿಯಾಗಿ ಹೇಳುವ ಧೈರ್ಯ ಪೊಲೀಸರಿಗಿರಲಿಲ್ಲ, ಪೊಲೀಸರಲ್ಲಿ ಕನ್‌ಫ್ಯೂಷನ್ ತಾಂಡವ ವಾಡುತ್ತಿದೆ.




ಆದರೆ ಜನರು-ವಿದ್ಯಾರ್ಥಿಗಳು ಇದೊಂದು 'ಪಕ್ಕಾ ಮರ್ಡರ್' ಎಂದು ಹೇಳುತ್ತಿದ್ದಾರೆ. ತಾವೇ ನಿಷ್ಪಕ್ಷಪಾತವಾಗಿ-ಚುರುಕಾಗಿ ಹಂತಕರ ಕೊಲೆಗಡುಕರಿಗೆ ಹೆಡೆಮುರಿ ಕಟ್ಟುವಂತೆ ಒತ್ತಾಯಿಸುತ್ತಲೇ ಇದ್ದಾರೆ. ಆದರೆ ಕಾರವಾರದ ಪೊಲೀಸರು ಮಾತ್ರ ಅದೆತ್ತಲೋ ಕತ್ತೆ ಮೇಯಿಸುತ್ತ ಕುಂತಿದ್ದಾರೆ!!

ಪೊಲೀಸರು ಒಮ್ಮೊಮ್ಮೆ ಕ್ಷೀಣಸ್ವರದಲ್ಲಿ ವಿನಂತಿಯದು ಆತ್ಮಹತ್ಯೆ ಎಂದು ಹೇಳುತ್ತಾರೆ. ಆದರೆ ಈ ಸಾವಿನ ರಹಸ್ಯ ಕೆದಕುತ್ತಾ ಹೋದರೆ ಕೊಲೆ ಎಂಬ ಅನುಮಾನ ಎಂಥವರಿಗೂ ಬರುತ್ತದೆ. ಸಾವಿಗೀಡಾದ ಹುಡುಗಿಯ ಸ್ವಭಾವ, ಸಾಂದರ್ಭಿಕ ಸಾಕ್ಷ್ಯ ಸನ್ನಿವೇಶ ಗಮನಿಸಿದರೆ ಇದೊಂದು ವ್ಯವಸ್ಥಿತ ಕೊಲೆ ಎಂಬಂತೆ ಕಾಣಿಸುತ್ತದೆ. ಅಂದು ರವಿವಾರ. ಫೆಬ್ರವರಿ 12. ಶಾಲೆಗೆ ರಜೆಯಾದ್ದರಿಂದ ವಿನಂತಿ ಸಾಲ್ಗಾಂವ್ಕರ್ ಮನೆಯಲ್ಲೇ ಇದ್ದಳು. ತೀರಾ ಬಡ ಕುಟುಂಬ. ಅಪ್ಪ ಬಡಗಿ ಕೆಲಸ ಮಾಡುತ್ತಿದ್ದರೆ, ತಾಯಿ ಹೋಟೆಲೊಂದರಲ್ಲಿ ಕೂಲಿ ಮಾಡುತ್ತಿದ್ದಳು. ತಾಯ್ತಂದೆ ಸೂರ್ಯ ಮೂಡಿದಾಗ ಚಾಕರಿಗೆ ಹೋದರೆ ಮನೆಗೆ ಬರುವುದು ಹೊತ್ತು ಮುಳುಗಿದ ನಂತರವೇ. ಹೀಗಾಗಿ ಅಂದು ವಿನಂತಿ ಒಬ್ಬಳೇ ಮನೆಯಲ್ಲಿದ್ದಳು.

ಅಂದು ಆಕೆ ಮಧ್ಯಾಹ್ನದವರೆಗೆ ನೆರೆ-ಹೊರೆಯವರೊಂದಿಗೆ ಮಾತಾಡುತ್ತ, ಅಪ್ಪನಿಗೆ ಮಧ್ಯಾಹ್ನದ ಊಟಕ್ಕೆ ತರಕಾರಿ ತರುವಂತೆ ಫೋನಾಯಿಸುತ್ತ, ಕೋಳಿ ಮೊಟ್ಟೆ ಆಮ್ಲೇಟು ಮಾಡಿಕೊಂಡು ತಿನ್ನುತ್ತ ಲವಲವಿಕೆಯಿಂದಲೇ ಇದ್ದಳು. ಆದರೆ ಇದ್ದಕ್ಕಿದ್ದಂತೆ ನಡು ಮಧ್ಯಾಹ್ನದ ಹೊತ್ತಿಗೆ ವಿನಂತಿಯ ಗುಡಿಸಲಿಂದ ಒಂದೇ ಸಮನೆ ಹೊಗೆ ಬರಲಾರಂಭಿಸಿದೆ. ಸುತ್ತಲಿನವರೆಲ್ಲ ಒಟ್ಟಾಗಿದ್ದಾರೆ. ಮನೆಯ ಮುಂದಿನ ಬಾಗಿಲು ಹಾಕಿಕೊಂಡಿದ್ದರೆ, ಹಿಂದಿನ ಬಾಗಿಲು ತೆರೆದೇ ಇತ್ತು. ವಿನಂತಿ ಮನೆ ಸುತ್ತ ಜಮೆಯಾಗಿದ್ದ ಜನ ಒಳಗೆ ಹೋಗಿದ್ದಾರೆ. ಕೋಣೆಯೊಂದರಲ್ಲಿ ಸುಟ್ಟುಕೊಂಡು ಆಕೆ ಒದ್ದಾಡುತ್ತಿದ್ದಳು. ಸುಟ್ಟು ಕರಕಲಾಗಿದ್ದ ಆಕೆಯನ್ನು ಆಸ್ಪತ್ರೆಗೆ ಸೇರಿಸುವ ಪ್ರಯತ್ನ ನಡೆಯಿತಾದರೂ ಆಕೆ ಬದುಕಿ ಉಳಿಯಲಿಲ್ಲ.

ವಿನಂತಿಯ ಜೀವ ವಿನಾಕಾರಣ ಹರಣವಾದ ಕ್ಷಣದಿಂದಲೇ ಎರಡು ಬಗೆಯ ತರ್ಕ-ಕುತರ್ಕಗಳು ಶುರುವಾಗಿ ಬಿಟ್ಟಿತು. ಒಂದು, ವಿನಂತಿ ಅಪ್ಪನ ಅನೈತಿಕ ಸಂಸಾರದಿಂದ ಬೇಸತ್ತು ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳೆಂದು ಸುದ್ದಿ ಹಬ್ಬಿತು. ಆದರೆ ಆಕೆಯ ಸಾವಿನ-ಸ್ಥಿತಿ-ಗತಿ ಗಮನಿಸಿದರೆ, ಇದೊಂದು ರೇಪ್ ಅಂಡ್ ಮರ್ಡರ್ ಇರಬಹುದೆಂಬ ಅನುಮಾನ ಎಲ್ಲೆಲ್ಲೂ ಮೂಡಿತು. ದಿನಗಳೆದಂತೆ ವಿನಂತಿಯದು ಆತ್ಮಹತ್ಯೆಯಲ್ಲ; ಕಾಮುಕರು ಮಾಡಿದ ವ್ಯವಸ್ಥಿತ ಹತ್ಯೆ ಎಂಬ ವಾದವೇ ಬಲವಾಯ್ತು. ಇದಕ್ಕೆ ಹಿನ್ನೆಲೆ-ಸಾಕ್ಷ್ಯಾಧಾರವೂ ಇತ್ತು. ಆದರೆ ಪೊಲೀಸರು ಮಾತ್ರ ವಿನಂತಿ ಸಾವಿನ ರಹಸ್ಯ ಬೇಧಿಸುವ ಪ್ರಾಮಾಣಿಕ ಪ್ರಯತ್ನವನ್ನೇ ಮಾಡಲಿಲ್ಲ. ಈ ದರವೇಶಿ ಪೊಲೀಸರು ವಿನಂತಿ ಸಾವಿಗೀಡಾಗಿ ಎರಡು ದಿನ ಕಳೆದರೂ ಪ್ರಕರಣವನ್ನೇ ದಾಖಲಿಸಿಕೊಂಡಿರಲಿಲ್ಲ. ಯಾವಾಗ ಸಿಟ್ಟಿಗೆದ್ದ ಜನ ಬೀದಿಗೆ ಬಂದರೋ ಆಗ ಎಸ್ಪಿ ಬಾಲಕೃಷ್ಣ ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖಾ ತಂಡವೊಂದನ್ನು 'ನೆಪ'ಕ್ಕಷ್ಟೇ ರಚಿಸಿ ಕೈತೊಳೆದುಕೊಂಡುಬಿಟ್ಟರು!

ಕೊಲೆಗೆ ಆತ್ಮಹತ್ಯೆಯ ಹೆಸರಿಟ್ಟು ಪೊಲೀಸರು ಮತ್ತು ಪಾತಕಿಗಳು ಕರಾಮತ್ತು ಮಾಡುತ್ತಿರುವ ಸಂಶಯವೀಗ ಕಾರವಾರದಲ್ಲಿ ಹೆಚ್ಚಾಗುತ್ತಲೇ ಇದೆ. ವಿನಂತಿಯ ಜೀವನದ ರೀತಿ-ನೀತಿ ನೋಡಿದರೆ ಇದು ಆತ್ಮಹತ್ಯೆ ಅಲ್ಲವೆಂಬಂತೆ ಅನ್ನಿಸುತ್ತದೆ. ವಿನಂತಿಯ ತಂದೆ-ತಾಯಿ ತೀರಾ ಬಡವರಾದರೂ ಮಗಳಿಗೆ ಯಾವ ತೊಂದರೆಯೂ ಆಗದಂತೆ ಕಕ್ಕುಲತೆಯಿಂದ ಬೆಳೆಸಿದ್ದರು. ಕುಟುಂಬದ ಯಾವ ತಾಪತ್ರಯಗಳೂ ಆಕೆಯನ್ನು ಬಾಧಿಸಿದಂತೆ ಕಾಣಿಸುತ್ತಿರಲಿಲ್ಲ. ಆಕೆಯ ನಡೆ-ನುಡಿಯಲ್ಲಿ ನೋವು-ಬೇಸರ ಎಂಬುದೇ ಇರಲಿಲ್ಲ. ಆಕೆಯ ತಂದೆಯ ಸೆಕೆಂಡ್ ಅಫೇರ್ ಬಗ್ಗೆ ಅವಳೆಂದೂ ತಲೆ ಕೆಡಿಸಿಕೊಂಡಿರಲೂ ಇಲ್ಲ, ಅದಾಕೆಗೆ ಗೊತ್ತಿರುವ ಸಾಧ್ಯತೆಯೂ ಇರಲಿಲ್ಲ. ವಿನಂತಿಯ ಶಾಲೆಯ ಶಿಕ್ಷಕರು, ಕುಟುಂಬಸ್ಥರು ಕೂಡ ಆಕೆ ಆತ್ಮಹತ್ಯೆಗೆ ಪ್ರಯತ್ನಿಸುವಂಥವಳಲ್ಲ; ಅಂಥ ಕಷ್ಟ-ಒತ್ತಡ ಆಕೆಗಿರಲಿಲ್ಲ, ಗುಣ-ನಡತೆಯೂ ಚೆನ್ನಾಗಿತ್ತು. ಬಿಸಿನೀರು ಕಂಡರೂ ಹೆದರುತ್ತಿದ್ದ ಹುಡುಗಿ ಸೀಮೆಎಣ್ಣೆ ಸುರಿದುಕೊಂಡು ಸಾವಿಗೆ ಪ್ರಯತ್ನಿಸುತ್ತಾಳಾ? ಎಂಬುದು ನೆರೆ-ಹೊರೆಯವರ-ಶಿಕ್ಷಕರ ಸಹಜ ಪ್ರಶ್ನೆ. ಆದರೆ ಈ ಪ್ರಶ್ನೆಗಳ್ಯಾಕೋ ಪೊಲೀಸರಿಗೆ ಅರ್ಥವೇ ಆಗುತ್ತಿಲ್ಲ!



ಮುಗ್ಧ ವಿನಂತಿಯನ್ನು ಪುಂಡ-ಪೋಕ್ರಿಗಳು ಕಾಡಿ ಕೊಂದಿರಬಹುದೆಂಬ ಅನುಮಾನ ಬರಲು ಕೆಲವು ಸಾಂದರ್ಭಿಕ ಸಂಗತಿಗಳು ಇದೆ. ವಿನಂತಿಯ ವಯಸ್ಸು ಬರೀ ಹದಿಮೂರು. 8ನೇ ತರಗತಿಯಲ್ಲಿ ಆಕೆ ಕಲಿಯುತ್ತಿದ್ದಳು. ಆದರೆ ಹದಿನೆಂಟರ ಪ್ರಾಯಸ್ಥೆಯಂತೆ ಬೆಳೆದು ನಿಂತಿದ್ದಳು. ಆಕೆಯ ಕೌಟುಂಬಿಕ ಬಡತನ, ದೈಹಿಕ ಸಿರಿವಂತಿಕೆ, ಒಬ್ಬೊಂಟಿಯಾಗಿ ಮನೆಯಲ್ಲಿ ಇರುತ್ತಿದ್ದ ಪರಿಸ್ಥಿತಿಗಳೆಲ್ಲ ಪೋಲಿಗಳನ್ನು ಪ್ರಚೋದಿಸುವಂತಿತ್ತು, ಒಂದಿಷ್ಟು ಬೇವರ್ಸಿಗಳ ಕಣ್ಣು ಈ ಅಮಾಯಕ ಹುಡುಗಿಯ ಮೇಲೆ ಬಿದ್ದೂ ಇತ್ತು! ಆಕೆಯ ಮನೆಯ ಗೋಡೆಯ ಮೇಲೆ ಅಶ್ಲೀಲವಾಗಿ ಚಿತ್ರಬಿಡಿಸುವುದು, 'ವಿನಂತೀ' ಎಂದು ಕೂಗುವುದು, ಮನೆ ಮೇಲೆ ಕಲ್ಲು ಹೊಡೆಯೋದು, ಬಾಗಿಲು ಬಡಿಯೋದು, ಆಕೆಯ ಹೆಸರು ಗೋಡೆ ಮೇಲೆ ಬರೆಯೋದು... ದುಂಡಾದ ಚುಡಾಯಿಸುವಿಕೆ-ಸತಾಯಿಸುವಿಕೆ ಸುತ್ತಲಿನ ಉಂಡಾಡಿ ಪುಂಡರಿಂದ ನಡೆದಿತ್ತು.

ಹಾಗಂತ ಇದ್ಯಾವುದೂ ವಿನಂತಿಯನ್ನು ಆತ್ಮಹತ್ಯೆ ನಿರ್ಧಾರಕ್ಕೆ ಬರುವಂತೆ ಮಾಡಿರುವ ಸಾಧ್ಯತೆ ಇಲ್ಲ, ಏಕೆಂದರೆ ಆಕೆ ಇದೆಲ್ಲದರಿಂದ ಚಿಂತೆಗೀಡಾದಂತೆ ಕಾಣಿಸುತ್ತಿರಲಿಲ್ಲ. ಆದರೆ ವಿನಂತಿಯ ಏಕಾಂಗಿತನ ಮತ್ತು ಅಸಹಾಯಕತೆ ಪ್ರಭಾವ ಬೀದಿ ಕಾಮಣ್ಣರಿಗೆ ಆಕೆಯ ಮೇಲೆ ಅತ್ಯಾಚಾರ ನಡೆಸಲು, ಪ್ರತಿಭಟಿಸಿದರೆ ಕೊಂದೇ ಹಾಕಲು ಅನುಕೂಲಕರವಿತ್ತು, ಅಂದು ಹಾಗೇ ಆಗಿರುವ ಸಾಧ್ಯತೆಯೇ ಹೆಚ್ಚು. ಒಂದು ತರ್ಕದ ಪ್ರಕಾರ ವಿನಂತಿ ಮೇಲೆ ಪುಂಡರ ದಂಡೊಂದು ದಂಡೆತ್ತಿ ಹೋಗಿರಬೇಕು. ಮಾಸ್ ರೇಪ್ ಆಗಿರಲೂಬಹುದು ಅಥವಾ ಆಕೆಯ ಪ್ರತಿರೋಧದ ಹೊತ್ತಲ್ಲಿ ಕಾಮಪಿಶಾಚಿಗಳು ಉಸಿರುಗಟ್ಟಿಸಿ ಕೊಂದು ಹಾಕಿ ಸೀಮೆಎಣ್ಣೆ ಸುರಿದು ಬೆಂಕಿಕಡ್ಡಿ ಗೀರಿರಬಹುದು. ಆತ್ಮಹತ್ಯೆ ಎಂದು ಬಿಂಬಿಸಲು ಈ ವ್ಯವಸ್ಥಿತ ಸಂಚು ನಡೆದಿರಬಹುದು. ಇದೆಲ್ಲಕ್ಕೂ ಸ್ಪಷ್ಟ ಉತ್ತರ ಕೊಡಬಲ್ಲ ವಿನಂತಿಯ ಪೋಸ್ಟ್‌ಮಾರ್ಟಮ್ ವರದಿ ಬಗ್ಗೇ ಪೊಲೀಸರು ಮೋಗಮ್ ಆಗಿದ್ದಾರೆ! ಇದು ಪೋಲಿಗಳ ಮೇಲಿನ ಸಂಶಯಕ್ಕಿಂತ ಪೊಲೀಸರ ಮೇಲೆ ಅನುಮಾನ ಹೆಚ್ಚಿಸಿದೆ. ವಿನಂತಿ ಕೊಂದವರು ಹಣವಂತರ ಮಕ್ಕಳು, ರಾಜಕೀಯಕೃಪಾಶೀರ್ವಾದದ ಪುಂಡರೆಂಬ ಮಾತೂ ಈಗ ಕಾರವಾರದಲ್ಲಿ ಕೇಳಿಬರುತ್ತಿದೆ!!

ವಿನಂತಿಯದು ಕೊಲೆಯೆಂಬುದು ಆಕೆಯ ಮನೆಯ ಸನ್ನಿವೇಶ, ಸಾಯುವ ಮೊದಲಿನ ಆಕೆಯ ಚಟುವಟಿಕೆಯಿಂದ ದೃಢವಾಗುತ್ತದೆ! ಆಕೆ ಸಾಯುವ ಸ್ವಲ್ಪ ಹೊತ್ತಿಗೆ ಮೊದಲು ಅಂಗಡಿಗೆ ಹೋಗಿ ಕಿರಾಣಿ ಸಾಮಾನು ತಂದಿದ್ದಾಳೆ. ಅಡುಗೆ ಮಾಡಿದ್ದಾಳೆ. ಊಟ ಮಾಡಿದ್ದಾಳೆ. ಖುಷಿ-ಖುಷಿಯಾಗೇ ಇದ್ದಾಳೆ. ಹಾಗಂತ ಅಕ್ಕ-ಪಕ್ಕದವರು ಹೇಳುತ್ತಾರೆ. ಹಾಗೊಮ್ಮೆ ಆಕೆಯೇ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಾಕಿಕೊಂಡರೆ ವಿಲವಿಲ ಒದ್ದಾಡುತ್ತ, ಬೊಬ್ಬೆ ಹೊಡೆಯಬೇಕಿತ್ತು, ನೋವಿಂದ ವಿಕಾರವಾಗಿ ಕಿರುಚಬೇಕಿತ್ತು. ಆದರೆ ಯಾವ ಚೀರಾಟ-ನರಳಾಟವೂ ನೆರೆಹೊರೆಯವರಿಗೆ ಕೇಳಿಸಿಲ್ಲ! ಆಕೆ ಸುಟ್ಟುಕೊಂಡು ಬಿದ್ದಿದ್ದ ಕೋಣೆಯ ಪಕ್ಕದ ಕೋಣೆಯಲ್ಲಿ ಸೀಮೆಎಣ್ಣೆ ಬಾಟಲಿ ಮತ್ತು ಬೆಂಕಿಪೊಟ್ಟಣ ಇದ್ದ ಸ್ಥಳದಲ್ಲೇ ಇದ್ದವು! ಇದೆಲ್ಲ ನೋಡುವಾಗ ಆಕೆಯನ್ನು ಯಾರೋ ಕೊಂದು ಬೆಂಕಿ ಹಚ್ಚಿದ್ದಾರೆಂಬ ಅನುಮಾನ ಬರುತ್ತದೆ. ಆದರೆ ಈ ಸಂಶಯ ಕಾರವಾರದ ದಡ್ಡ ಪೊಲೀಸರಿಗೆ ಮಾತ್ರ ಕಾಡುತ್ತಿಲ್ಲ!!

ವಿದ್ಯಾರ್ಥಿ ಒಕ್ಕೂಟದವರು, ಸಾರ್ವಜನಿಕರು ವಿನಂತಿ ಸಾವಿನ ತನಿಖೆಯ ಮಂದಗತಿ ವಿರುದ್ಧ ಹಲವು ಬಾರಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಆದರೆ ದಪ್ಪ ಚರ್ಮದ ಖಾಕಿ ಕಿರಾತಕರಿಗೆ ಎಚ್ಚರವಾಗಿಲ್ಲ. ವಿನಂತಿ ಸಂಶಯಾಸ್ಪದವಾಗಿ ಸತ್ತು ಎರಡು ತಿಂಗಳು ಗತಿಸಿದರೂ ಕಾರವಾರ ಪೊಲೀಸರಿಗೇಕೆ ಸಣ್ಣ ಸುಳಿವೂ ಸಿಕ್ಕಿಲ್ಲ? ಪೊಲೀಸ್ ವರಿಷ್ಠಾಧಿಕಾರಿ ಬಾಲಕೃಷ್ಣ ಏಕಿಷ್ಟು ಉದಾಸೀನದಿಂದಿದ್ದಾರೆ? ಆತ ನೇಮಿಸಿದ ತನಿಖಾ ತಂಡ ಏನಾಯ್ತು? ಸ್ಥಳೀಯ ಶಾಸಕ ಕಂ ಮಂತ್ರಿ ಆನಂದ್ ಅಸ್ನೋಟಿಕರ್ ಏಕೆ ಸುಮ್ಮನಿದ್ದಾನೆ. ಕ್ಷುಲ್ಲಕ ಕಾರಣಕ್ಕೆಲ್ಲ ಕಾರವಾರದಲ್ಲಿ ನೆಲ-ಮುಗಿಲು ಒಂದು ಮಾಡಿ ತಿಪ್ಪರಲಾಗ ಹಾಕುವ ಅಸ್ನೋಟಿಕರ್ ಅಮಾಯಕ ಹುಡುಗಿಯ ಜೀವ ಹೋದರೂ ಬಾಯ್ಮುಚ್ಚಿಕೊಂಡಿದ್ದಾನೇಕೆ?

ಕೊನೇಪಕ್ಷ ಆತ್ಮಹತ್ಯೆ ಎಂದಾದರೂ ಸಾಕ್ಷ್ಯಾಧಾರ ಸಮೇತ ಸಾರಲು ಮಂತ್ರಿ ಅಸ್ನೋಟಿಕರ್ ಮತ್ತು ಎಸ್ಪಿ ಬಾಲಕೃಷ್ಣರಿಂದ ಏಕಾಗುತ್ತಿಲ್ಲ? ಕೊಲೆ ತನಿಖೆಯೂ ಇಲ್ಲ, ಆತ್ಮಹತ್ಯೆ ಎಂಬ ಘೋಷಣೆಯೂ ಇಲ್ಲ ಏಕೆ? ಪೊಲೀಸ್ ಕೈಕಟ್ಟಿಹಾಕಿರುವ ಶಕ್ತಿ ಯಾವುದು? ವಿನಂತಿಯ ಪ್ರೇತ ಜಿಲ್ಲಾ ಪೊಲೀಸ್ ವರಿಷ್ಠನಿಗಷ್ಟೇ ಅಲ್ಲ, ಮಂತ್ರಿ ಅಸ್ನೋಟಿಕರ್‌ನ ಹೆಗಲೇರುವುದು ಗ್ಯಾರಂಟಿ.


ಇತ್ತ ಗೃಹ ಮಂತ್ರಿ ಅಶೋಕ್ ಗಮನ ಹರಿಸುವರಾ? ಮಂತ್ರಿ ಅಸ್ನೋಟಿಕರ್, ಎಸ್ಪಿ ಬಾಲಕೃಷ್ಣರ ಪೊಲೀಸ್ ಪಡೆ ಮೇಲೆ ನಂಬಿಕೆ ಕಳೆದುಕೊಂಡಿರುವ ಜನ ಕೆರಳಿ ಬೀದಿಗಿಳಿವ ಮೊದಲೇ ಗೃಹ ಇಲಾಖೆ ಎಚ್ಚೆತ್ತುಕೊಂಡೀತಾ? ಜಿಲ್ಲಾಡಳಿತ ವಿನಂತಿ ಸಾವಿಗೆ ನ್ಯಾಯ ಒದಗಿಸುವ ಹೊಣೆ ನಿಭಾಯಿಸೀತಾ?

• ನಹುಷ

ಒಕ್ಕಲಿಗ ಜನಾಂಗ ಮತ್ತು ಒಕ್ಕಲಿಗರ ಸಂಘದ ಪಾಲಿಗೆ ಕುಲಘಾತುಕರಾದ ಖದೀಮರೆಲ್ಲರನ್ನೂ ಒಂದು ತಕ್ಕಡಿಯಲ್ಲಿಟ್ಟರೆ ಅವರೆಲ್ಲರ ಸಮಕ್ಕೆ ತೂಗುವಷ್ಟು ದುಷ್ಟತನವಿರುವವನು ಸಂಘದ ಹಾಲಿ ಅಧ್ಯಕ್ಷ ಕೆಂಚಪ್ಪ ಗೌಡ. ಸ್ವಭಾವತಃ ಈತ ಲ್ಯಾಂಡ್ ಗ್ರಾಬರ್ ಮತ್ತು ಲಿಕ್ಕರ್ ದೊರೆ. ಇಂಥ ದುಷ್ಟನನ್ನು ಬೆಂಬಲಿಸುವ ಮಂತ್ರಿ ಬಚ್ಚೇಗೌಡ ಹೊಟ್ಟೆಗೆ ಏನು ತಿನ್ನುತ್ತಾನೆ? ಇಷ್ಟಾಗ್ಯೂ ಪ್ರಜ್ಞಾವಂತ ಒಕ್ಕಲಿಗರು ಕೈಕಟ್ಟಿ ಕೂತಿದ್ದಾರೆಂದರೆ ಇದಕ್ಕಿಂತ ದುರಂತ ಬೇಕೆ?


• ರಾ. ಸೋಮನಾಥ್

ಒಕ್ಕಲಿಗರ ಸಂಘದಲ್ಲಿ ಕಳ್ಳರ ಕೂಟ





ಕೆಂಚಪ್ಪ ಗೌಡ




ಮಂಜು

ಒಕ್ಕಲಿಗರ ಸಂಘದ ಸರ್ವನಾಶವನ್ನು ತಪ್ಪಿಸಹೊರಟ ಜನಾಂಗದ ಮುಖಂಡರ ಶತಪ್ರಯತ್ನ ವಿಫಲಗೊಂಡಿದೆ. ಶಾಪವಾಗಿ ಸಂಘಕ್ಕೆ ವಕ್ಕರಿಸಿದ ಕೆಂಚಪ್ಪ ಗೌಡನ ಕಪಿಮುಷ್ಠಿ ಮತ್ತಷ್ಟು ಬಿಗಿಯಾಗಿದೆ.

ಒಬ್ಬ ಕೆಂಚಪ್ಪ ಗೌಡ ಮಾತ್ರವಲ್ಲ, ಕಾರ್ಮಿಕ ಮಂತ್ರಿ ಬಿ.ಎನ್. ಬಚ್ಚೇಗೌಡ ಕೂಡ ಈ ಸಾರಿ ಸಂಘದ ಸರ್ವನಾಶಕ್ಕೆ ಜೋಡಿಸಿದ್ದು ಒಕ್ಕಲಿಗರ ದುರಂತದ ಯಾವ ಪ್ರಾರಬ್ಧವೋ-

ತಮ್ಮೆಲ್ಲಾ ಪ್ರತಿಷ್ಠೆ, ಕುಖ್ಯಾತಿ, ಪಾರ್ಟಿ, ಒಳಜಗಳಗಳನ್ನು ಮರೆತು ಕನಿಷ್ಠ ಜನಾಂಗಕ್ಕಾದರೂ ಒಳಿತಾಗಲಿ ಎಂದು ಪಂಚಾಯ್ತಿಗೆ ಬಂದ ಜೆಡಿಎಸ್ ಮುಖಂಡ ಚಲುವರಾಯಸ್ವಾಮಿ, ಕಾಂಗ್ರೆಸ್ ಘಟೋದ್ಘಜ ಡಿಕೆ, ಗೃಹ ಮಂತ್ರಿ ಆರ್. ಅಶೋಕ್ ಮುಂತಾದವರೆಲ್ಲರಿಗೂ ಮುಟ್ಟಿನೋಡಿಕೊಳ್ಳುವಂತೆ ಅವಮರ್ಯಾದೆ ಮಾಡಿ ಸಾಗಹಾಕಿದ ಹೊಸಕೋಟೆ ಖದೀಮರಾದ ಬಚ್ಚೇಗೌಡ, ಕೆಂಚಪ್ಪ ಗೌಡ ಜೋಡಿಯೇ ಸದ್ಯ ಒಕ್ಕಲಿಗರ ಸಂಘದ ಅಸಲಿ ಖಳನಾಯಕರು!


ಸಣ್ಣಪುಟ್ಟ ಮಾರ್ವಾಡಿ ಗುಂಪುಗಳು, ರೆಡ್ಡಿ, ನಾಯ್ಡು ರೊಕ್ಕಸ್ಥರು ಹುಟ್ಟುಹಾಕಿದ ಶಿಕ್ಷಣ ಸಂಸ್ಥೆಗಳಿಂದು ಆಸ್ತಿ, ಐಶ್ವರ್ಯದಲ್ಲಿ ಒಕ್ಕಲಿಗರ ಸಂಘವನ್ನು ಮೀರಿ ನಿಂತಿವೆ. ಜೈನ್ ಕಾಲೇಜಿನ ಖದೀಮ ಚೆನ್‌ರಾಜ್ ಜೈನ್ ಒಬ್ಬನೇ ಇಡೀ ಒಕ್ಕಲಿಗರ ಸಂಘವನ್ನು ಖರೀದಿಸಬಲ್ಲಷ್ಟು ಡೊನೇಷನ್ ದೋಚಿದ್ದಾನೆ. ರಾಜಾಜಿನಗರದ ತಮಿಳು ಪುಂಗವ ಸೆಂಟ್ ಆನ್ಸ್ ಬಾಲಕೃಷ್ಣನ ವೆಂಕಟ್ ಇಂಟರ್‌ನ್ಯಾಷನಲ್ ಸಾಮ್ರಾಜ್ಯ ಆಕ್ಸ್‌ಫರ್ಡ್ ನರಸರಾಜುವಿನ ಕ್ಯಾಪಿಟೇಷನ್ ಆಧಿಪತ್ಯ, ಮಾತಾ ಅಮೃತಾನಂದಮಯಿಯ ಕೋರ್ಸುಗಳ ಕೋಟೆ, ವಿಟ್ರಿಯಾ ಚಿನ್ನಸ್ವಾಮಿರಾಜುವಿನ ಕಾಲೇಜು ಸಮೂಹ; ಇತ್ಯಾದಿಗಳ ಮುಂದೆ ಒಕ್ಕಲಿಗರ ಸಂಘ ಇವತ್ತು ಡಲ್ಲು ಹೊಡೆಯುತ್ತಿದೆಯೆಂದರೆ ಅದಕ್ಕೆ ಮುಖ್ಯ ಕಾರಣವೇ ಗೆದ್ದು ಬಂದ ಡೈರೆಕ್ಟರುಗಳೆಲ್ಲ ಸಂಘದ ಲೂಟಿಗೆ ನಿಂತಿದ್ದು ಮತ್ತು ಸಂಘದ ಕೆಚ್ಚಲನ್ನೇ ಕುಯ್ದು ತಾವು ಕುಬೇರರಾದದ್ದು.



ಡಾ. ಮಹದೇವ್



ಶಿವಣ್ಣ



ಮುನೇಗೌಡ



ಬಾಲಕೃಷ್ಣ



ನೀಲಕಂಠ

ಸಜ್ಜೆಪಾಳ್ಯದ ಆಸ್ತಿ

ಒಕ್ಕಲಿಗ ಜನಾಂಗ ಮತ್ತು ಒಕ್ಕಲಿಗರ ಸಂಘದ ಪಾಲಿಗೆ ಕುಲಘಾತುಕರಾದ ಇಂಥ ಖದೀಮರೆಲ್ಲರನ್ನೂ ಒಂದು ತಕ್ಕಡಿಯಲ್ಲಿಟ್ಟರೆ ಅವರೆಲ್ಲರ ಸಮಕ್ಕೆ ತೂಗುವಷ್ಟು ದುಷ್ಟತನವಿರುವವನು ಸಂಘದ ಹಾಲಿ ಅಧ್ಯಕ್ಷ ಕೆಂಚಪ್ಪ ಗೌಡ. ಸ್ವಭಾವತಃ ಈತ ಲ್ಯಾಂಡ್ ಗ್ರಾಬರ್ ಮತ್ತು ಲಿಕ್ಕರ್ ದೊರೆ. ಹೊಸಕೋಟೆ, ಸರ್ಜಾಪುರ, ಕೆ.ಆರ್. ಪುರ ಸೇರಿದಂತೆ ಅನೇಕ ಕಡೆಗಳಲ್ಲಿ ಈತನ ಬಾರುಗಳಿವೆ. ಅಲ್ಲಿ ಖುಲ್ಲಂಖುಲ್ಲಾ ಥರ್ಡ್ ಲಿಕ್ಕರ್ ದಂಧೆಯಿದೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಒಕ್ಕಲುತನಕ್ಕಾಗಲಿ, ಆ ಜನಾಂಗದ ಹಿತಾಸಕ್ತಿಗಾಗಲಿ ಈತ ಸರಿಹೊಂದುವುದಿಲ್ಲ, ಆದರೆ ಕಳೆದ ಹತ್ತಾರು ವರ್ಷಗಳಿಂದ ಒಕ್ಕಲಿಗರ ಸಂಘದ ಡೈರೆಕ್ಟರಾಗಿ ಗೆಲ್ಲುತ್ತಲೇ ಇದ್ದಾನೆ. ಮರಿಗೌಡ, ವೆಂಕಟಗಿರಿ ಗೌಡ, ಸಂಘದ ಸಂಸ್ಥಾಪಕರಾದ ಮಾರಪ್ಪ ಮತ್ತು ಮುನಿಸ್ವಾಮಪ್ಪ, ಗುತ್ತಲ ಗೌಡ, ಡಾ. ಕೆ.ಎಸ್. ರಾಮೇಗೌಡ, ಡಾ. ಪಾರ್ಥಸಾರಥಿ, ಪಿಳ್ಳಭೈರಪ್ಪ ತ.ರಂ. ಕೃಷ್ಣೇಗೌಡ, ಡಾ. ವಿಠ್ಠಲ, ಬಿ.ಎಸ್. ಹನುಮಾನ್ ಇತ್ಯಾದಿ ಪ್ರಾಮಾಣಿಕರೂ ಜನಾಂಗದ ಹಿತೈಷಿಗಳೂ ಆಗಿ ಹೋದ ಸಂಘಕ್ಕೆ ಹಾಳೂರಿಗೆ ಉಳಿದವನೇ 'ಗೌಡ' ಎಂಬಂತೆ 2008 ರಲ್ಲಿ ಅಧ್ಯಕ್ಷನಾದವನು ಕೆಂಚಪ್ಪ ಗೌಡ. ಅದಕ್ಕೂ ಮುನ್ನ ಪ್ರೊ. ವೆಂಕಟಗಿರಿ ಗೌಡರು ಅಧ್ಯಕ್ಷರಾಗಿದ್ದಾಗ ಈತನೇ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದ.

ಹಾಗೆ ಸಂಘದ ಕಾರ್ಯದರ್ಶಿಯಾಗಿದ್ದ ಕೆಂಚಪ್ಪ ಗೌಡ ಮಾಡಿದ ಮಹಾಘಾತವೆಂದರೆ ಸಜ್ಜೆಪಾಳ್ಯದಲ್ಲಿ ಸಂಘಕ್ಕೆಂದು ದಾನವಾಗಿ ಕೊಟ್ಟಿದ್ದ 96 ಎಕರೆಗಳಷ್ಟು ಜಮೀನನ್ನು ರಿಯಲ್ ಎಸ್ಟೇಟ್ ಖದೀಮರಿಗೆ ಮಾರಿಕೊಂಡಿದ್ದು!

ಹೆಚ್ಚೂಕಮ್ಮಿ ಐನೂರು ಕೋಟಿ ರೂಪಾಯಿಗಳ ಮಾರುಕಟ್ಟೆ ಮೌಲ್ಯವುಳ್ಳ ಸಜ್ಜೆಪಾಳ್ಯದ ಸೊತ್ತೇನಾದರೂ ಸಂಘಕ್ಕೆ ಬಂದಿದ್ದರೆ ಅದು ಇಡೀ ಒಕ್ಕಲಿಗರ ಸಂಘವನ್ನೇ ನಾಡಿನ ಬಲಾಢ್ಯ ಶಿಕ್ಷಣ ಸಂಸ್ಥೆಯನ್ನಾಗಿಸುತ್ತಿತ್ತು, ಕೆಎಲ್‌ಇ, ಆದಿಚುಂಚನಗಿರಿ, ಸುತ್ತೂರು ಇತ್ಯಾದಿ ಶೈಕ್ಷಣಿಕ ಸಾಮ್ರಾಜ್ಯಗಳ ಸರಿಸಮಕ್ಕೆ ಒಕ್ಕಲಿಗರ ಸಂಘ ನಿಲ್ಲುತ್ತಿತ್ತು, ಆದರೆ ಸಂಘಕ್ಕೆ ಗೆದ್ದಲಾಗಿ ಒಕ್ಕರಿಸಿದ ಕೆಂಚಪ್ಪ ಗೌಡನಿಗೆ ಇದರಿಂದ ದುಡ್ಡು ಹುಟ್ಟಬೇಕಲ್ಲ?

ಅಧ್ಯಕ್ಷರಾಗಿದ್ದ ವೆಂಕಟಗಿರಿ ಗೌಡರನ್ನೇ ಯಾಮಾರಿಸಿ ರಿಯಲ್ ಎಸ್ಟೇಟ್ ಖದೀಮರ ಜೊತೆ ಕೈಜೋಡಿಸಿದ. ಕೋಟಿಗಟ್ಟಲೆ ಕಮೀಷನ್ ತಿಂದು ನೆಲಗಳ್ಳರ ವಿರುದ್ಧ ಸಂಘ ಹಾಕಿದ್ದ ಮೊಕದ್ದಮೆಯನ್ನು ರಾಜಿ ಮಾಡಿಕೊಂಡ. ಇಂಥ ಕೆಂಚಪ್ಪ ಗೌಡನ ಕುಲಘಾತುಕ ದುರಾಚಾರದ ವಿರುದ್ಧ ರೊಚ್ಚಿಗೆದ್ದವರು ಈಗ ಸಂಘಕ್ಕೆ ಡೈರೆಕ್ಟರುಗಳಾಗಿ ಗೆದ್ದುಬಂದ ಡಾ. ಅಪ್ಪಾಜಿ ಗೌಡ, ಅ. ದೇವೇಗೌಡ, ಪ್ರೊ. ನಾಗರಾಜ್, ಡಿಸಿಕೆ ಕಾಳೇಗೌಡ, ಎ. ಪ್ರಸಾದ್, ಆಡಿಟರ್ ನಾಗರಾಜ್, ಪ್ರೊ. ಮಲ್ಲಯ್ಯ ಮುಂತಾದ ಪ್ರಾಮಾಣಿಕರು. ಅದರಲ್ಲೂ ಡಾ. ಅಪ್ಪಾಜಿ ಗೌಡರು ಸುಪ್ರೀಂಕೋರ್ಟ್‌ತನಕ ಹೋರಾಡಿ ಸಜ್ಜೆಪಾಳ್ಯದ 96 ಎಕರೆ ಸೊತ್ತನ್ನು ಉಳಿಸಿಕೊಂಡರು. ದುರಂತವೆಂದರೆ 2008 ರ ಸಂಘದ ಚುನಾವಣೆಯಲ್ಲಿ ಯಾವ ರಾಜಕೀಯದ ಎಲೆಕ್ಷನ್ನಿಗಿಂತಲೂ ಅಸಹ್ಯವಾಗಿ ಹಣ, ಹೆಂಡ ಹಂಚಿದ ಕೆಂಚಪ್ಪ ಗೌಡ ಮತ್ತೆ ಗೆದ್ದುಬಿಟ್ಟ!

ಡ್ರಾಪ್ ಔಟ್ ದಂಧೆ!

ಕೇವಲ ಡೈರೆಕ್ಟರಾಗಿ ಗೆದ್ದಿದ್ದರೆ ಆ ಮಾತು ಬೇರೆ. ಆದರೆ ಕೆಂಚಪ್ಪ ಗೌಡ ಈ ಬಾರಿ ತಾನೇ ಅಧ್ಯಕ್ಷನಾಗಿಬಿಟ್ಟ. ಡಾ. ಮಹದೇವ್, ಕೃಷ್ಣಪ್ಪ, ನೀಲಕಂಠೇ ಗೌಡ, ಹುಲ್ಲೂರು ಮಂಜ, ಮಂತ್ರಿ ಬಚ್ಚೇಗೌಡನ ತಮ್ಮ ಗೋಪಾಲ ಗೌಡ, ಶಿವಮೊಗ್ಗದ ರಮೇಶ, ಮುನೇಗೌಡ ಮುಂತಾದ ಪುಢಾರಿ ಡೈರೆಕ್ಟರುಗಳೆಲ್ಲ ಕೆಂಚಪ್ಪ ಗೌಡನ ಕಾಸು ತಿಂದು ಸಂಘಕ್ಕೆ ದ್ರೋಹ ಬಗೆದ ಫಲವಾಗಿ ಕೆಂಚಪ್ಪ ಗೌಡ ಅಧ್ಯಕ್ಷ ಪದವಿಗೇರಿದ.

ಸೆಕ್ರೆಟರಿಯಾಗಿದ್ದಾಗಲೇ ಸಂಘಕ್ಕೆ ಕನ್ನಹಾಕಿ ಜನಾಂಗದ ಸೊತ್ತಾದ 96 ಎಕರೆ ಜಮೀನನ್ನು ಮಾರಿಕೊಂಡವನು ಇನ್ನು ಅಧ್ಯಕ್ಷನಾದ ಮೇಲೆ ಬಿಡುವುದುಂಟಾ?







ಈ ಬಾರಿ ಕೆಂಚಪ್ಪ ಗೌಡ ಲೂಟಿಗೆಂದು ವಿಶಿಷ್ಟ ಮಾರ್ಗೋಪಾಯವೊಂದನ್ನು ಕಂಡುಹಿಡಿದಿದ್ದ. ಅದು ಡ್ರಾಪ್‌ಔಟ್ ಸೀಟ್ಸ್ ಕರ್ಮಕಾಂಡ. ಒಕ್ಕಲಿಗರ ಸಂಘದ ಕೆಂಪೇಗೌಡ ಮೆಡಿಕಲ್ ಕಾಲೇಜಿನ ಪ್ರತಿವರ್ಷದ ಒಟ್ಟು ನೂರಿಪ್ಪತ್ತು ಸೀಟುಗಳ ಪೈಕಿ ಸಿಇಟಿಯಿಂದ 48 ಮತ್ತು ಕಾಮೆಡ್ ಕೆ ಇಂದ 48 ಸೀಟುಗಳು ಮೆರಿಟ್ ಆಧಾರದ ಮೇಲೆ ಹಂಚಿಕೆಯಾದರೆ ಉಳಿಕೆ 24 ಸೀಟುಗಳಷ್ಟೇ ಮ್ಯಾನೇಜ್‌ಮೆಂಟ್ ಕೋಟಾ ರೂಪದಲ್ಲಿ ಮಾರಿಕೊಳ್ಳಬಹುದು. ಈ ರೀತಿ ಕಾಮೆಡ್‌ಕೆನಿಂದ ಹಂಚಿಕೆಯಾದ ಸೀಟುಗಳನ್ನು ಡ್ರಾಪ್‌ಔಟ್ ನೆಪದಲ್ಲಿ ಕಬಳಿಸುವ ಸೀಟುಗಳ್ಳರದ್ದೇ ನಿಗೂಢ ಮಾಫಿಯಾ ಇದೆ.

ಇಂಥದೊಂದು ಮಾಫಿಯಾಕ್ಕೆ ಸದ್ಯ ಶಿವಾಜಿನಗರದ ಡಾನ್ ಆಗಿರುವ ಭೂಗತ ಪಾತಕಿ ಇಷ್ತಿಯಾಕ್ ಪೈಲ್ವಾನ್‌ನೇ ಅಧಿಪತಿ!

ದೂರದ ದೆಹಲಿ, ಲಕ್ನೋ, ಸೂರತ್‌ಗಳಲ್ಲಿ ಪಿಯೂಸಿಯಲ್ಲಿ ರ್‍ಯಾಂಕ್ ಬಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಿಡಿದು ಅವರಿಗೆ ಮುಂಗಡವಾಗಿ ಲಕ್ಷದ ಲೆಕ್ಕದಲ್ಲಿ ದುಡ್ಡು ಕೊಡುತ್ತಾರೆ. ವಾಸ್ತವವಾಗಿ ಹೀಗೆ ಬುಕ್ಕಾದ ವಿದ್ಯಾರ್ಥಿಗೆ ಸೀಟಿನ ಅಗತ್ಯವೇ ಇರುವುದಿಲ್ಲ. ಹೇಗೂ ರ್‍ಯಾಂಕ್ ವಿದ್ಯಾರ್ಥಿಯಾಗಿರುವುದರಿಂದ ಕಾಮೆಡ್ ಕೆಯಲ್ಲಿ ಆತನಿಗೆ ರ್‍ಯಾಂಕ್ ಬರುತ್ತದೆ. ಕೌನ್ಸಿಲಿಂಗ್‌ನಲ್ಲಿ ಉದ್ದೇಶಪೂರ್ವಕವಾಗಿ ಒಕ್ಕಲಿಗರ ಸಂಘದ ಕೆಂಪೇಗೌಡ ಮೆಡಿಕಲ್ ಕಾಲೇಜೇ ಬೇಕೆಂದು ಹಾಕಿಸಿಕೊಳ್ಳಲಾಗುತ್ತದೆ. ಈ ರೀತಿ ತನಗೆ ಬೇಕಾದ ಕಾಲೇಜನ್ನೇ ಆಯ್ದುಕೊಂಡ ಕಾಮೆಡ್ ಕೆ ವಿದ್ಯಾರ್ಥಿ ಇಲ್ಲಿ ಕಟ್ಟಬೇಕಾಗಿರುವ ಅಡ್ಮಿಷನ್ ಫೀಜು ಕೇವಲ 3.60 ಲಕ್ಷ ಮಾತ್ರ. ಇದೇ ಸೀಟನ್ನು ಮ್ಯಾನೇಜ್‌ಮೆಂಟ್ ಕೋಟಾ ಲೆಕ್ಕದಲ್ಲಿ ಮಾರಿಕೊಂಡರೆ ಅದರ ಬೆಲೆ 70 ಲಕ್ಷವಾಗುತ್ತದೆ.

ಆರೋಪಿ ನಂ. 1

ಇಲ್ಲಿ ಸೀಟುಗಳ್ಳರ ಪಿತೂರಿಯ ಫಲವಾಗಿ ಪರೀಕ್ಷೆ ಬರೆದ ವಿದ್ಯಾರ್ಥಿ, ಆಡಳಿತ ಮಂಡಳಿ ಮತ್ತು ಸೀಟು ಬ್ರೋಕರ್‌ಗಳೆಲ್ಲರೂ ಪರಸ್ಪರ ಕೈಜೋಡಿಸುತ್ತಾರೆ. ಕಾಮೆಡ್ ಕೆನಿಂದ ಸೀಟು ಪಡೆದ ವಿದ್ಯಾರ್ಥಿ ಕೊನೇ ಗಳಿಗೆಯಲ್ಲಿ ತನಗೆ ಆರೋಗ್ಯ ಸರಿ ಇಲ್ಲ ಎಂದೋ ಅನಾನುಕೂಲವೆಂದೋ ಮಂಜೂರಾದ ಸೀಟೇ ಬೇಡ ಎಂದುಬಿಡುತ್ತಾನೆ. ಹೀಗೆ ಕೊನೇ ಗಳಿಗೆಯಲ್ಲಿ ವಿದ್ಯಾರ್ಥಿಯಿಂದ ತಿರಸ್ಕರಿಸಲ್ಪಟ್ಟ ಸೀಟೇ ಡ್ರಾಪ್‌ಔಟ್ ಸೀಟಾಗಿ ರೂಪಾಂತರವಾಗುತ್ತದೆ. ಅದೇ ಸೀಟನ್ನು ಕಾಲೇಜಿನ ಆಡಳಿತ ಮಂಡಳಿ 70 ಲಕ್ಷಕ್ಕೆ ಮಾರಿಕೊಳ್ಳಬಹುದು!

ಈ ರೀತಿ ಶಿವಾಜಿನಗರದ ಡ್ರಾಪ್‌ಔಟ್ ಸೀಟ್ ಮಾಫಿಯಾಗಳ ಜೊತೆ ಶಾಮೀಲಾದ ಕೆಂಚಪ್ಪ ಗೌಡ 2011 ರಲ್ಲಿ ಒಟ್ಟು 24 ಸೀಟುಗಳನ್ನು ವಂಚಿಸಿಬಿಟ್ಟ. ಇದರಿಂದ ಸಂಘಕ್ಕೆ ಮೂರೂವರೆ ಕೋಟಿ ನಷ್ಟವಾದರೆ ಅಧ್ಯಕ್ಷ ಕೆಂಚಪ್ಪ ಗೌಡ ಮತ್ತು ಸೀಟುಗಳ್ಳರು ಸೇರಿ ಒಟ್ಟು 13 ಕೋಟಿ ರೂಪಾಯಿ ನುಂಗಿಬಿಟ್ಟಿತು. ಇದು ಕೇವಲ ಸಂಘಕ್ಕಾದ ವಂಚನೆಯಷ್ಟೇ ಅಲ್ಲ, ಸರ್ಕಾರಕ್ಕೂ, ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿ ಸಮೂಹಕ್ಕೂ ಕೆಂಚಪ್ಪ ಗೌಡ ಮಾಡಿದ ಮೋಸವಾಗಿತ್ತು.

ಇಂಥಾದ್ದೊಂದು ವಂಚನೆಯನ್ನು ಪತ್ತೆ ಹಚ್ಚಿದ್ದೇ ಒಕ್ಕಲಿಗರ ಸಂಘದ ಮತ್ತೊಬ್ಬ ಡೈರೆಕ್ಟರ್ ಎ. ಪ್ರಸಾದ್. ಅವರೇ ದಾಖಲೆ ಸಮೇತ ಪೊಲೀಸರಿಗೆ ದೂರು ಕೊಟ್ಟರು. ಸರ್ಕಾರ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿದ ಫಲವಾಗಿ ಶಿವಾಜಿನಗರದ ಪಾತಕಿ ಇಷ್ತಿಯಾಕ್ ಪೈಲ್ವಾನ್

ಒಂದು ಹಿಂದು ಡ್ರಾಪ್‌ಔಟ್ ಸೀಟ್ ...ರಲ್ಲಿ ಜೈಲು ಪಾಲಾದರು. ಆದರೆ ಪೊಲೀಸರು ...ಎಫ್‌ಐಆರ್‌ನಲ್ಲಿ ಮೊದಲ ಆರೋಪಿಯಾಗಿದ್ದ ... ಗೌಡ ಮಾತ್ರ ಯಾರ ಕೈಗೂ ಸಿಗದೇ ...ನಾಗಿದ್ದು ನಿರೀಕ್ಷಣಾ ಜಾಮೀನು ಗಿಟ್ಟಿಸಿಬಿಟ್ಟ!

...ನವತ್ತು ಡ್ರಾಪ್‌ಔಟ್ ಸೀಟ್ ಕೇಸಿನಲ್ಲಿ ...ಪಿಯಾಗಿ ಕೆಂಚಪ್ಪ ಗೌಡನ ಹೆಸರು ...ಯಿತೋ ಒಕ್ಕಲಿಗರ ಸಂಘದ ನಿಷ್ಠಾವಂತ ... ಪ್ರಾಮಾಣಿಕ ಡೈರೆಕ್ಟರುಗಳೆಲ್ಲಾ ಆತನ ...ಮೆಗೆ ಪಟ್ಟುಹಿಡಿದರು. ಅಧ್ಯಕ್ಷನಾಗಿದ್ದು ತಾನೇ ...ದ ಸಂಘದ ಕೆಟ್ಟಲು ಕುಯ್ಯಲು ನಿಂತಿದ್ದ ... ಗೌಡ ಓರ್ವ ಕ್ರಿಮಿನಲ್ ಎನ್ನಿಸಿಕೊಂಡು ... ಅಧ್ಯಕ್ಷನಾಗಿ ಮುಂದುವರಿಯುವುದೇ ಆ ...ಕ್ಕೆ ದೊಡ್ಡ ಅವಮಾನವೆಂದು ಬಹುತೇಕ ...ಗಳೆಲ್ಲ ಬೀದಿಗಿಳಿದು ಪ್ರತಿಭಟಿಸಿದರು. ಅಧ್ಯಕ್ಷ ...ರಾಜೀನಾಮೆ ಕೊಡಬೇಕೆಂದು ಪಟ್ಟುಹಿಡಿದರು.

...ಇತಿಹಾಸದಲ್ಲಿ ಅಧ್ಯಕ್ಷನೊಬ್ಬ ಕ್ರಿಮಿನಲ್ ...ಸಿಕ್ಕಿಬಿದ್ದು ಕಳ್ಳನಂತೆ ತಲೆಮರೆಸಿಕೊಂಡು ...ಮಾದ ಪ್ರಸಂಗ ನಡೆದಿರಲಿಲ್ಲ. ಒಂದೆಡೆ ...ದ ಡೈರೆಕ್ಟರ್‌ಗಳು, ಮತ್ತೊಂದೆಡೆ ಎಸ್ಕೇಪಾದ ...ನ್ನೊಂದೆಡೆ, ಬೊಬ್ಬೆ ಹಾಕುತ್ತಿದ್ದ ವಿದ್ಯಾರ್ಥಿ ...–ಇಂಥ ಅರಾಜಕ ಪರಿಸ್ಥಿತಿಯಲ್ಲೇ ಒಕ್ಕಲಿಗ ...ದ ರಾಜಕೀಯ ಮುಖಂಡರೆಲ್ಲ ಸಂಘದ ... ಧಾವಿಸಿದ್ದು!


ಮಲ್ಲಯ್ಯ





...ಬಚ್ಚೇಗೌಡನ ದೋಖಾ

...ಗ್ರೆಸ್ ಮುಖಂಡ ಡೀಕೆ, ಜೆಡಿಎಸ್ ನಾಯಕ ...ರಾಯಸ್ವಾಮಿ, ಗೃಹ ಮಂತ್ರಿ ಆಶೋಕ್ ಮತ್ತು ... ಖಾತೆ ಮಂತ್ರಿ ಬಚ್ಚೇಗೌಡ ಮುಂತಾದ ... ನಾಯಕರೆಲ್ಲ ಪಕ್ಷಭೇದ ಮರೆತು ಅತಂತ್ರ ...ಯನ್ನು ತಿಳಿಗೊಳಿಸಲು ಕೈಹಾಕಿದ್ದಾರೆ. ...ದ ಮುಖಂಡರುಗಳೇ ಕಾಳಜಿ ವಹಿಸಿ ...ಲೆ ಅದಕ್ಕೆ ಸ್ಪಂದಿಸಬೇಕೆಂದು ಬಹುತೇಕ ...ಗಳೆಲ್ಲ ಪ್ರತಿಭಟನೆಯನ್ನು ಕೈಬಿಟ್ಟಿದ್ದಾರೆ. ...ಷರತ್ತಿಗೆ ಪ್ರತಿಯೊಬ್ಬರೂ ಸಮ್ಮತಿಸಿದ್ದು ಕಾರ್ಯಕಾರಿ ಸಮಿತಿಯ ...ದಲ್ಲಿ, ಆ ಪ್ರಕಾರ ಸದ್ಯದ ಕಾರ್ಯಕಾರಿ ಸಮಿತಿಯನ್ನು ...ಸುವುದು. ಇದಕ್ಕೆ ಪೂರಕವಾಗಿ ಸಂಘದ ಎಲ್ಲಾ ಪದಾಧಿಕಾರಿಗಳೂ ... ರಾಜೀನಾಮೆ ಪತ್ರಗಳನ್ನು ಬರೆದುಕೊಡಬೇಕು. ಹೀಗೆ ...ರಾಜೀನಾಮೆ ಪತ್ರಗಳನ್ನು ಈ ಮುಖಂಡರ ಕೈಗೊಪ್ಪಿಸಬೇಕು. ... ಹೊಸ ಅಧ್ಯಕ್ಷರಾಗಬೇಕೆಂಬುದನ್ನು ಈ ನಾಯಕರುಗಳೇ ...ಸಬೇಕು.

...ಥದೊಂದು ಷರತ್ತಿಗೆ ಬದ್ಧರಾದ ಎಲ್ಲಾ ಡೈರೆಕ್ಟರುಗಳು ತಂತಮ್ಮ ...ರಾಜೀನಾಮೆ ಬರೆದು ಅದನ್ನು ನಾಯಕರ ಕೈಗಿತ್ತಿದ್ದಾರೆ. ಅದೇರೀತಿ ...ಕೆಂಚಪ್ಪ ಗೌಡನೂ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಿತ್ತು. ... ಡಾ. ಮಹದೇವ್ ಕೂಡ ರಾಜೀನಾಮೆ ನೀಡಬೇಕಿತ್ತು. ... ನಿರ್ದೇಶಕರು ರಾಜೀನಾಮೆ ಬರೆದು ಕೊಟ್ಟರೂ ಅಧ್ಯಕ್ಷ ... ಗೌಡ ಮತ್ತು ಸೆಕ್ರೆಟರಿ ಮಹದೇವ್ ಕೊನೇಗಳಿಗೆಯ ತನಕ ...ಸ್ವಿ, ಅಂಥಾ ಅವಸರವೇನಿದೆ? ಆಯ್ತು ನಾಳೆ ರಾಜೀನಾಮೆ ... ಎಂದವರೆ ನಾಪತ್ತೆಯಾದವರು ಒಂದು ವಾರವಾದರೂ ಪತ್ತೆಯೇ ...

...ಗೆ ಕೆಂಚಪ್ಪ ಗೌಡ ಕೇವಲ ಸಂಘಕ್ಕಷ್ಟೇ ಅಲ್ಲ, ಎಲ್ಲಾ ...ಗಳೂ, ಜನಾಂಗದ ಮುಖಂಡರೂ ಸೇರಿದಂತೆ ಇಡೀ ಒಕ್ಕಲಿಗ ...ವನ್ನೇ ವಂಚಿಸಿದ್ದ ಮಂತ್ರಿ ಆಶೋಕ್ ಸಮೇತ ಪಂಚಾಯ್ತಿಗೆಂದು ... ಡೀಕೆ ಮತ್ತು ಚಲುವರಾಯಸ್ವಾಮಿ ಹಣೆಹಣೆ ಚಚ್ಚಿಕೊಂಡರು. ... ಬಚ್ಚೇಗೌಡ ಮಾತ್ರ ಶುದ್ಧ ಘಟಿಂಗನ ಗತ್ತಿನಲ್ಲಿ 'ಯಾರ್ರೀ ... ಎಲ್ಲರೂ ಕಳ್ಳರೇ. ನಡೀಬಾರದ್ದೇನೂ ನಡೆದಿಲ್ಲ, ನಾವೆಲ್ಲ ... ಅಂದ್ಮೇಲೆ ಹೆಚ್ಚೂಕಮ್ಮಿ ಅಡ್ಜೆಸ್ಟ್ ಮಾಡ್ಕೊಂಡು ಹೋಗ ...!' ಎಂದು ಪ್ರತಿಭಟಿಸುತ್ತಿದ್ದ ಪ್ರಾಮಾಣಿಕರ ಬಾಯನ್ನೇ ...ಲೆತ್ತಿಸಿದ್ದ.

...ಚಪ್ಪ ಗೌಡನ ಎಲ್ಲಾ ದುರಾಚಾರಕ್ಕೂ ರಕ್ಷಣೆಯಾಗಿರುವುದೇ ... ಬಚ್ಚೇಗೌಡ ಎಂಬುದು ಬಯಲಾಗಿದ್ದೇ ಆವಾಗ! ...ವತ್ತು ಬಚ್ಚೇಗೌಡ ಮಾನಗೆಟ್ಟು ಕೆಂಚಪ್ಪ ಗೌಡನ ಬೆನ್ನಿಗೆ ... ಮಿಕ್ಕಂತೆ ಅಶೋಕ್, ಚಲುವರಾಯಸ್ವಾಮಿ, ಡೀಕೆ ಮುಂತಾದ ... ಸಂಘದತ್ತ ತಲೆ ಹಾಕುವುದನ್ನೇ ಬಿಟ್ಟುಬಿಟ್ಟರು. ಇಷ್ಟಾಗಿದ್ದೇ ...ಪ್ರತಿಭಟಿಸುತ್ತಿದ್ದ ಅಪ್ಪಾಜಿ ಗೌಡ, ಪ್ರಸಾದ್, ಪ್ರೊ. ನಾಗರಾಜ್, ...ೇಗೌಡ, ಡಿ.ಕೆ ಕಾಳೇಗೌಡ ಮುಂತಾದವರೆಲ್ಲ ಅಸಹಾಯಕರಾಗಿ ... ಕೋರ್ಟಿಗೆ ಹೋದರೆ ತೀರ್ಪು ಬರುವ ಹೊತ್ತಿಗೆ ಮತ್ತೆ ... ಬಂದಿರುತ್ತದೆ. ನಾವು ರಾಜೀನಾಮೆ ಕೊಟ್ಟರೆ ಕೆಂಚಪ್ಪ ...ಕೂಟಿಗೆ ಇನ್ನಷ್ಟು ಅನುಕೂಲವಾದಂತಾಗುತ್ತದೆ. ಇದು ...ತಿಲ್ಲ, ಬಿಟ್ಟರೆ ಅವನತಿ ತಪ್ಪುವುದಿಲ್ಲ.

ಹುಲ್ಲೂರು ಮಂಜು!

...ಘದ ಪ್ರಾಮಾಣಿಕ ಡೈರೆಕ್ಟರ್‌ಗಳ ಪಾಡು ಈ ಗತಿಯಾದರೆ ...ಕೆಂಚಪ್ಪ ಗೌಡ ಕೇಳಬೇಕೆ? ತನ್ನ ಮೇಲೆ ಕ್ರಿಮಿನಲ್ ಕೇಸು ... ಇನ್ನೇನು ಯಾವಪಟ್ಟಾಗುತ್ತೋ ಎಂದು ಇದ್ದಕ್ಕಿದ್ದಂತೆ ...ಟೆಯ ಪಾಖಂಡಿ ಹುಲ್ಲೂರು ಮಂಜನನ್ನು ಕಾರ್ಯಾಧ್ಯಕ್ಷನನ್ನಾಗಿ ...ಬಿಟ್ಟ. ಈತನ ಪೂರ್ತಿ ಹೆಸರು ಸಿ. ಮಂಜುನಾಥ್. ...ಟೆಯ ನರಹಂತಕ ಬಚ್ಚೇಗೌಡರ ಬಲಗೈ ಬಂಟ. ಆ

ಕಾಲದಿಂದಲೂ ಕೊಲೆ, ರಕ್ತಪಾತದಲ್ಲೇ ಕುಖ್ಯಾತನಾದ ಕೋಡಳ್ಳಿ ಸೊಣ್ಣಪ್ಪ ಎಂಬ ಬಚ್ಚೇಗೌಡರ ಬಂಟನಿಗೆ ಈತ ಹತ್ತಿರದ ಸಂಬಂಧಿ. ಕರ್ನಾಟಕ ಹಾಲು ಒಕ್ಕೂಟ ಅಂದರೆ ಕೆಎಂಎಫ್‌ಗೂ ಈತ ನಿರ್ದೇಶಕ. ಪ್ರತ್ಯಕ್ಷವೋ ಪರೋಕ್ಷವೋ ಹೊಸಕೋಟೆಯಲ್ಲಿ ಬಚ್ಚೇಗೌಡ, ಕೋಡಳ್ಳಿ ಸೊಣ್ಣಪ್ಪ ಸೇರಿಕೊಂಡು ನಡೆಸಿಕೊಂಡೇ ಬಂದ ರಕ್ತ ರಾಜಕಾರಣದಲ್ಲಿ ಈತನೂ ಪಾಲುದಾರ.

ಇಂಥವನನ್ನು ತಂದು ಏಕಾಏಕಿ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷನನ್ನಾಗಿ ನೇಮಿಸಿದ ಕೆಂಚಪ್ಪ ಗೌಡ ಇಡೀ ಒಕ್ಕಲಿಗರ ಸಂಘಕ್ಕೇ ರಕ್ತದ ರಂಗು ಬಳಿದುಬಿಟ್ಟ. ಅಷ್ಟೇ ಅಲ್ಲದೆ ಆಸ್ಪತ್ರೆ ಕಮಿಟಿಗೆ ಅಧ್ಯಕ್ಷನಾಗಿದ್ದ ಮುನೇಗೌಡರನ್ನು ಕಿತ್ತುಹಾಕಿ ಆ ಜಾಗಕ್ಕೆ ತನ್ನ ಛೇಲಾ ನಂಜುಂಡೇ ಗೌಡನನ್ನು ನೇಮಿಸಿದ. ಸಂಘದ ಬೆಂಗಳೂರು, ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂದರೆ BITಯ ಗವರ್ನಿಂಗ್ ಕೌನ್ಸಿಲ್‌ನ ಛೇರ್ಮನ್ ಆಗಿದ್ದ ವಾಸುದೇವ್‌ನನ್ನು ಬದಲಾಯಿಸಿ ಆ ಜಾಗಕ್ಕೆ ತನ್ನನ್ನು ಬೆಂಬಲಿಸಿದ ಎಸ್. ಕೃಷ್ಣಪ್ಪನನ್ನು ತಂದ. ಮೆಡಿಕಲ್ ಕಾಲೇಜಿನ ಗವರ್ನಿಂಗ್ ಕೌನ್ಸಿಲ್ ಅಧ್ಯಕ್ಷನನ್ನಾಗಿ ತನ್ನ ಮತ್ತೊಬ್ಬ ಛೇಲಾ ಡಾ. ನವೀನ್‌ನನ್ನು ಪ್ರತಿಷ್ಠಾಪಿಸಿದ. ಕಾಮಗಾರಿ ಸಮಿತಿಗೆ ಅಧ್ಯಕ್ಷರಾಗಿದ್ದ ಮಲ್ಲಿಕಾರ್ಜುನ ಗೌಡರನ್ನು ಕಿತ್ತೊಗೆದು ಅಲ್ಲಿಗೆ ಹಾಸನದ ಸಿ.ಎಸ್. ಬಾಲಕೃಷ್ಣರನ್ನು ನೇಮಕ ಮಾಡಿದ!

ಈ ಬಾಲಕೃಷ್ಣ ಬೇರೆ ಯಾರೂ ಅಲ್ಲ, ದೇವೇಗೌಡರ ಅಳಿಯ ಡಾ. ಸಿ.ಎನ್. ಮಂಜುನಾಥ್‌ರ ಖಾಸಾ ತಮ್ಮ. ಫಾರ್ಮಸಿ ಕಾಲೇಜಿನ ಗವರ್ನಿಂಗ್ ಕೌನ್ಸಿಲರ್ ಅಧ್ಯಕ್ಷರಾಗಿದ್ದ ಚಿಕ್ಕೇಗೌಡರನ್ನು ಕಿತ್ತೊಗೆದು ಆ ಜಾಗಕ್ಕೆ ತನ್ನ ಭಟ್ಟಂಗಿ ಎಚ್.ಎಲ್. ಶಿವಣ್ಣನನ್ನು ತಂದದ್ದು ಇತ್ಯಾದಿಗಳೆಲ್ಲವೂ ಕೆಂಚಪ್ಪ ಗೌಡನ ಹಗಲುದರೋಡೆ ಮತ್ತು ದುರಾಡಳಿತಕ್ಕೆ ಪೂರಕವಾಗೇ ಇತ್ತು. ಈ ರೀತಿ ಯಾವ್ಯಾವ ಸಮಿತಿಗಳಿಗೆ ಕೆಂಚಪ್ಪ ಗೌಡ ತನ್ನ ಛೇಲಾಗಳನ್ನು ನೇಮಿಸಿದನೋ ಅವೆಲ್ಲವೂ ಫಲವತ್ತಾದ, ಆಯಕಟ್ಟಿನ ಕಮೀಷನ್ ದೋಚುವ ಅವಕಾಶವುಳ್ಳ ಹುದ್ದೆಗಳೇ. ಇಂಥ ಹುದ್ದೆಗಳಿಗೆ ನೇಮಿಸಿದ ನಿರ್ದೇಶಕರನ್ನು ಬದಲಾಯಿಸುವ ಅಧಿಕಾರವಿರುವುದು ಕಾರ್ಯಕಾರಿ ಸಮಿತಿಗೆ ಮಾತ್ರ. ಹಾಗಿದ್ದೂ ಗೂಂಡಾಗಿರಿಯಿಂದ ಸಭ್ಯರು, ಪ್ರಾಮಾಣಿಕರನ್ನೆಲ್ಲ ಕಿತ್ತುಹಾಕಿ ಆ ಜಾಗಕ್ಕೆ ಛೇಲಾ ಖದೀರಮರನ್ನು ನೇಮಿಸಿದ್ದಾನೆ.

ಇದನ್ನು ಪ್ರತಿಭಟಿಸಿದರೆಂಬ ಒಂದೇ ಕಾರಣಕ್ಕೆ ಆ ಕಾಲದಿಂದಲೂ ಸಂಘ ಮತ್ತು ಜನಾಂಗದ ಒಳಿತಿಗೆ ಹೆಣಗಾಡುತ್ತಲೇ ಬಂದ ಡಾ. ಅಪ್ಪಾಜಿಗೌಡರ ಮೇಲೆ ರೌಡಿಗಳನ್ನು ಛೂಬಿಟ್ಟಿದ್ದಾನೆ. ಮೊನ್ನೆ ಮಾರ್ಚ್ 6 ರಂದು ನಡೆದ ಕಾರ್ಯಕಾರಿಣಿಯ ಸಭೆಗೆ ಅಪ್ಪಾಜಿ ಗೌಡರು ಬಂದಿದ್ದೇ ತಡ ಕೆಂಚಪ್ಪ ಗೌಡನ ಬಾರಿನಲ್ಲಿ ಮ್ಯಾನೇಜರ್ ಆಗಿರುವ ಗೌಡ ಮತ್ತು ಕೆಂಚಪ್ಪ ಗೌಡ ಸಹಚರ ರವಿ ಇಬ್ಬರೂ ಹತ್ತಾರು ಮಂದಿ ಗೂಂಡಾಗಳ ಸಮೇತ ದಾಳಿ ನಡೆಸಿದ್ದಾರೆ. ಇದಾಗಿ 24 ನೇ ದಿನಕ್ಕೆ ಸರಿಯಾಗಿ ನಡೆದ ಎರಡನೇ ಕಾರ್ಯಕಾರಿಣಿ ಸಭೆಯಲ್ಲೂ ಕೆಂಚಪ್ಪ ಗೌಡನ ಛೇಲಾ ಕುಕ್ಕೂರು ದೊಡ್ಡಿ ಶಿವಣ್ಣ, ಬಾರ್ ಮ್ಯಾನೇಜರ್ ಗೌಡ, ರೌಡಿ ರವಿ ಮತ್ತು ಹತ್ತಾರು ಮಂದಿ ಬಾರ್ ಕೆಲಸಗಾರರು ಸೇರಿಕೊಂಡು ಅಪ್ಪಾಜಿ ಗೌಡರನ್ನು ವಾಚಾಮಗೋಚರ ಬೈದು ಎಳೆದಾಡಿದ್ದಾರೆ.

ಒಕ್ಕಲಿಗರ ದೌರ್ಭಾಗ್ಯ

ಆವತ್ತು ಬನಶಂಕರಿಯ ಎಸಿಪಿ ವೀರಭದ್ರೇ ಗೌಡರು ಮಧ್ಯ ಪ್ರವೇಶಿಸದೇ ಹೋಗಿದ್ದರೆ ಕೆಂಚಪ್ಪ ಗೌಡನ ರೌಡಿ ಪಡೆ ಅಪ್ಪಾಜಿ ಗೌಡರನ್ನು ಹಣ್ಣುಗಾಯಿ ಹೊಡೆಯಲು ಸಜ್ಜಾಗಿತ್ತು. ಅಪ್ಪಾಜಿ ಗೌಡರನ್ನು ರೌಡಿಗಳಿಂದ ಬಿಡಿಸಿಕೊಳ್ಳಲು ಬಂದ ಅ. ದೇವೇಗೌಡರ ಮೇಲೂ ಇದೇ ಗ್ಯಾಂಗ್ ದಾಳಿ ನಡೆಸಿದೆ. ಈ ಬಗ್ಗೆ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಕೆಂಚಪ್ಪ ಗೌಡ ಮತ್ತಾತನ ರೌಡಿ ಪಡೆ ವಿರುದ್ಧ ಅಪ್ಪಾಜಿ ಗೌಡ ದೂರು ದಾಖಲಿಸಿದ್ದಾರೆ.

ಈ ಎಲ್ಲಾ ಘಟನೆಗಳು ಏನನ್ನು ಸೂಚಿಸುತ್ತವೆ? ಸಜ್ಜೆಪಾಳ್ಯದ 96 ಎಕರೆ ಸಂಘದ ಸೊತ್ತನ್ನೇ ಅಧ್ಯಕ್ಷ ಮಾರಿಕೊಳ್ಳುತ್ತಾನೆ. ಸಂಘದ ಮೆಡಿಕಲ್ ಸೀಟುಗಳನ್ನೇ ಡ್ರಾಪ್‌ಔಟ್ ದಂಧೆಕೋರರ ಜೊತೆ ಸೇರಿ ವಂಚಿಸುತ್ತಾನೆ. ಇದನ್ನು ಪ್ರಶ್ನಿಸಿದರೆಂದು ಪ್ರಾಮಾಣಿಕರನ್ನೆಲ್ಲ ಸಂಘದ ಆಯಕಟ್ಟಿನ ಹುದ್ದೆಗಳಿಂದ ಕಿತ್ತು ಹಾಕುತ್ತಾನೆ. ಅಂಥ ಹುದ್ದೆಗಳಿಗೆಲ್ಲ ಕಳ್ಳಕಾಕರನ್ನು ನೇಮಿಸುತ್ತಾನೆ. ಹುಲ್ಲೂರು ಮಂಜನಂಥ ಕ್ರಿಮಿನಲ್‌ನನ್ನು ಸಂಘದ ಕಾರ್ಯಾಧ್ಯಕ್ಷನನ್ನಾಗಿ ನೇಮಿಸುತ್ತಾನೆ. ಇಂಥ ಅನಾಚಾರಗಳನ್ನೆಲ್ಲ ಪ್ರಶ್ನಿಸಿದ ಡೈರೆಕ್ಟರುಗಳ ನೆರವಿಗೆ ಬಂದ ಜನಾಂಗದ ಮುಖಂಡರ ಮಾತಿಗೆ ನಯಾಪೈಸೆಯ ಕಿಮ್ಮತ್ತಿಲ್ಲ. ಇನ್ನು ಅನಾಚಾರವನ್ನು ಪ್ರಶ್ನಿಸಿದವರ ಮೇಲೇ ಅಧ್ಯಕ್ಷ ಕೆಂಚಪ್ಪ ಗೌಡನ ರೌಡಿ ಪಡೆ ಹಲ್ಲೆ ನಡೆಸುತ್ತದೆ. ಇದೆಲ್ಲಕ್ಕೂ ಮುನ್ನ ಅಧ್ಯಕ್ಷನ ಮೇಲೇ ಪೊಲೀಸರು ಕ್ರಿಮಿನಲ್ ಕೇಸು ದಾಖಲಿಸುತ್ತಾರೆ. ಓರ್ವ ಕ್ರಿಮಿನಲ್, ಲಿಕ್ಕರ್ ದೊರೆ, ಲ್ಯಾಂಡ್ ಗ್ರ್ಯಾಬರ್ ಮತ್ತು ಹಗಲು ದರೋಡೆಕೋರನೊಬ್ಬನ ಕೈಗೆ ಒಕ್ಕಲಿಗರ ಸಂಘ ಸಿಕ್ಕಿತೆಂದರೆ ಏನಾಗುತ್ತದೆ ಎಂಬುದಕ್ಕೆ ಇದಕ್ಕಿಂತ ಬೇಕೆ?

ಇಂಥ ದುಷ್ಟನನ್ನು ಬೆಂಬಲಿಸುವ ಮಂತ್ರಿ ಬಚ್ಚೇಗೌಡ ಹೊಟ್ಟೆಗೆ ಏನು ತಿನ್ನುತ್ತಾನೆ? ಇಷ್ಟಾಗ್ಯೂ ಪ್ರಜ್ಞಾವಂತ ಒಕ್ಕಲಿಗರು ಕೈಕಟ್ಟಿ ಕೂತಿದ್ದಾರೆಂದರೆ ಇದಕ್ಕಿಂತ ದುರಂತ ಬೇಕೆ?

ಮಂತ್ರಿ ಬಚ್ಚೇಗೌಡನ ತಮ್ಮ ಗೋಪಾಲಗೌಡನೇ

ಸೀಟು ವಂಚಕ


ಗೋಪಾಲಗೌಡ

ಮಂತ್ರಿ ಅಶೋಕ್, ಡೀಕೆ, ಚಲುವರಾಯಸ್ವಾಮಿ ಮುಂತಾದ ಒಕ್ಕಲಿಗರ ಮುಖಂಡರೆಲ್ಲ ಮನಸ್ಸು ಮಾಡಿದ್ದರೆ ಯಾವತ್ತೋ ಕೆಂಚಪ್ಪ ಗೌಡನನ್ನು ಸಂಘದಿಂದ ಹೊರದಬ್ಬಬಹುದಿತ್ತು. ಆದರೆ ಅಡ್ಡಗಾಲಿಟ್ಟಿದ್ದು ಬಚ್ಚೇಗೌಡ. ಸಂಘ ಹಾಳುಬಿದ್ದರೆಷ್ಟು, ಒಕ್ಕಲಿಗರು ಬೀದಿಗೆ ಬಿದ್ದರೆಷ್ಟು ಅದು ಬಚ್ಚೇಗೌಡರಿಗೆ ಮುಖ್ಯವಲ್ಲ. ಬಚ್ಚೇಗೌಡನ ಹುಟ್ಟು ಗುಣವೇ ಮನೆಮುರುಕ ಪಾಳೇಗಾರಿಕೆ. ಹೊಸಕೋಟೆಯ ಕ್ರಿಮಿನಲ್ ರಾಜಕಾರಣ ಬಿಟ್ಟರೆ ಬಚ್ಚೇಗೌಡನಿಗೆ ಸಜ್ಜನಿಕೆ, ಆದರ್ಶ, ಹೋರಾಟ, ನಾಗರಿಕತೆ, ನ್ಯಾಯ ಗೊತ್ತೇ ಇಲ್ಲ.

ಬಚ್ಚೇಗೌಡನನ್ನು ಎದುರು ಹಾಕಿಕೊಳ್ಳಬಾರದೆಂಬ ಒಂದೇ ಕಾರಣಕ್ಕೆ ಅಶೋಕ್, ಡೀಕೆ, ಚಲುರಾಯಸ್ವಾಮಿ ತೆಪ್ಪಗಿದ್ದಾರೆ. ಬಚ್ಚೇಗೌಡನನ್ನು ತೃಪ್ತಿಪಡಿಸುವ ಒಂದೇ ಕಾರಣಕ್ಕೆ ಕೆಂಚಪ್ಪ ಗೌಡ ಹುಲ್ಲೂರು ಮಂಜುನನ್ನು ಕಾರ್ಯಾಧ್ಯಕ್ಷನನ್ನಾಗಿ ಮಾಡಿದ್ದಾರೆ. ಆದರೆ ಬಚ್ಚೇಗೌಡ ಮಾತ್ರ ಕೆಂಚಪ್ಪ ಗೌಡನನ್ನು ಬೆಂಬಲಿಸುತ್ತಿರುವುದು ಬೇರೆಯದೇ ಕಾರಣಕ್ಕೆ.

ಅದು ಬಚ್ಚೇಗೌಡನ ಖಾಸಾ ತಮ್ಮ ಗೋಪಾಲಗೌಡನ ಮೆಡಿಕಲ್ ಸೀಟು ವಂಚನೆ. ಬಿ.ಎನ್. ಗೋಪಾಲ ಗೌಡ ಸದ್ಯ ಒಕ್ಕಲಿಗರ ಸಂಘದ ಡೈರೆಕ್ಟರ್. ಜೊತೆಗೆ ಮೆಡಿಕಲ್ ಸೀಟ್ ಬ್ರೋಕರಿಕೆಯನ್ನೂ ಮಾಡುತ್ತಾನೆ. ಈಗಾಗಲೇ ಒಕ್ಕಲಿಗರ ಸಂಘದ ಕಿಮ್ಸ್‌ನಲ್ಲಿ ಮೆಡಿಕಲ್ ಸೀಟು ಕೊಡಿಸುತ್ತೇನೆಂದು ಡೆಹಲಿ, ಅಹ್ಮದಾಬಾದ್, ಕಾಶ್ಮೀರ, ಲೂದಿಯಾನಾ ಇತ್ಯಾದಿ ನಗರಗಳ ಸರಿಸುಮಾರು 20 ಮಂದಿ ವಿದ್ಯಾರ್ಥಿಗಳಿಂದ ತಲಾ 40 ರಿಂದ 50 ಲಕ್ಷದಷ್ಟು ಕಿತ್ತಿದ್ದಾನೆ. ಗೋಪಾಲ ಗೌಡ ಈ ರೀತಿ ಮೆಡಿಕಲ್ ಸೀಟು ಕೊಡಿಸುತ್ತೇನೆಂದು ಕಿತ್ತ ದುಡ್ಡಿನ ಒಟ್ಟು ಮೊತ್ತವೇ ಸರಿಸುಮಾರು 8 ಕೋಟಿಯಷ್ಟು!

ಯಾವತ್ತು ಕೊಟ್ಟ ಮಾತಿಗೆ ತಕ್ಕಂತೆ ಸೀಟು ಕೊಡಿಸಲಿಲ್ಲವೋ ಅಡ್ವಾನ್ಸ್ ಕೊಟ್ಟ ನಾರ್ತ್ ಇಂಡಿಯನ್ ವಿದ್ಯಾರ್ಥಿಗಳೆಲ್ಲ ರೊಚ್ಚಿಗೆದ್ದಿದ್ದಾರೆ. ಈ ಪೈಕಿ ನಾಲ್ವರು ನೇರವಾಗಿ ಪೊಲೀಸ್ ಕಮೀಷನರ್‌ಗೆ ದೂರಿತ್ತರೆ ಇನ್ನೂ ಕೆಲವರು ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಹೀಗೆ ಕೊಟ್ಟ ನಾಲ್ಕು ದೂರುಗಳ ಬಗ್ಗೆ ಸದ್ಯ ಸಿಸಿಬಿ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಯಾವ ಗಳಿಗೆಯಲ್ಲಾದರೂ ಪೊಲೀಸರು ಗೋಪಾಲ ಗೌಡನನ್ನು ಜೈಲಿಗೆ ಹಾಕಬಹುದು. ಆದರೆ ಅಣ್ಣನೇ ಮಂತ್ರಿಯಾಗಿರುವಾಗ ಯಾವ ಪೊಲೀಸ್ ತಾನೆ ಧೈರ್ಯ ಮಾಡಿಯಾನು?

ಹಾಗಂತ ದುಡ್ಡು ಕೊಟ್ಟವನು ಸುಮ್ಮನಿರಬೇಕಲ್ಲ. ಹಕೀಕತ್ತೇನೆಂದರೆ ಈ ರೀತಿ ಯಾರೆಲ್ಲ ಗೋಪಾಲ ಗೌಡನಿಂದ ಮೋಸ ಹೋಗಿದ್ದಾರೋ ಅಂಥವರನ್ನು ಸಂತೈಸಲು ದೂರು ನೀಡದ ಹಾಗೆ ತಡೆ ಹಿಡಿದದ್ದು ಕೆಂಚಪ್ಪ ಗೌಡ!

ಈಗಾಗಲೇ ದೂರು ಕೊಟ್ಟ ಐದಾರು ಮಂದಿಯಲ್ಲದೆ ದೂರು ಕೊಡಲಿದ್ದ ಮಿಕ್ಕವರನ್ನೆಲ್ಲ ಕಲೆಹಾಕಿದ ಕೆಂಚಪ್ಪ ಗೌಡ, ಪೊಲೀಸರಿಗೆ ದೂರು ಕೊಟ್ಟರೆ ನಿಮ್ಮ ದುಡ್ಡು ಬರುತ್ತಾ? ನನ್ನನ್ನು ನಂಬಿ. ನಾನೇ ಒಕ್ಕಲಿಗರ ಸಂಘದ ಅಧ್ಯಕ್ಷ. ಒಂದೋ ನಿಮಗೆ ಮೆಡಿಕಲ್ ಸೀಟು ಕೊಡಿಸ್ತೀನಿ. ಅದಾಗದೆ ಹೋದರೆ ನಾನೇ ನಿಂತು ದುಡ್ಡು ಕೊಡಿಸ್ತೀನಿ. ಯಾವುದಕ್ಕೂ ಸ್ವಲ್ಪ ಕಾಲಾವಕಾಶ ಕೊಡಿ. ದುಡುಕಿ ನಿಮ್ಮ ತಲೆ ಮೇಲೆ ನೀವೇ ಮಣ್ಣು ಹಾಕ್ಕೋಬೇಡಿ.....!' ಎಂದೆಲ್ಲ ಕೆಂಚಪ್ಪ ಗೌಡ ತೆಪ್ಪಗಾಗಿಸಿದ್ದಾನೆ. ಅಲ್ಲಿಗೆ ಗೋಪಾಲ ಗೌಡನ ವಿರುದ್ಧ ದಾಖಲಾಗಬೇಕಿದ್ದ ವಂಚನೆ ಕೇಸುಗಳೂ ತಣ್ಣಗಾಗಿವೆ.

ಇಷ್ಟಾದ ಮೇಲೆ ವಂಚಕ ಗೋಪಾಲ ಗೌಡ ಪ್ರತಿಯಾಗಿ ಏನಾದರೂ ಮಾಡಲೇಬೇಕಲ್ಲವೇ? ತನ್ನ ಖಾಸಾ ಅಣ್ಣ ಮಂತ್ರಿ ಬಚ್ಚೇಗೌಡನಿಗೆ ದುಂಬಾಲು ಬಿದ್ದು ಡ್ರಾಪ್‌ಔಟ್ ಸೀಟು ವಂಚನೆ ಕೇಸಲ್ಲಿ ಕೆಂಚಪ್ಪ ಗೌಡ ಜೈಲು ಪಾಲಾಗದ ಹಾಗೆ ಮಾಡಿದ್ದಷ್ಟೇ ಅಲ್ಲ ತಿರುಗಿಬಿದ್ದ ಡೈರೆಕ್ಟರುಗಳೆಲ್ಲ ಬಾಯಿ ಮುಚ್ಚಿಸುವಲ್ಲೂ ನೆರವಾಗಿದ್ದಾನೆ. ಮಂತ್ರಿ ಬಚ್ಚೇಗೌಡನೇ ಕೆಂಚಪ್ಪ ಗೌಡನ ಬೆನ್ನಿಗೆ ನಿಂತ ಮೇಲೆ ರಾದ್ಧಾಂತ ಏಕೆಂದು ಅಶೋಕ್, ಡೀಕೆ ಥರದವರೆಲ್ಲ ತೆಪ್ಪಗಾಗಿದ್ದಾರೆ.

ಒಬ್ಬ ವಂಚಕನಿಗೆ ಮತ್ತೊಬ್ಬ ವಂಚಕ ನೆರವಾಗುವ ಮೂಲಕ ಸಂಘಗೆ ಮುನ್ನ ಗಂಟುಕಳ್ಳರು ಸೇರಿದಂತೆ ಒಕ್ಕಲಿಗರ ಸಂಘದ ಎಲ್ಲಾ ದಾಯಿತರೂ ಪರಸ್ಪರ ಕೈ ಜೋಡಿಸಿದ್ದಾರೆ.

ಒಟ್ಟಿನಲ್ಲಿ ಒಕ್ಕಲಿಗರ ದೌರ್ಭಾಗ್ಯಕ್ಕೆ ಇಡೀ ಸಂಘವೇ ಸದ್ಯ ವಂಚಕರು, ಕ್ರಿಮಿನಲ್‌ಗಳು, ಭ್ರಷ್ಟರು, ದರೋಡೆಕೋರರ ಕಪಿಮುಷ್ಟಿಗೆ ಸಿಲುಕಿದಂತಾಗಿದೆ.

ಕೊಪ್ಪಳ

ಧೋಂಗಿ ರೈತ ಮುಖಂಡ ಸ್ವಾಮಿ ಪಂಗನಾಮ ಹಾಕಿದ..



ಎಸ್.ಆರ್.ಸ್ವಾಮಿ

ಉಳುವ ಯೋಗಿಯ ಹೆಸರಲ್ಲಿ ಕಂಡಕಂಡವರಿಗೆ ಪಂಗನಾಮ ಹಾಕಿ ಪರಾರಿಯಾಗಿರುವ ಧೋಂಗಿ ರೈತನಾಯಕ ಎಸ್.ಆರ್.ಸ್ವಾಮಿಯನ್ನು 'ನೋಡಿಲ್ಲಿ.. ಹುಡುಕುವುದೆಲ್ಲಿ...' ಎಂಬ ಬದಲಾವಣೆಗೊಂಡ ಹಾಡೊಂದು ಕೊಪ್ಪಳದ ಬೀದಿಗಳಲ್ಲಿ ಕೇಳಸಿಗುತ್ತಿದೆ. ಉತ್ತರ ಕರ್ನಾಟಕ ಪ್ರದೇಶದ ರೈತಸಂಘದ ಅಧ್ಯಕ್ಷ ಎಂದು ಸ್ವಯಂಘೋಷಿಸಿಕೊಂಡಿದ್ದ ಸ್ವಾಮಿ ಸಿಕ್ಕಸಿಕ್ಕವರನ್ನೆಲ್ಲಾ ರೈಲು ಹತ್ತಿಸಿ ಹಣ ಸುಲಿಯುತ್ತಿದ್ದ. ಈತನ ಬಲೆಗೆ ಇತ್ತೀಚೆಗೆ ಬಿದ್ದವರು ಬೆಂಗಳೂರಿನ ಸ್ಕ್ರಾಪ್ ವ್ಯಾಪಾರಿಗಳಾದ ಮುನ್ನಾರ್ ಮತ್ತು ಅಸ್ಗರ್. ಇವರಿಬ್ಬರಿಗೂ ಬರೋಬ್ಬರಿ ಹತ್ತು ಲಕ್ಷಕ್ಕೆ ನಾಮ ಎಳೆದ ಸ್ವಾಮಿ ಈಗ ಪರಾರಿಯಾಗಿದ್ದಾನೆ.

ಕೊಪ್ಪಳ ಜಿಲ್ಲೆಯ ಬೂದಗುಂಪ ಗ್ರಾಮದ ಸ್ವಾಮಿ ಪಬ್ಲಿಕ್ ಆಗಿ ಎಂಟ್ರಿ ಕೊಟ್ಟಿದ್ದೇ ರಾಜ್ಯ ರೈತ ಸಂಘದ ಮೂಲಕ. 2004ರಲ್ಲಿ ಸರ್ಕಾರ ಅವೈಜ್ಞಾನಿಕವಾಗಿ ವಿದ್ಯುತ್ ದರ ಏರಿಸಿದ್ದರ ವಿರುದ್ಧ ಈ ಭಾಗದ ಸಾವಿರಾರು ರೈತರು ತೀವ್ರ ಹೋರಾಟಕ್ಕಿಳಿದು ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದರು. ಆಗ ರಾಜ್ಯ ರೈತಸಂಘದ ಮುಖಂಡ ಕೋಡಿಹಳ್ಳಿ ಚಂದ್ರಶೇಖರ ಕೊಪ್ಪಳ ಭಾಗದ ರೈತರ ಸಮಸ್ಯೆಗಳನ್ನಿಟ್ಟುಕೊಂಡು ಹೋರಾಟಕ್ಕೆ ಹೊಸ ರೂಪ ಕೊಟ್ಟು, ಚಳವಳಿಯ ತೀವ್ರತೆಯನ್ನು ಹೆಚ್ಚಿಸಿದ್ದರು. ಆ ಸಮಯದಲ್ಲಿ ಶಾಸಕನಾಗಿದ್ದ ಕರಡಿ ಸಂಗಣ್ಣ ರೈತರ ಒಗ್ಗಟ್ಟನ್ನು ಮುರಿಯಲು ಪೊಲೀಸರಿಂದ ಲಾಠಿ ಚಾರ್ಜ್ ಮಾಡಿಸಿದ್ದ. ಆಗ ಸ್ವತಃ ಕೋಡಿಹಳ್ಳಿ ಚಂದ್ರಶೇಖರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಸಂಗಣ್ಣನ ವಿರುದ್ಧ ಸ್ಪರ್ಧಿಸಿ 10 ಸಾವಿರಕ್ಕೂ ಹೆಚ್ಚು ಮತ ಪಡೆದು ತಾವು ಸೋತಿದ್ದೂ ಅಲ್ಲದೆ, ಕರಡಿ ಸಂಗಣ್ಣನನ್ನೂ ಸೋಲಿಸಿದ್ದರು.


ಅಲ್ಲಿಯತನಕ ಊರಲ್ಲಿದ್ದುಕೊಂಡೇ ಮನೆಹಾಳ ಕೆಲಸದಲ್ಲಿ ಪರಿಣಿತನಾಗಿದ್ದ ಸ್ವಾಮಿ ತನ್ನ ಹೆಗಲ ಮೇಲೆ ಒಂದು ಹಸಿರು ಟಾವೆಲ್ ಹಾಕಿಕೊಂಡು ಕೋಡಿಹಳ್ಳಿ ಅವರ ಬೆಂಬಲಿಗನಂತೆ ಪೋಸು ಕೊಡುತ್ತಾ ರಾಜ್ಯ ರೈತಸಂಘವನ್ನೆ ಸೇರಿದ್ದ. ಅದೇ ಆನಂತರದ ದಿನಗಳಲ್ಲಿ ಆತನಿಗೆ ಸುಲಿಗೆಯ ದಾರಿಯಾಯಿತು.

ಸ್ವಾಮಿಯ ಬಣ್ಣಬಣ್ಣದ ಮಾತಿಗೆ ಮರುಳಾದ ರಾಜ್ಯ ರೈತಸಂಘದ ಮುಖಂಡರು ಕೊಪ್ಪಳ ಜಿಲ್ಲಾ ಉಸ್ತುವಾರಿಯನ್ನು ಈತನಿಗೆ ವಹಿಸಿಬಿಟ್ಟರು. ಇದು ಕಳ್ಳನ ಮುಂದೆ ತಿಜೋರಿ ತೆರೆದಂತಾಯಿತ್ತಷ್ಟೆ. ಇದಾದನಂತರ ಸ್ವಾಮಿ ತನ್ನ ಜೋಳಿಗೆಯನ್ನು ತುಂಬಿಸಿಕೊಳ್ಳುವ ಪರಿ ನೋಡಿ ದಂಗಾದ ಕೋಡಿಹಳ್ಳಿ ಆತನ ಕತ್ತು ಹಿಡಿದು ರೈತಸಂಘದಿಂದ ಹೊರದಬ್ಬಿದ್ದರು.

ರಾಜ್ಯ ರೈತಸಂಘದಲ್ಲಿನ ಕಿತ್ತಾಟವನ್ನೇ ಉಪಯೋಗಿಸಿಕೊಂಡು ಲಾಭ ಮಾಡಿಕೊಳ್ಳಲು ಮುಂದಾದ ಸ್ವಾಮಿ ಉತ್ತರ ಕರ್ನಾಟಕ ಭಾಗದ ರೈತರಿಗೆ ರೈತ ಸಂಘದಲ್ಲಿ ಅನ್ಯಾಯವಾಗುತ್ತಿದೆ ಎಂಬ ರೂಮರ್ ತೇಲಿಬಿಟ್ಟ. ಜೊತೆಗೆ ಉತ್ತರ ಕರ್ನಾಟಕ ಪ್ರದೇಶದ ರೈತಸಂಘ ಎಂಬ ಸಂಘಟನೆಯನ್ನು ಹುಟ್ಟುಹಾಕಿ ಅದಕ್ಕೆ ತಾನೇ ಅಧ್ಯಕ್ಷ ಎಂದು ಘೋಷಿಸಿದ. ರೈತ ಮುಖಂಡರಾದ ಪುಟ್ಟಣ್ಣಯ್ಯ, ಕೋಡಿಹಳ್ಳಿ ಚಂದ್ರಶೇಖರ, ವೀರಸಂಗಯ್ಯ, ಸಂಜೀವ ಸ್ವಾಮಿಗಳ ವಿರುದ್ಧ ಇಲ್ಲಸಲ್ಲದ್ದನ್ನು ಹೇಳಿ ಅವರ ವಿರುದ್ಧ ಉತ್ತರ ಕರ್ನಾಟಕದ ರೈತರನ್ನು ಎತ್ತಿ ಕಟ್ಟುವ ಕೆಲಸವನ್ನು ಪ್ರಾರಂಭಿಸಿದ.

ಹೆಗಲ ಮೇಲೆ ಹಸಿರು ಟಾವೆಲ್ ಹಾಕಿಕೊಂಡವರೆಲ್ಲಾ ರೈತ ಮುಖಂಡರಲ್ಲ ಎಂಬುದನ್ನು ಉತ್ತರ ಕರ್ನಾಟಕದ ಆರೇಳು ಜಿಲ್ಲೆಯ ರೈತರಿಗೆ ತಿಳಿಸಿಕೊಟ್ಟದ್ದೇ ಈ ವಂಚಕ ಸ್ವಾಮಿ. ಮುಧೋಳ ತಾಲೂಕಿನ ಲಕ್ಕಲಕಟ್ಟಿ ಗ್ರಾಮದಲ್ಲಿ 'ರೈತ ಸೇವಾಸಂಘ'ಕ್ಕೆ ಜನ್ಮ ಕೊಟ್ಟಿದ್ದ ಸ್ವಾಮಿ ರೈತರಿಗೆ ಸಾಲ ಕೊಡುವುದಾಗಿ ಹೇಳಿ ಸುಮಾರು 800 ರೈತರಿಂದ ತಲಾ 500 ರೂ. ಪಡೆದಿದ್ದ. ಕೊನೆಗೊಂದು ದಿನ ಇಡೀ ಗಂಟನೊಂದಿಗೆ ಅಲ್ಲಿಂದ ನಾಪತ್ತೆಯಾಗಿಬಿಟ್ಟ.


ಕುಷ್ಟಗಿಯ ಹಿರೇಹಂಚಿನಾಳ ಗ್ರಾಮದಲ್ಲಿ ರೈತ ಮಹಿಳೆಯರ ಉದ್ಧಾರದ ಹೆಸರಲ್ಲಿ 'ಮಹಿಳಾ ರೈತ ಸೇವಾಸಂಘ' ಸ್ಥಾಪಿಸಿ ಮಹಿಳೆಯರಿಂದ ಸುಮಾರು ಮೂರು ಲಕ್ಷ ರೂ.ಗಳನ್ನು ಷೇರ್ ರೂಪದಲ್ಲಿ ಸಂಗ್ರಹಿಸಿದ. ಆನಂತರ ಅಲ್ಲಿಂದಲೂ ಕಣ್ಮರೆಯಾದ. ಹಗರಿಬೊಮ್ಮನಹಳ್ಳಿ ರೈತ ಸಂಘಕ್ಕೆ ಸದಸ್ಯತ್ವ ಕೊಡುವ ನೆಪದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಎತ್ತಿದ. ಅವರಿಗೂ ನಾಮ ತಿಕ್ಕಿದ. ಕೊಪ್ಪಳದ ಚಿಕ್ಕಬೊಮ್ಮನಾಳ ಸೇರಿದಂತೆ ಹತ್ತಾರು ಹಳ್ಳಿಗಳಲ್ಲಿ ಜನರಿಗೆ ಪಾತ್ರೆ, ಮನೆ ಸಾಮಾನು ನೀಡುವ ಸ್ಕೀಮು ಆರಂಭಿಸಿದ. ಈ ಸ್ಕೀಮಿಗೆ ಸಂಬಂಧಿಸಿದಂತೆ ಕೊಪ್ಪಳ ಮತ್ತು ಹೊಸಪೇಟೆ ಭಾಗಗಳಲ್ಲೂ ಬ್ರ್ಯಾಂಚ್‌ಗಳನ್ನು ತೆರೆದ. ಎಲ್ಲೆಡೆ ಹಣ ಸಂಗ್ರಹಿಸಿದ ಈ ಭಾನಗಡಿ ಸ್ವಾಮಿ ಅಲ್ಲಿಂದಲೂ ನಾಪತ್ತೆಯಾದ.



ಕೋಡಿಹಳ್ಳಿ–ಪುಟ್ಟಣ್ಣಯ್ಯ

ಸದಾ ಒಂದಿಲ್ಲೊಂದು ವಸೂಲಿ ಸ್ಕೆಚ್ ಹಾಕುತ್ತಿದ್ದ ಸ್ವಾಮಿ ಹತ್ತಾರು ಹೆಸರುಗಳನ್ನುಳ್ಳ ಲೆಟರ್‌ಹೆಡ್ ಮತ್ತು ವಿಜಿಟಿಂಗ್ ಕಾರ್ಡುಗಳನ್ನು ಮುದ್ರಿಸಿ ಅವುಗಳನ್ನು ತನ್ನ ವಂಚನೆಗೆ ಬಳಸಿಕೊಂಡ. ರೈತ ಸೇವಾ ಸಮಿತಿ, ಪ್ರಾಂತ ರೈತ ಸಂಘ, ರೈತ ಅಭಿವೃದ್ಧಿ ಸಮಿತಿ... ಹೀಗೆ ಹತ್ತಾರು ಬೋಗಸ್ ಸಂಘ ಸಮಿತಿಗಳನ್ನು ಸೃಷ್ಟಿಸಿದ್ದ ಸ್ವಾಮಿ ಅಕ್ಷರಶಃ ಬ್ಲ್ಯಾಕ್‌ಮೇಲ್ ದಂಧೆಗಿಳಿದ. ಕಿನ್ನಾಳದ ವಿಎಸ್‌ಎಸ್ ಬ್ಯಾಂಕ್ ವ್ಯವಸ್ಥಾಪಕರನ್ನು ಹಣಕ್ಕಾಗಿ ಪೀಡಿಸಿದ. ಅವರು ಕೊಡದಿದ್ದಾಗ ಬ್ಯಾಂಕಿನಿಂದ ರೈತರಿಗೆ ಅನ್ಯಾಯವಾಗಿದೆ ಎಂದು ತನ್ನ ಚೇಲಾಗಳೊಂದಿಗೆ ಅವರನ್ನು ಸಮಾ ಬಡಿದಿದ್ದ. ಇವನ ಪುಂಡಾಟಿಕೆಯಿಂದ ರೋಸಿಹೋಗಿದ್ದ ಬ್ಯಾಂಕಿನ ಸಿಬ್ಬಂದಿ ಅವನ ವಿರುದ್ಧ ಪೊಲೀಸರಿಗೆ ಕಂಪ್ಲೇಂಟು ಕೊಟ್ಟು ಇವನನ್ನು ಒಳಗೆ ಹಾಕಿಸಿದ್ದರು. ಕೈಯಲ್ಲಿ ಸ್ಲೇಟು ಹಿಡಿದು ಫೋಟೋ ತೆಗೆಸಿಕೊಂಡಿದ್ದ ಸ್ವಾಮಿಗೆ ಒದೆ ಬಿದ್ದನಂತರವೂ ಬುದ್ಧಿ ಬರಲಿಲ್ಲ, ತನ್ನ ಹಳೆಯ ಚಾಳಿಯನ್ನೇ ಮುಂದುವರೆಸಿದ.

ಮೈನಿಂಗ್ ಏರಿಯಾ, ಕೋಳಿ ಫಾರಂ, ಇತರೆ ಕಾರ್ಖಾನೆಗಳಿಂದ ರೈತರ ಬೆಳೆಗೆ ಹಾನಿಯಾಗುತ್ತಿದೆ ಎಂದು ಬೊಗಳೆಬಿಡುತ್ತಾ ತನ್ನ ಹತ್ತಾರು ಚೇಲಾಗಳೊಂದಿಗೆ ಪ್ರತಿಭಟನೆಯ ನಾಟಕವಾಡುತ್ತಿದ್ದ. ಕೊನೆಗೆ ಆ ಕಾರ್ಖಾನೆಗಳ ಮಾಲೀಕರೊಂದಿಗೆ ಡೀಲ್ ಕುದುರಿಸಿಕೊಂಡು ತನ್ನ ಜೋಳಿಗೆ ಭರ್ತಿ ಮಾಡಿಕೊಳ್ಳುತ್ತಿದ್ದ. ಈತ ಕೆಲಕಾಲ ನಕಲಿ ವೈದ್ಯನಾಗಿಯೂ ಪೋಸು ಕೊಟ್ಟಿದ್ದ. ತಾನು ಬಿಎಸ್ಸಿಹೆಚ್‌ಎಮ್‌ಎಸ್ ಪದವಿ ಪಡೆದಿದ್ದಾಗಿ ಬೋರ್ಡ್ ನೇತುಹಾಕಿಕೊಂಡದ್ದಲ್ಲದೆ 'ಡಾ.ಎಸ್.ಆರ್.ಸ್ವಾಮಿ' ಅಂತ ಕರೆಯಿಸಿಕೊಳ್ಳುತ್ತಾ ಕೋಳೂರು, ಕನಕಗಿರಿ ಭಾಗದ ಮುಗ್ಧ ಜನರಿಗೆ ಸೂಜಿ ಚುಚ್ಚಿ ಅವರೆಲ್ಲರಿಗೆ ಯಮಲೋಕದ ದಾರಿ ತೋರಿಸಿದ್ದ. ಈತನ ಸೇವೆಯನ್ನು ಅಪಾರವಾಗಿ 'ಮೆಚ್ಚಿದ' ಅಲ್ಲಿಯ ಜನರೇ ಈತನಿಗೆ ಸರಿಯಾಗಿ ಚಾರಿಸಿ ಊರು ಬಿಡಿಸಿದ್ದರು.



ಕರಡಿ

ಈ ರೀತಿ ಒದೆ ತಿನ್ನುವುದು ಸ್ವಾಮಿ... ಸಾಮಾನ್ಯವಾಗಿಬಿಟ್ಟಿತ್ತು, ಅದರಲ್ಲೂ ಹೊಸಪೇಟೆಯ ದಾ... ಗೆಸ್ಟ್‌ಹೌಸಿನಲ್ಲಿ ಪಲ್ಲಂಗದಾಟಕ್ಕೆ ಅವರಿವರನ್ನು ಕರೆದ... ಒದೆ ತಿಂದಿದ್ದೇ ಜಾಸ್ತಿ ರೈತಸಂಘದ ಕಾರ್ಯಕರ್ತೆಯೊಬ್ಬ... ಒಮ್ಮೆ ಒದೆ ಇಟ್ಟರೆ, ಭಾಗ್ಯನಗರದ ಯುವತಿಯೊಬ್ಬಳು... ತನ್ನ ಚಪ್ಪಲಿಯಿಂದ ಈ ಸ್ವಾಮಿಗೆ ಸೇವೆ ಮಾಡಿದ್ದಳಂ... ಈಗ ಇಂಥದೇ ಒಂದು ದಗಲ್ಬಾಜಿ ಕೆಲಸಮಾ... ಪರಾರಿಯಾಗಿರುವ ಸ್ವಾಮಿಗಾಗಿ ಪೊಲೀಸರು ಕಣ್ಣಲ್ಲಿ ಎ... ಬಿಟ್ಟುಕೊಂಡು ಹುಡುಕುತ್ತಿದ್ದಾರೆ.

ಬೆಂಗಳೂರಿನ ಬೊಮ್ಮನಹಳ್ಳಿ ಮೂಲದ ಸ್ಕ್ರಾಪ್ ವ್ಯಾಪಾರಿ ಮುನ್ನಾರ್ ಮತ್ತು ಅಸ್ಗರ್ ಎಂಬುವವರಿಗೆ ಬರೋಬ್ಬರಿ 10 ಲಕ್ಷದ ಟೋಪ್ಪಿಗೆ ಹಾಕಿ ಪರಾರಿಯಾಗಿರುವ ವಂಚಕ ಸ್ವಾಮಿ ಇವರಿಗೆ ಹೇಳಿರುವ ಸ್ಟೋರಿ ಅಂತಿಂಥದ್ದಲ್ಲ, "ಕೊಪ್ಪಳ, ಹೊಸಪೇಟೆಯ ಭಾಗದಲ್ಲಿರುವ ಎಲ್ಲಾ ದೊಡ್ಡ ದೊಡ್ಡ ಕಂಪನಿಗಳಲ್ಲಿ ನಾನು ಹೇಳಿದ್ದೇ ನಡೆಯುತ್ತೆ, ಒಂದು ರೀತಿಯಲ್ಲಿ ನಾನೇ ಇವಕ್ಕೆಲ್ಲ ಜಿಎಂ ಇದ್ದಂತೆ" ಎಂದು ಸ್ವಾಮಿ ರೀಲು ಸುತ್ತಿದ್ದಲ್ಲದೇ "ಕೊಪ್ಪಳದ ಬಲ್ದೋಟಾ ಗ್ರೂಪ್‌ನ ಪೆಲೆಟ್ ಕಾರ್ಖಾನೆಯಲ್ಲಿ 300 ಟನ್ ಸ್ಕ್ರಾಪ್ ಇದೆ. ಎಂಎಸ್‌ಪಿಎಲ್ ಪೆಲೆಟ್ ಪ್ಲಾಂಟ್‌ನಲ್ಲಿ ಅದನ್ನು ಇಡಲಾಗಿದೆ. 58 ಲಕ್ಷದ 50 ಸಾವಿರಕ್ಕೆ ನಾನು ಈಗಾಗಲೇ ಅದನ್ನ ಖರೀದಿಸಿದ್ದು, ಆ ಪೈಕಿ 45 ಲಕ್ಷ ಕಾರ್ಖಾನೆಗೆ ತುಂಬಿದ್ದೇನೆ. ಉಳಿದ 13 ಲಕ್ಷ ಕಟ್ಟಿಬಿಟ್ಟರೆ, ಪೂರ್ತಿ ಮಾಲು ನನ್ನದಾಗುತ್ತೆ" ಎಂದು ಮುನಾರ್ ಮತ್ತು ಅಸ್ಗರ್‌ನ ತಲೆ ತಿಕ್ಕಿದ್ದಾನೆ. ಇದಕ್ಕೆ ಮುನ್ನ ಸ್ವಾಮಿಯ ಚೇಲಾಗಳಾದ ಹೊಸಪೇಟೆಯ ಅಬೂಬಕರ್ ಮತ್ತು ಖಾಸಿಂ ಎಂಬುವವರು ಈ ವ್ಯಾಪಾರಿಗಳ ಮುಂದೆ ಸ್ವಾಮಿಯನ್ನು ಹೊಗಳಿ ಅಟ್ಟಕ್ಕೇರಿಸಿದ್ದಾರೆ. ಇವರೆಲ್ಲರೂ ಸುತ್ತಿದ್ದ ಕಥೆಯನ್ನೇ ನಂಬಿದ ಅವರಿಬ್ಬರು ಸ್ವಾಮಿಗೆ ಅಡ್ವಾನ್ಸ್ ಆಗಿ 10 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅವರಿಂದ ಹಣ ಪಡೆದ ಕೂಡಲೇ ಸ್ವಾಮಿ ನಾಪತ್ತೆಯಾಗಿದ್ದಾನೆ.

ಈಗ ಈ ಇಬ್ಬರೂ ಬೆಂಗಳೂರು ವ್ಯಾಪಾರಿಗಳು ಕೊಪ್ಪಳದ ಪೊಲೀಸರ ಮೊರೆ ಹೋಗಿದ್ದು "ನಮಗೆ ಸ್ಕ್ರಾಪೂ ಬೇಡ, ಸ್ವಾಮಿನೂ ಬೇಡ. ನಮ್ಮ ಹಣ ನಮಗೆ ಕೊಡಿಸಿ ಸಾಕು" ಎಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ.

ರೈತರ ಹೆಸರನ್ನೇ ಬಂಡವಾಳವನ್ನಾಗಿಸಿಕೊಂಡು ಕಳೆದ ಎಂಟು... ಹತ್ತು ವರ್ಷಗಳಿಂದ ಉತ್ತರ ಕರ್ನಾಟಕ ಭಾಗದ ಬಹುಪಾಲು ಜಿಲ್ಲೆಗಳ ಮುಗ್ಧ ಜನರಿಗೆ ವಂಚನೆ ಮಾಡುತ್ತಾ, ಆಗಾಗ... ಅಲ್ಲಲ್ಲಿ ಪ್ರತ್ಯಕ್ಷನಾಗಿ ಹೊಸ ಸ್ಕೀಂ ಓಪನ್ ಮಾಡುವ... ಸ್ಕ್ರಾಪ್ ಸ್ವಾಮಿ ನಿಮ್ಮಲ್ಲಿಗೂ ಬಂದಾನು ಜೋಕೆ...

• ಹುರಳಿಕುಪ್ಪಿ ವಿನಯ...

...ಾರವಾಡ: ಶಾಸಕಿ ಸೀಮಾ ಮಸೂತಿಯ ಭರ್ತಿ ಭೋಜನ

...ಾರವಾಡದ ಗ್ರಾಮೀಣ ವಿಧಾನಸಭಾ ಕ್ಷೇತ್ರದ ...ು ಕಟ್ಟು ಕಿರ ಹಿಡಿದಿದೆ. ಶಾಸಕಿ ಸೀಮಾ ಮಸೂತಿಯ ಸುಲಿಗೆಯನ್ನು ಕಂಡು ಜನತೆ ದಂಗಾಗಿದ್ದಾರೆ. ...ಯೂರಪ್ಪನ ಲಿಂಗಾಯತ ಗಾಳಿಯಲ್ಲಿ ತೇಲಿಬಂದ ... ಕಳೆದ ಮೂರೂವರೆ ವರ್ಷಗಳಲ್ಲಿ 'ಬಡವಿ' ಎಂಬ ...ದದ 'ಕೋಟ್ಯಾಧಿಪತ್ನಿ' ಎಂಬ 'ಮಾನ'ಕ್ಕೆ ಬಡ್ತಿ ...ದ್ದಾರೆ.


...ಲ್ಲಾ ಪಂಚಾಯತಿ ಲೆವೆಲ್‌ನಿಂದ ರಾಜಕಾರಣಕ್ಕೆ ಎಂಟ್ರಿ ... ಮಸೂತಿ ಮೇಡಮ್ ಶಾಸಕಿಯಾಗಿ ವಿಧಾನಸೌಧದ ...ು ಹತ್ತಿದ್ದೇ ತಡ, ಆಕೆಯ ಗಂಡ ಅಶೋಕ್ ...ವಿಗೆಂದು 'ಕಾಸು ಕೊಟ್ಟರೆ ಕಾಮಗಾರಿ' ಎಂಬ ...ನ್ನು ಶುರು ಮಾಡಿಬಿಟ್ಟ. ಸದ್ಯ ಸ್ವತಃ ಈತನೂ ...ದಾರ. ಹೀಗಾಗಿ ಕಾಮಗಾರಿ ಹೆಸರಿನಲ್ಲಿ ಸರ್ಕಾರದ ... ಕೋಟಿ ದುಡ್ಡು ಸೇಫಾಗಿ ಸೀಮಾಳ ...ರಿ ಸೇರುತ್ತಿದೆ.


...ಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ ...ದ ಮಧ್ಯಮ ವರ್ಗದ ಕುಟುಂಬದಿಂದ ... ಸೀಮಾ ಮುಂದೆ ಅದೇ ತಾಲೂಕಿನ ... ಬೆಟಗೇರಿ ಗ್ರಾಮದ ಮಸೂತಿ ...ಲಿಯ ಅಶೋಕನೊಂದಿಗೆ ವಿವಾಹ ...ು. ಆಗ ಈ ದಂಪತಿಗಳು ಹೇಳಿಕೊಳ್ಳು... ಶ್ರೀಮಂತರೇನೂ ಆಗಿರಲಿಲ್ಲ. ಗಂಡನ ...ದ್ದಿದ್ದು ಕೇವಲ ಐದು ಎಕರೆ ಜಮೀನು ... ನಿಯತ್ತಾಗಿ ಯಾವುದೇ ಕೆಲಸ ಮಾಡದೆ, ...ಡಿ ಗುಂಡನಂತಿದ್ದ ಅಶೋಕ ಮಸೂತಿ ...ರೈತನೂ ಅಲ್ಲ ಇತ್ತ ವ್ಯಾಪಾರಿಯೂ ...ಅವರಿವರ ತಲೆ ಒಡೆದು ಸುಲಿಯುವು...ಮೂಲ ಕಸುಬನ್ನಾಗಿಸಿಕೊಂಡಿದ್ದ ಆಸಾಮಿ ...ಗ್ರಾಮದಲ್ಲಿ ಈತ ಫೇಮಸ್ ಗ್ಯಾಂಬ್ಲರ್ ...ಹೌದು. ಹಿಂದೊಮ್ಮೆ ಇಸ್ಪೀಟ್ ಅಡ್ಡೆಯ ...ರೇಡು ಬಿದ್ದಾಗ ಈತನನ್ನ ಗರಗ್ ...ಸ್ ಠಾಣೆಯಲ್ಲಿ ಒದ್ದು ಒಳಹಾಕಲಾಗಿತ್ತು. ...ಸಾಹೇಬರು ಕೈಯಲ್ಲಿ ಸ್ಲೇಟು ...ಕೊಂಡಿದ್ದ ಫೋಟೋವನ್ನು ಆತನ ... ಶಾಸಕಿ ಆದನಂತರ ತೆಗೆಸಲಾಯಿತು. ...ರ ಪ್ರಳಯಾಂತಕ ಗಂಡ ಅಶೋಕ ...ತಿ ತನ್ನ ಹೆಂಡತಿ ಸೀಮಾ ಮಸೂತಿಯನ್ನ ... ತಯಾರು ಮಾಡಿ ಲೂಟಿಗೆ ನಿಲ್ಲಿಸಿದ್ದಾನೆ. ...ಯಾವುದೇ ಮೂಲಭೂತ ಸೌಕರ್ಯ ...ವೆ ನರಳುತ್ತಿದ್ದ ಉಪ್ಪಿನ ಬೆಟಗೇರಿಯನ್ನು ...ರ ಮಾಡುತ್ತೇನೆಂದ ಸೀಮಾರನ್ನು ನಂಬಿದ ...ಆಕೆಯನ್ನು ಮೊದಲ ಬಾರಿಗೆ ಜಿಲ್ಲಾ ...ಯಿತ್ತಿಯ ಸದಸ್ಯರನ್ನಾಗಿ ಗೆಲ್ಲಿಸಿದರು. ಆದರೆ ... ಕೂಡಲೇ ತನ್ನನ್ನು ಚುನಾಯಿಸಿದ ...ನ್ನು ಮರೆತು ಧಾರವಾಡವನ್ನೇ ತನ್ನ ಸ್ವಕ್ಷೇತ್ರವನ್ನಾಗಿ ...ಕೊಂಡು ಭರ್ತಿ ವಸೂಲಿಗಿಳಿದುಬಿಟ್ಟರು. ಪೂರ್ತಿ ...ವರ್ಷ ಜಿಲ್ಲಾ ಪಂಚಾಯಿತ್ತಿಯಲ್ಲಿ ಗೆಬರಿದ ಹಣದಲ್ಲಿ ...ಷ್ಟನ್ನು ತೂರಿ ಮತ್ತೆ ಗೆಲ್ಲುತ್ತೇನೆ ಎಂದು ಗರಗ್ ...ಂದ ಸ್ಪರ್ಧಿಸಿದರು. ಆದರೆ ಕಾಂಗ್ರೆಸ್ಸಿನ ಗೀತಾ ...ಲ್‌ಶ ಎದುರು ಸೀಮಾ ಹೀನಾಯವಾಗಿ ಸೋತು ...ಟನ್ನೇ ಕಳೆದುಕೊಂಡರು.

...ಅಧಿಕಾರವಿದ್ದಾಗ ಅಟ್ಟಹಾಸದಿಂದ ಮೆರೆಯುವ, ...ಗ ತಲೆಮೇಲೆ ಸೆರಗು ಹೊತ್ತುಕೊಳ್ಳುವ ಸೀಮಾರ ... ಮಾತಿಗೆ ಮರುಳಾದ ಚೆಡ್ಡಿ ಮಂತ್ರಿ ಜಗದೀಶ ... ಸೀಮಾ ಹೇಳಿದ್ದಕ್ಕೆಲ್ಲಾ ಸೈ ಎನ್ನುತ್ತಾ ಹೋದರು. ... ಅವರ ನೆರವಿನಿಂದಲೇ ಕಳೆದ ವಿಧಾನಸಭಾ ...ವಣೆಯಲ್ಲಿ ಆಕೆಯ ಕೈಗೆ ಸಲೀಸಾಗಿ ಬಿಜೆಪಿಯ ಬಿ...ರ್ಮ್ ಸೇರಿತ್ತು.

...ಾರವಾಡ ಗ್ರಾಮೀಣ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ವಿನಯ ...ರ್ಣಿ ಎಂಬ ಸಜ್ಜನ ರಾಜಕಾರಣಿ ಎದುರು ...ಳಿದಿದ್ದ ಸೀಮಾ ಮಸೂತಿಗೆ ಸ್ವತಃ ಗೆಲ್ಲುತ್ತೇನೆ ಎನ್ನುವ ಭರವಸೆಯೇ ಇರಲಿಲ್ಲ, ಹೀಗಾಗಿ ಆಕೆ ಪ್ರಚಾರಕ್ಕೂ ಹೋಗದೆ, ಮನೆಯಲ್ಲೇ ಟೈಂಪಾಸ್ ಮಾಡಿದ್ದೇ ಹೆಚ್ಚು. ಚುನಾವಣೆ ಪ್ರಚಾರಕ್ಕೆಂದು ಪಾರ್ಟಿಯಿಂದ 60 ಲಕ್ಷ, ಜಗದೀಶ ಶೆಟ್ಟರ್ ಕೊಟ್ಟಿದ್ದ 10 ಲಕ್ಷ, ಜನಾರ್ದನ ರೆಡ್ಡಿ ದಾನ ಮಾಡಿದ್ದ 15 ಲಕ್ಷ, ಪ್ರಹ್ಲಾದ್ ಜೋಷಿ ಬಿಸಾಡಿದ್ದ 5 ಲಕ್ಷ... ಹೀಗೆ ವಿವಿಧ ಕಡೆಗಳಿಂದ ಸುಮಾರು ಒಂದೂವರೆ ಕೋಟಿ ರೂಪಾಯಿ ಈಕೆಯ ಎಲೆಕ್ಷನ್‌ಗಾಗಿ ಹರಿದು ಬಂದಿತ್ತು, ಆದರೆ, ಸೋಲುವ ಭಯದಲ್ಲಿದ್ದ ಸೀಮಾ ಮಸೂತಿ ತೋರಿಕೆಗಾಗಿ ಎರಡು ವಾಹನಗಳನ್ನ ಪ್ರಚಾರಕ್ಕೆ ಬಿಟ್ಟು, ಕಂಡವರ ಮುಂದೆ ಕೈಮುಗಿದು, ಪ್ರಚಾರಕ್ಕೆಂದು ಕೇವಲ 20 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಉಳಿದದ್ದನ್ನು ತನ್ನ ತಿಜೋರಿಗೆ ಹಾಕಿಕೊಂಡಿದ್ದಳು.

ಧಾರವಾಡದ ಗ್ರಾಮೀಣ ಕ್ಷೇತ್ರದ ಜನರಿಗೆ ಅದೇನಾಗಿತ್ತೋ. ಯಡಿಯೂರಪ್ಪನ ಜಾತಿರಾಜಕಾರಣದಲ್ಲಿ ಮೈಮರೆತ ಮತದಾರರು ಕಾಂಗ್ರೆಸ್ಸಿನ ವಿನಯ ಕುಲಕರ್ಣಿಯನ್ನ ಸೋಲಿಸಿ, ಕೇವಲ 726 ಮತಗಳ ಅಂತರದಿಂದ ಸೀಮಾಳನ್ನು ಗೆಲ್ಲಿಸಿ ಬಿಟ್ಟರು. ಆಗಲೇ ಶುರುವಾಗಿದ್ದು ಸೀಮಾರ ಸುಲಿಗೆ ಪುರಾಣದ ಎರಡನೆ ಅಧ್ಯಾಯ.











ಟ್ರಾನ್ಸ್‌ಫರ್ ದಂಧೆ

ಶಾಸಕಿಯಾಗಿ ಸೀಮಾ ಕ್ಷೇತ್ರದಲ್ಲಿ ಹೇಳಿಕೊಳ್ಳುವಂಥ ಯಾವ ಘನಂದಾರಿ ಕೆಲಸವನ್ನೂ ಮಾಡಿಲ್ಲ, ಆದರೆ ತನಗೆ ಆಮದನಿ ತರುವ ಯಾವ ಮೂಲೆಯನ್ನೂ ಈಕೆ ಬಿಟ್ಟಿಲ್ಲ. ಸೀಮಾ ಇಡೀ ಧಾರವಾಡ ಜಿಲ್ಲೆಯಲ್ಲಿ ಇಲ್ಲಿಯ ವರೆಗೂ ಯಾವ ರಾಜಕಾರಣಿಯೂ ಮಾಡದಷ್ಟು ಟ್ರಾನ್ಸ್‌ಫರ್‌ಗಳನ್ನು ಮಾಡಿಸಿದ್ದಾರೆ. ಸಿಪಾಯಿ ಡ್ರೈವರಿನಿಂದ ಹಿಡಿದು ಡಿಸಿ, ಎಸ್‌ಪಿವರೆಗೂ ಖುದ್ದಾಗಿ ಡೀಲ್ ಕುದುರಿಸುವ ಸೀಮಾ ತಾನೇ ನಿಂತು ವರ್ಗಾವಣೆಯ ಆದೇಶ ತರುತ್ತಾರೆ. ಪ್ರತಿ ಟ್ರಾನ್ಸ್‌ಫರ್ ಡೀಲಿನಲ್ಲಿ 5000 ರೂಪಾಯಿಗಳಿಂದ ಶುರುವಾಗಿ 10 ಲಕ್ಷ ರೂಪಾಯಿಗಳ ತನಕ ಸೀಮಾ ಮೇಡಂ ಅವರ ಪರ್ಸ್‌ಗೆ ಬಿದ್ದಿದೆ. ಉದಾಹರಣೆಗೆ, ಈಗ ಧಾರವಾಡ ಗ್ರಾಮೀಣ ಸರ್ಕಲ್ ಇನ್ಸ್‌ಪೆಕ್ಟರ್ ಆಗಿರುವ ತುಳಜಪ್ಪ ಸುಲ್ಫಿ ಎಂಬಾತ 'ನಾನು ಸೀಮಾ ಮೇಡಂಗೆ 10 ಲಕ್ಷ ಕೊಟ್ಟು ಇಲ್ಲಿಗೆ ಬಂದೀನಿ' ಅಂತ ಓಪನ್ನಾಗಿ ಹೇಳಿಕೊಂಡು ತಿರುಗುತ್ತಿದ್ದಾನೆ.

ಯಾರು ಅದೆಷ್ಟೇ ಹಣ ಕೊಟ್ಟು ಬಂದಿದ್ದರೂ ಸೀಮಾ ಮಸೂತಿಯ ಸಾಮ್ರಾಜ್ಯದಲ್ಲಿ ಪ್ರತಿ ಡೀಲಿನ ಅವಧಿ ಕೇವಲ ಆರು ತಿಂಗಳು ಮಾತ್ರ. ರುದ್ರಸ್ವಾಮಿ ಎಂಬುವವರು ಸೀಮಾರಿಗೆ ಐದು ಲಕ್ಷ ರೂಪಾಯಿಗಳನ್ನು ತೆತ್ತೇ ತಾಲೂಕು ಪಂಚಾಯತಿಗೆ ಇಓ ಆಗಿ ಐದು ತಿಂಗಳ ಹಿಂದೆ ಬಂದಿದ್ದರು. ಆದರೀಗ ಸೀಮಾ ಮಸೂತಿ "ಟೈಂ ಆಗಿದೆ. ಇನ್ನೂ ಮೂರು ಲಕ್ಷ ಕೊಟ್ಟರೆ ನೀನು ಇಲ್ಲಿ ಇರ್‍ತೀಯ, ಇಲ್ಲಾಂದ್ರೆ ಹೋಗ್ತೀಯ" ಅಂತ ಧಮಕಿ ಹಾಕಿದ್ದಾರಂತೆ.





ರೊಕ್ಕ ತೆತ್ತು ಇಲ್ಲಿಗೆ ಬಂದಿರುವ ಅಧಿಕಾರಿಗಳು ಪ್ರತಿ ತಿಂಗಳು ನಿಯತ್ತಾಗಿ ಮಾಮೂಲಿಯನ್ನು ಸೀಮಾಗೆ ತಲುಪಿಸಬೇಕು. ಅದರಂತೆ ಧಾರವಾಡದ ತಹಶೀಲ್ದಾರ ರವೀಂದ್ರ ಕರಿಲಿಂಗಣ್ಣವರ ಪ್ರತಿ ತಿಂಗಳು ಒಂದು ಕೆ.ಜಿ ಪೇಡಾ ಜೊತೆಗೆ ಎರಡು ಲಕ್ಷ ರೂಪಾಯಿಗಳನ್ನು ಇಟ್ಟು 'ಅಡ್ಡಬಿದ್ದೆ' ಅನ್ನುತ್ತಾರಂತೆ. ಹಾಗೆಯೇ ವಿವಿಧ ಪೊಲೀಸ್ ಠಾಣೆಗಳಿಂದ ಲಕ್ಷಗಳ ಲೆಕ್ಕದಲ್ಲಿ ಹಣ ಸಂಗ್ರಹವಾಗುತ್ತದೆ.



ಸೀಮಾ ಮಸೂತಿಯ ಈ ವರ್ಗಾವಣೆ ದಂಧೆಯನ್ನು ನೋಡಿ ದಂಗಾಗಿರುವ ಧಾರವಾಡ ಶಹರದ ಶಾಸಕ ಚಂದ್ರಕಾಂತ ಬೆಲ್ಲದ ಈಕೆಯನ್ನು ತಮ್ಮ ಮನೆಗೆ ಕರೆಸಿ ಚೆನ್ನಾಗಿ ಉಗಿದು ಕಳುಹಿಸಿದ್ದಾರಂತೆ.

ಕಾಮಗಾರಿ ಕಮೀಷನ್

ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಪ್ರತಿ ಕಾಮಗಾರಿಗೆ ಶೇ.20 ರಷ್ಟು ಕಮೀಷನ್ ಅನ್ನು ಸೀಮಾ ಮಸೂತಿಗೆ ಕೊಟ್ಟ ಮೇಲೆಯೇ ಗುತ್ತಿಗೆದಾರರಿಗೆ ವರ್ಕ್ ಆರ್ಡರ್ ಸಿಗುವುದು. ಕಮೀಷನ್ ಪಡೆಯುವಲ್ಲಿ ಈ ಸೀಮಾ ಎಂತಹ ಚಾಣಾಕ್ಷೆ ಎಂದರೆ ಮುಖ್ಯಮಂತ್ರಿಯೊಬ್ಬ ಮಂತ್ರಿಗಿರಿ ಹಂಚಿದಂತೆ ಈಕೆ ತನ್ನ ಚೇಲಾಗಳಿಗೆ ಒಂದೊಂದು ಖಾತೆಯನ್ನು ಹಂಚಿದ್ದಾರೆ.


ಸೀಮಾ ಮಸೂತಿಯ ಅನಧಿಕೃತ 'ಸರ್ಕಾರ'ದಲ್ಲಿ ಯಾವಾಗಲೂ ಇವಳ ಹಿಂದೆ ವ್ಯಾನಿಟಿ ಬ್ಯಾಗ್ ಹಿಡಿದು ತಿರುಗುವ ಮಂಜುಳಾ ಕಾಪ್ಸೆ ಎಂಬಾಕೆಗೆ ಲೋಕೋಪಯೋಗಿ ಇಲಾಖೆಯ ಉಸ್ತುವಾರಿಯನ್ನು ಕೊಡಲಾಗಿದೆ. ಹದಗೆಟ್ಟ ರಸ್ತೆಗಳು ಸುಧಾರಿಸಲಿ ಬಿಡಲಿ, ದಾಖಲೆಗಳಲ್ಲೇ ಜೆಲ್ಲಿ-ಡಾಂಬರ್ ಹಾಕಿಸುವ ಮಂಜುಳಾ ಕಾಪ್ಸೆ ತನಗೆ ಪರ್ಸಂಟೇಜ್ ಕೊಡುವವರೆಗೂ ಕಚೇರಿಯಿಂದ ಕಾಲ್ಕೀಳುವ ಮಾತೇ ಇಲ್ಲವಂತೆ. ಇನ್ನು ಅಶೋಕ ಮಸೂತಿಯ ಬಹುತೇಕ ವ್ಯವಹಾರ ಗಳಲ್ಲಿ ಪಾಲುದಾರನಾದ ಹಾಲಪ್ಪ ದೊಡ್ಡಮನಿ ಎಂಬಾತ ಇಲ್ಲಿನ ಎಲ್ಲ ವಸೂಲಿ ದಂಧೆಯ ಮೂಲ ಸೂತ್ರಧಾರ. ಹೀಗಾಗಿ ಇವನ ಪಟಾಲಂಗಳಾದ ಈಶ್ವರ್ ಶಿವಳ್ಳಿ, ಗರಗದ ಮಡಿವಾಳಪ್ಪ ಉಳವಣ್ಣವರ, ಪರಮೇಶಪ್ಪ ಉಳವಣ್ಣವರ ಮತ್ತು ಸಿಮೆಂಟ್ ಕಳ್ಳ ನಾಗಪ್ಪ ಗಾಣಿಗೇರ... ಇವರೆಲ್ಲ ಜೊತೆಗೂಡಿ ಜಿಲ್ಲಾ ಪಂಚಾಯಿತ್ತಿಯನ್ನು ಸುಳಿದಿರುವುದಲ್ಲದೆ ಬಡವರಿಗೆ ಸೇರಬೇಕಾದ ಆಶ್ರಯ ಮನೆಗಳನ್ನೇ ಭರ್ತಿ ರೇಟಿಗೆ ಬಿಕರಿ ಮಾಡಿದ್ದಾರೆ.


ಸೀಮಾ ಮಸೂತಿಯ ಆಡಳಿತದಲ್ಲಿ ರಸ್ತೆ ಕಾಮಗಾರಿಗೆಂದು ಬಂದಿದ್ದ ಕೋಟ್ಯಾಂತರ ರೂಪಾಯಿಗಳು ಮಂಗಮಾಯವಾಗಿವೆ. ಗೋವನಕೊಪ್ಪ ಮಾಗಡಿ ರಸ್ತೆ, ಧಾರವಾಡ ತಲವಾಯಿ ರಸ್ತೆಗಳಿಗೆ ಟಾರ್ ಇರಲಿ ಮಣ್ಣು ಕೂಡ ಬಿದ್ದಿಲ್ಲ, ಸೀಮಾಳ ಸ್ವಂತ ಊರು ಉಪ್ಪಿನಬೆಟಗೇರಿಯ ರಸ್ತೆಯನ್ನೇ ರಿಪೇರಿ ಮಾಡಿಸದೆ ಕಾಮಗಾರಿಯ ಹೆಸರಿನಲ್ಲಿ ಹಣವನ್ನು ನುಂಗಿ ಹಾಕಿದ್ದಾರೆ. ಉತ್ತರ ಕರ್ನಾಟಕ ಭಾಗದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಎಲ್ಲಮ್ಮನ ಗುಡ್ಡಕ್ಕೆ ಹೋಗುವ ಧಾರವಾಡ ಸವದತ್ತಿ ರಸ್ತೆಯ ಮೇಲಿನ ಟಾರು ವಾಹನಗಳ ಟೈರಿಗೆ ಅಂಟಿಕೊಂಡೇ ಖಾಲಿಯಾಗಿದೆ. ಆದರೂ ಇದಕ್ಕೆ ಬಿಡುಗಡೆಯಾಗಿದ್ದ ಎಂಟು ಕೋಟಿ ರೂಪಾಯಿಗಳು ಮಾತ್ರ ದಾಖಲೆಗಳಲ್ಲಿ ಖರ್ಚಾಗಿದೆ. ಈ ಅವ್ಯವಹಾರವನ್ನು ಖುದ್ದಾಗಿ ಕಂಡ ಮಂತ್ರಿ ಜಗದೀಶ ಶೆಟ್ಟರ ಸೀಮಾರಿಗೆ ಸರಿಯಾಗಿ ಉಗಿದಿದ್ದಲ್ಲದೇ ಆ ಕಾಮಗಾರಿ ಕುರಿತು ತನಿಖೆಗೆ ಆದೇಶ ಮಾಡಿದ್ದಾರೆ.

ಇನ್ನು ಕೆರೆಯ ಹೂಳೆತ್ತುವ ಕಾಮಗಾರಿಯಂತೂ ಸೀಮಾ ಮಸೂತಿಯ ತಿಜೋರಿಗೆ ದುಡ್ಡನ್ನು ಹೊತ್ತು ಹಾಕುವ ಯೋಜನೆಯಾಗಿ ಪರಿವರ್ತಿತಗೊಂಡಿದೆ. ಒಂದು ಕಾಮಗಾರಿಗಾಗಿ 10-20 ಲಕ್ಷಗಳನ್ನು ಪಡೆದಿದ್ದರೂ ಎರಡೇ ಲಕ್ಷದಲ್ಲಿ ಕೆಲಸ ಮುಗಿಸಿ ಕೈ ತೊಳೆದುಕೊಳ್ಳಲಾಗಿದೆ.

ಜಿಲ್ಲಾ ಪಂಚಾಯತಿಯ 'ಎನ್‌ಆರ್‌ಇಜಿ' ಹಾಗೂ ಶಾಸಕರ ಅನುದಾನದಡಿ ಚೆಕ್ ಡ್ಯಾಮ ನಿರ್ಮಾಣ, ರಸ್ತೆ ದುರಸ್ತಿ ಡಾಂಬರಿಕರಣ ಸೇರಿದಂತೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಎಂಟು ಕಾಮಗಾರಿಗಳನ್ನು ಯಾವುದೇ ಟೆಂಡರ್ ಕರೆಯದೆ ಸೀಮಾ ಮಸೂತಿ ತನ್ನ ಬೆಂಬಲಿಗ ಹಾನಗಲ್ ಮೂಲದ ಹಾಲಪ್ಪಾ ದೊಡ್ಡಮನಿ ಎಂಬ ಗುತ್ತಿಗೆದಾರನಿಗೆ ಕೊಡಿಸಿದ್ದಾರೆ.

ಹೀಗೆ ಅಕ್ರಮವಾಗಿ ಕೋಟ್ಯಾಂತರ ರೂಪಾಯಿಗಳ ಕಾಮಗಾರಿಯ ಗುತ್ತಿಗೆಗಳನ್ನು ಪಡೆದ ಹಾಲಪ್ಪಾ ದೊಡ್ಡಮನಿ ಕಿಕ್ ಬ್ಯಾಕ್‌ಆಗಿ ಸುಮಾರು 15 ಲಕ್ಷ ರೂಪಾಯಿಗಳ 'ಟಾಟಾ ಸಫಾರಿ' ಲಕ್ಸುರಿ ವಾಹನವನ್ನು ಸೀಮಾ ಮಸೂತಿಗೆ ನೀಡಿದ್ದಾನೆ. 'ಎಂ 25 ಕ-7218' ನಂಬರಿನ ಈ ಟಾಟಾ ಸಫಾರಿಯ ಮೇಲೆ ಶಾಸಕರ ಪಾಸ್ ಅಂಟಿಸಿಕೊಂಡು ಜುಮ್ ಅಂತ ಸೀಮಾ ಮಸೂತಿ ಓಡಾಡುತ್ತಿದ್ದಾರೆ.




GOVERNMENT OF KARNATAKA

ಹಾಲಪ್ಪನಿಂದ ಸೀಮಾ ಪಡೆದಿರುವ ವಾಹನ ಮತ್ತು ಅದರ ದಾಖಲೆ

ಬೆಳೆಯುತ್ತಿರುವ ಮಸೂತಿ ಆಸ್ತಿ ಪಟ್ಟಿ

ಸೀಮಾ ಮತ್ತು ಅಶೋಕ್ ಮಸೂತಿ ಮದುವೆ ಆದಾಗ ಪಿತ್ರಾರ್ಜಿತವಾಗಿ ಬಂದಿದ್ದ ಐದು ಎಕರೆ ಜಮೀನನ್ನು ಹೊರತುಪಡಿಸಿದರೆ ಅವರ ಹೆಸರಿನಲ್ಲಿ ಬೇರೇನು ಆಸ್ತಿ ಇರಲಿಲ್ಲ, ಆದರೆ ಕಳೆದ ಎಂಟು ವರ್ಷದ ರಾಜಕಾರಣದಿಂದ ಇವತ್ತು ಮಸೂತಿ ದಂಪತಿಗಳು ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆಬಾಳುವ ಆಸ್ತಿಗಳ ಒಡೆಯರಾಗಿದ್ದಾರೆ.

ಧಾರವಾಡದ ಮುರುಗಾ ಮಠದ ಹತ್ತಿರ 1.16 ಕೋಟಿ ಕೊಟ್ಟು ಒಂದು ನಿವೇಶನ ಖರೀದಿಸಿದ ಸೀಮಾ ಸದ್ಯ ಆ ಜಾಗೆಯಲ್ಲಿ ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಭವ್ಯಬಂಗಲೆ ಕಟ್ಟುತ್ತಿದ್ದಾರೆ. ಅದಲ್ಲದೆ, ಧಾರವಾಡದ ಹತ್ತಿಕೊಳ್ಳದ ಹತ್ತಿರ ಆರು ಎಕರೆ, ಕ್ಯಾರಕೊಪ್ಪದ ಹತ್ತಿರ 20 ಎಕರೆ, ಯಾದವಾಡದಲ್ಲಿ ಐದು ಎಕರೆ, ಬೆಂಗಳೂರಿನಲ್ಲಿ ಎರಡು ನಿವೇಶನ ಸೇರಿದಂತೆ ಬೇಲೂರಿನ ಕೈಗಾರಿಕಾ ಪ್ರದೇಶದಲ್ಲಿ ಬೇನಾಮಿ ಹೆಸರಲ್ಲಿ 8-10 ನಿವೇಶನಗಳನ್ನೂ ಕೊಂಡಿದ್ದಾರೆಂಬ ಸುದ್ದಿ ಇದೆ. ಇದೆಲ್ಲ ಬಂದಿದ್ದು ಭ್ರಷ್ಟ ಮಾರ್ಗದಿಂದ ಎಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ.

ಪಾಠ ಕಳಿಸುತ್ತಿರುವ ಜನ

ಸೀಮಾ ಮಸೂತಿಯ ಕಬಳಿಕೆಯನ್ನು ಕಂಡೇ ಈಕೆಯ ಕ್ಷೇತ್ರದ ಜನ ಇಲ್ಲಿಯವರೆಗೆ ಜರುಗಿರುವ ಎಲ್ಲಾ ಸ್ಥಳೀಯ ಚುನಾವಣೆಗಳಲ್ಲಿ ಆಕೆಗೆ ಬುದ್ಧಿ ಕಲಿಸಲು ಪ್ರಯತ್ನಿಸಿದ್ದಾರೆ. ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಸ್ವತಃ ಸೀಮಾಳ ಉಪ್ಪಿನ ಬೆಟಗೇರಿಯ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಹೀನಾಯ ಸೋಲುಂಡು ಕಾಂಗ್ರೆಸ್‌ನ ಕಸ್ತೂರಿ ಅಷ್ಟಗಿ ಗೆದ್ದಿದ್ದಾರೆ. ಕೋಟೂರು, ಹುಬ್ಬಳ್ಳಿಯಲ್ಲೂ ಕಾಂಗ್ರೆಸ್ಸಿಗೆ ಗೆಲುವಾಗಿದೆ. ಗರಗದಲ್ಲಿ ಜೆಡಿಎಸ್ ಗೆದ್ದಿದೆ. ಇಲ್ಲಿರುವ 21 ಗ್ರಾಮ ಪಂಚಾಯತಿಗಳಲ್ಲಿ ಕೇವಲ ಎರಡರಲ್ಲಿ ಮಾತ್ರ ಸೀಮಾರ ಅಧಿಕಾರ ನಡೆಯುತ್ತಿದೆ. ಎಪಿಎಂಸಿಯಲ್ಲಿರುವ 13 ಸದಸ್ಯರಲ್ಲಿ ಕೇವಲ ಮೂರು ಜನ ಮಾತ್ರ ಈಕೆಯ ಕಡೆಯವರು ಗೆದ್ದಿದ್ದರಿಂದ ಅಲ್ಲಿ ಕೂಡ ಕಾಂಗ್ರೆಸ್ ಅಧಿಕಾರ ನಡೆಸುತ್ತಿದೆ. ಇಡೀ ಧಾರವಾಡ ಗ್ರಾಮೀಣ ಕ್ಷೇತ್ರ ಈಕೆಯ ಉಣ್ಣುವ ಪರಿ, ಗಂಡನ ಉರುವಣಿಗೆ ಕಂಡೇ ಈಗ ಈಕೆಯನ್ನು ದೂರವಿಡಲಾರಂಭಿಸಿದೆ. ಇದು ಒಂದರ್ಥದಲ್ಲಿ ಚುನಾವಣೆ ಬರುವುದಕ್ಕಿಂತ ಮುನ್ನವೇ ಸೀಮಾರ ಸೋಲು ಎಷ್ಟು ನಿಶ್ಚಿತವೋ, ಕಾಂಗ್ರೆಸ್ಸಿನ ವಿನಯ ಕುಲಕರ್ಣಿಯ ಗೆಲುವು ಅಷ್ಟೇ ನಿಶ್ಚಿತ ಎಂಬುದನ್ನು ಕ್ಷೇತ್ರದ ಜನರೇ ಹೇಳುತ್ತಿರುವಂತಿದೆ.

• ಹುರಳಿಕುಪ್ಪಿ ವಿನಯ

...ಬಿಂದಾಸ್ ಭೂ ಲೂಟಿ

ಶಾಸಕಿ ಸೀಮಾ ಮಸೂತಿ ಭೂಲೂಟಿಯಲ್ಲೂ ಇತರೆ ಭ್ರಷ್ಟ ಚೆಡ್ಡಿಗಳಿಗಿಂತ ...ಂದೆ ಬಿದ್ದಿಲ್ಲ, ತನ್ನ ತಮ್ಮ ನಾಗಪ್ಪನ ಹೆಸರಲ್ಲಿ ಒಂದು ಎಕರೆ ಜಮೀನನ್ನು ಡಿ...ನೋಟಿಫಿಕೇಶನ್ ಮಾಡಿಸಿಕೊಂಡ ಸೀಮಾ ಈಗ ಆ ಜಾಗೆಯಲ್ಲಿ ಐಷಾರಾಮಿ ...ಹೋಟೆಲ್ ನಿರ್ಮಿಸುತ್ತಿದ್ದಾರೆ.

... ಧಾರವಾಡ ಹೊರವಲಯದಲ್ಲಿರುವ ಕೈಗಾರಿಕಾ ಪ್ರದೇಶವಾದ ಗೋಥ ಸೆಂಟರ್‌ನಲ್ಲಿ ...ಸರ್ಗಿಕ ಸಮತೋಲನ ಕಾಯ್ದುಕೊಳ್ಳಲು ಕೇಂದ್ರ ಸರ್ಕಾರದ ನಿರ್ದೇಶನದಂತೆ ...995 ರಿಂದ ರಾಜ್ಯ ಸರ್ಕಾರ ಅಲ್ಲಿ ಎರಡು ಸಾವಿರ ಎಕರೆಗಳನ್ನು ಮೀಸಲಿಟ್ಟಿತ್ತು ...ನೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ...ಸುಮಾರು 100 ಮೀ ಅಗಲದ ಪ್ರದೇಶವನ್ನು ಹಸಿರು ಪಟ್ಟಿ ಎಂದೂ ...ಘೋಷಿಸಲಾಗಿತ್ತು, ಆದರೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಈ ...ಪಟ್ಟಿ ದಿನದಿನಕ್ಕೆ ಕರಗುತ್ತಿದೆ.

ಶಾಸಕಿ ಸೀಮಾ ಮಸೂತಿ ತನ್ನ ತಮ್ಮ ನಾಗಪ್ಪನ ಪುನೀತ್ ಎಂಟರಪ್ರೈಸಸ್‌ಗೆ ಪ್ಲಾಟ್ ನಂ 176ರಲ್ಲಿ ಒಂದು ಎಕರೆ ಸರ್ಕಾರಿ ಭೂಮಿಯನ್ನು ಕಡಿಮೆ ಹಣದಲ್ಲಿ ಖರೀದಿಸಲು 2008ರಲ್ಲೇ ಮುಂದಾದಳು. ಇವಳ ಅರ್ಜಿಯನ್ನು ಕೈಗಾರಿಕಾ ಮಂತ್ರಿ ಮುರುಗೇಶ ನಿರಾಣಿ ರೆಕಮೆಂಡ್ ಮಾಡಿದ್ದ ಜೊತೆಗೆ ಸಂಸದ ಪ್ರಹ್ಲಾದ ಜೋಷಿ ಕೆಎಸ್‌ಎಸ್‌ಐಡಿಸಿ ಅಧ್ಯಕ್ಷ ಮಾಜಿ ಮಂತ್ರಿ ಬ್ಯಾಳಿಹಾಳ ಪ್ರಿಯ ಸಿ.ಸಿ. ಪಾಟೀಲರ ನೇತೃತ್ವದ ಸಮಿತಿಗೆ ಸೀಮಾಳ ಅರ್ಜಿಯನ್ನು ರೆಫರ್ ಮಾಡಿದ್ದರು.

ತನ್ನ ಸಹೋದರನಿಗೆ ಭೂಮಿಯನ್ನು ನೀಡುವಂತೆ ಸೀಮಾ ಮಸೂತಿ 31-12-2008 ರಂದು ಪತ್ರ ಬರೆದಿದ್ದರೆ 02-01-2009 ರಂದು ಒಂದು ಎಕರೆ ಭೂಮಿಯನ್ನು ಮಂಜೂರ (ನಂ. ಐಎಡಿಬಿ/ಅಲಾಟ್/ಸಿಕ್ರಿ/12314/08-09) ಮಾಡಲಾಗಿತ್ತು, ಕಡತದಲ್ಲಿ ಕೂಡಾ ಸೀಮಾ ಮಸೂತಿ ಶಿಫಾರಸ್ಸಿನ ಮೇರೆಗೆ ಎಂದು ನಮೂದಿಸಲಾಗಿದೆ. ಒಟ್ಟಿನಲ್ಲಿ ಸರ್ಕಾರಿ ದುಡ್ಡಿನಲ್ಲಿ ಸೀಮಾ ಮಸೂತಿ ಜಾತ್ರೆ ನಡೆಸುತ್ತಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ

ನನ್ನ ಕನಸಿನ ಕಸಾಪ



ಅಭ್ಯರ್ಥಿಗಳ ಅನಿಸಿಕೆ

'ಲಂಕೇಶ್' ನ ಈ ಪ್ರಯತ್ನಕ್ಕೆ ಕಸಾಪ ಹಾಗೂ ಸಾಹಿತ್ಯ ವಲಯದಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ನಾವು ಕೇಳಿದ್ದ ಪ್ರಶ್ನೆಗಳಿಗೆ ಅಭ್ಯರ್ಥಿಗಳಾದ ಜರಗನಹಳ್ಳಿ ಶಿವಶಂಕರ್ ಹಾಗೂ ಶೇಖರಗೌಡ ಮಾಲಿ ಪಾಟೀಲ ಈ ಬಾರಿ ಉತ್ತರಿಸಿದ್ದಾರೆ. ಮುಂದಿನ ಸಂಚಿಕೆಯಲ್ಲಿ ಚಂಪಾ ಹಾಗೂ ಪುಂಡಲೀಕ ಹಾಲಂಬಿಯವರ ಅನಿಸಿಕೆ ಪ್ರಕಟವಾಗಲಿದೆ.

ನಮ್ಮ ಪ್ರಶ್ನೆಗಳು


1. ಕಸಾಪ ಬದಲಾಗಬೇಕು ಅನಿಸುತ್ತಿದೆಯೇ? ಯಾವ ರೀತಿ?
2. ನಿಮ್ಮ ಪ್ರಕಾರ ಕನ್ನಡ ಎದುರಿಸುತ್ತಿರುವ ಮತ್ತು ಕನ್ನಡ ಸಾಹಿತ್ಯ ಎದುರಿಸುತ್ತಿರುವ ಸಮಸ್ಯೆಗಳೇನು?
3. ಕಸಾಪದೊಳಗೆ ಜಾತಿವಾದ ಬೆಳೆಯುತ್ತಿರುವುದು ಕೆಟ್ಟ ಪ್ರವೃತ್ತಿ ಅಲ್ಲವೆ? ಅದನ್ನು ಹೇಗೆ ನಿವಾರಿಸುತ್ತೀರಿ.
4. ಮಠಾಧೀಶರು, ರಾಜಕಾರಣಿಗಳನ್ನು ಅನಗತ್ಯವಾಗಿ ಸಮ್ಮೇಳನಗಳಲ್ಲಿ ಮೆರೆಸುವ ಪ್ರವೃತ್ತಿಯನ್ನು ನೀವು ನಿಲ್ಲಿಸುತ್ತೀರಾ
5. ಕನ್ನಡದ ಓದು ಪ್ರಸ್ತುತವಾಗಲು, ವಿಸ್ತಾರಗೊಳ್ಳಲು ಉಳಿದುಕೊಳ್ಳಲು ನಿಮ್ಮ ಕಾರ್ಯಕ್ರಮಗಳೇನು?
6. ಕೋಮುವಾದ, ಜಾತಿವಾದ, ಶಿಕ್ಷಣ ಕೇಸರೀಕರಣವನ್ನು ನೀವು ವಿರೋಧಿಸುತ್ತೀರಾ?

ಜರಗನಹಳ್ಳಿ ಶಿವಶಂಕರ್

1. ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ 'ಕನ್ನಡ ಸಾಹಿತ್ಯ ಪರಿಷತ್ತು' ಎಂಬ ಅಭಿಪ್ರಾಯವಿದೆ. ಈ ಅಭಿಪ್ರಾಯದ ಹಿಂದೆ ಎಲ್ಲಾ ವರ್ಗಗಳ ಸಾಹಿತ್ಯ ಅಭಿಮಾನಿಗಳ ಪ್ರಾತಿನಿಧ್ಯ ಪರಿಷತ್ತಿಗಿದೆ.

ಹಾಗಾಗಿ ಪರಿಷತ್ತಿನ ಮುಂದಾಳತ್ವವನ್ನು ವಹಿಸಿಕೊಳ್ಳುವವರು ತಮ್ಮ ವೈಯಕ್ತಿಕವಾದ ಧೋರಣೆಗಳನ್ನು ಹೇರುವ ಪ್ರಯತ್ನ ಸಮಂಜಸವಾಗಲಾರದು. ಕನ್ನಡ ಸಾಹಿತ್ಯ ಪರಿಷತ್ತಿಗಿರುವ ಪಾರಂಪರಿಕವಾದ ಆಶಯಗಳಿಗೆ ಧಕ್ಕೆ ಬಾರದಂತೆ ಎಚ್ಚರ ವಹಿಸಬೇಕಾಗುತ್ತದೆ. ಸಾಂಘಿಕವಾದ ಅಭಿಪ್ರಾಯಗಳಿಗೆ ಮನ್ನಣೆ ನೀಡಬೇಕಾಗುತ್ತದೆ.

ಕನ್ನಡ ಪರ ಕಾರ್ಯ ನಿರ್ವಹಿಸುತ್ತಿರುವ ಅನೇಕ ಸಂಘ, ಸಂಸ್ಥೆಗಳು ಇಲಾಖೆಗಳಿವೆ. ಎಲ್ಲರು ಒಟ್ಟಿಗೆ ಸೌಹಾರ್ದ ಸಂಬಂಧವನ್ನು ಉಳಿಸಿಕೊಂಡು ಒಂದಾಗಿ ಕನ್ನಡ ಪರ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ. ಆಧುನಿಕ ಭಾಷಾ ಬೆಳವಣಿಗೆಯಊ ಸಮಾನಾಂತರವಾಗಿ ಸಾಗಬೇಕಿದೆ.



2. ಕನ್ನಡ ಎಂದರೆ ಸಮಗ್ರ ಕರ್ನಾಟಕ

ಅಲ್ಲಿ ನುಡಿ-ಗಡಿ, ನೆಲ-ಜಲ ಕುರಿತಾದ ಜಟಿಲವಾದ ಪ್ರಶ್ನೆಗಳಿವೆ. ಎಚ್ಚರ ವಹಿಸಬೇಕಾದ ಮಾರ್ಗಗಳನ್ನು ಕಾಣಬೇಕಿದೆ. ಕನ್ನಡ ಸಂಸತಿಯ ಮೇಲೂ ದುಷ್ಪರಿಣಾಮ ಬೀರುತ್ತಿದೆ. ನಮ್ಮ ಕನ್ನಡ ಸಂಸತಿಯನ್ನು ಸಂರಕ್ಷಿಸಿಕೊಳ್ಳಬೇಕಾದ ತುರ್ತಿದೆ. ಕರ್ನಾಟಕದಲ್ಲೇ ವಲಸಿಗರ ಆಗಮನ ಗಣನೀಯವಾಗಿ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ವಲಸಿಗರನ್ನು ಕನ್ನಡಿಗರನ್ನಾಗಿ ಮಾಡುವ ಅಗತ್ಯವಿದೆ. ಕನ್ನಡದ ವಿಶಾಲ ಮನೋಭಾವದ ಕಂಪನ್ನು ತಿಳಿಸಬೇಕು. ಕನ್ನಡ ಭಾಷೆಯನ್ನು ಬಳಸುವ ರೀತಿಯನ್ನು ಕಲಿಸಬೇಕು. ಆಗ ಮಾತ್ರ ವಲಸಿಗರು ಕನ್ನಡಿಗರಾಗುವ ಸಾಧ್ಯತೆ ಇದೆ. ಭಾಷೆಯ ವಲಸೆಯೂ ಕನ್ನಡ ಭಾಷೆಯ ಮೇಲೆ ದಾಳಿ ನಡೆಯುತ್ತಿದೆ. ಜಾಗತಿಕ ಮಟ್ಟದ ಭಾಷಾ ಬೆಳವಣಿಗೆಗಳನ್ನು ಕನ್ನಡವನ್ನಾಗಿಸುವ ಕಾರ್ಯಯೋಜನೆ ಸಿದ್ಧಪಡಿಸಬೇಕಿದೆ.

3. ಪರಿಷತ್ತಿನ ಒಟ್ಟಿಗೆ ಒಂದು ಜಾತಿಯವರು ಹೆಚ್ಚು ಕಾಣಿಸಿಕೊಳ್ಳುತ್ತಿರಬಹುದು, ಅದು ಜಾತಿವಾದವೆಂದು ನಿರ್ಧರಿಸಲು ಸಾಧ್ಯವಾಗದು.

ಜಾತ್ಯತೀತವಾದ ವಿಶಾಲ ಮನೋಭಾವವನ್ನು ಬಿತ್ತುವುದೇ ಸಾಹಿತ್ಯದ ಮೂಲ ಉದ್ದೇಶ. ಪ್ರಾಮಾಣಿಕತೆ, ಸಚ್ಚಾರಿತ್ರ?ಕ್ಕೆ ಎಂದೂ ಸೋಲಾಗದು ಎಂಬುದು ನನ್ನ ದೃಢವಾದ ನಂಬಿಕೆ. 'ಜಾತಿ'ಯನ್ನು ಪ್ರತಿಪಾದಿಸುವ ಯಾವುದೇ ವ್ಯಕ್ತಿ ಸಮಾಜಕ್ಕೆ ದ್ರೋಹ ಬಗೆಯುವ ವ್ಯಕ್ತಿಯಾಗುತ್ತಾನೆ ಎಂಬುದೇ ನನ್ನ ನಂಬಿಕೆ. ನಾವು ಜಾತ್ಯತೀತವಾಗಿದ್ದರೆ, ಇತರರೂ ಅದೇ ನಂಬಿಕೆಯಲ್ಲಿ ಸಾಗುತ್ತಾರೆ.

4. ಮಠಾಧೀಶರು, ರಾಜಕಾರಣಿಗಳಲ್ಲೂ ಉತ್ತಮ ಸಾಹಿತ್ಯ ಅಭಿರುಚಿ ಇರುವವರು ಇದ್ದಾರೆ. ಸಮ್ಮೇಳನಗಳಿಗೆ ಒಂದು ಶಿಷ್ಟಾಚಾರದ ಪರಂಪರೆ ಬೆಳೆದು ಬಂದಿದೆ. ಯೋಗ್ಯವಾದವರನ್ನು ಆಹ್ವಾನಿಸಿದಾಗ ಸಮ್ಮೇಳನದ ಮಹತ್ವ ಹೆಚ್ಚಾಗುತ್ತದೆ.

ಸಾಹಿತ್ಯ ವೇದಿಕೆಯಲ್ಲಿ ಸಾಹಿತ್ಯವೇ ಹೆಚ್ಚು ವಿಜೃಂಭಿಸಬೇಕು. ಅಲ್ಲಿ ವ್ಯಕ್ತಿ ಮತ್ತು ಅಧಿಕಾರ ಅಂತಸ್ತು ಪ್ರಧಾನವಾಗಬಾರದು.

ಸಮ್ಮೇಳನಗಳಲ್ಲಿ ಸಹೃದಯರನ್ನು ಒಳಗೊಂಡು ಎಲ್ಲರಿಗೂ ಸಮಾನ ಗೌರವ ನೀಡಬೇಕಾದ್ದು ಪರಿಷತ್ತಿನ ಕರ್ತವ್ಯ.

5. 'ಓದು' ಪ್ರಯೋಜನವಾಗಬೇಕು. ಅದು ಬದುಕಿನಲ್ಲಿ ಅಳವಡಿಸಲು ಉಪಯುಕ್ತವಾಗಿರಬೇಕು. ಮನರಂಜನೆ ಓದು ಒಂದು ನಿಯಮಿತ ಕಾಲಕ್ಕೆ ಮಾತ್ರ ಅನ್ವಯಿಸುತ್ತದೆ.

ಸಾರ್ವಕಾಲಿಕವಾದ ಸತ್ಯಗಳನ್ನು ಪ್ರತಿಪಾದಿಸುವ ಸಾಹಿತ್ಯ ಎಂದೂ ಜನಮನ್ನಣೆಗೆ ಗುರಿಯಾಗಿರುತ್ತದೆ. ಅಂತಹ ಸಾಹಿತ್ಯವನ್ನು ಪುನರ್ಮನನ ಮಾಡುವ ಗೋಷ್ಠಿ ಸಮಾವೇಶಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಬೇಕು.


ಜನಪದರ ಸಾಹಿತ್ಯವನ್ನು ನಗರಗಳಿಗೆ, ನಗರಗಳ ವೈಜ್ಞಾನಿಕ ಆವಿಷ್ಕಾರಗಳನ್ನು ವಿನಿಮಯಿಸುವ ಕಾರ್ಯ ನಡೆಯಬೇಕಿದೆ. ಗ್ರಾಮೀಣ ಪ್ರದೇಶಗಳಿಗೆ ಸಾಹಿತ್ಯ ಸಂಪದ ಹೆಚ್ಚಿನ ಪ್ರಮಾಣದಲ್ಲಿ ಮುಟ್ಟಬೇಕಿದೆ. ಸಹೃದಯರನ್ನು ಸೃಷ್ಟಿಸುವ ಕಾರ್ಯ ಇದಾಗಿದೆ.

6) 'ಶಿಕ್ಷಣ' ಪರಿಶುದ್ಧವಾಗಿರಬೇಕು. ನಮ್ಮದು ವಿಶಿಷ್ಟವಾದ ದೇಶ. ಇಲ್ಲಿ ಎಲ್ಲರಿಗೂ ಸಮಾನ ರೀತಿಯ ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯ. ಅಲ್ಲಿ ಯಾವುದೇ ಕಾರಣಕ್ಕೂ ಜಾತಿ ಧರ್ಮಗಳ ಸೋಂಕು ಇರಬಾರದು. ಮಕ್ಕಳಲ್ಲಿ ದ್ವೇಷ ಮೂಡಿಸುವ ಯಾವುದೇ ಸಾಹಿತ್ಯವನ್ನು ವಿರೋಧಿಸಲೇಬೇಕು. ವಿಶ್ವ ಮಾನವ ತತ್ವವನ್ನು ಹೆಚ್ಚು ಪ್ರಚಾರಗೊಳಿಸಲೇಬೇಕು.

ಶೇಖರಗೌಡ ಮಾಲಿ ಪಾಟೀಲ

1. ಕನ್ನಡ ಸಾಹಿತ್ಯ ಪರಿಷತ್ತು ಬದಲಾಗಬೇಕು ಅನಿಸುತ್ತದೆಯಾ ಎಂಬ ಪ್ರಶ್ನೆಗೆ ನನ್ನ ಅನಿಸಿಕೆ ಹೌದು. ಯಾವ ರೀ ಬದಲಾಗಬೇಕೆಂದರೆ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ಕನ್ನಡ ನಾಡುನುಡಿ ಸಂರಕ್ಷಣೆಯ ಜವಾಬ್ ಈ ಪರಿಷತ್ತಿನ ಮೇಲೆ ಇದೆ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿಗೆ ಕೇಂದ್ರೀಕೃತವಾಗದೇ ಇಡೀ ನಾಡಿನ ಅವಿಭಾ ಅಂಗವಾಗಿ ಅದು ಕನ್ನಡ ಬದುಕಿನ ಸಾಂಸತಿಕ ಕೇಂದ್ರವಾಗಿ ಬಹುತ್ವದ ನೆಲೆಗಳನ್ನು ಪ್ರಧಾನ ಧಾರೆಗೆ ತರುವ ಕ ಆಗಬೇಕು. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರೆಂದರೆ ಸಮಾಜದಲ್ಲಿ ಅವರಿಗೆ ಸಿಗುವ ಗೌರವ ಹೆಚ್ಚಿನದ್ದಾಗಿರಬೇಕು. ಈ ಕನಸನ್ನು ಹೊತ್ತು ನಾನು ಕನ್ನಡ ಸಾಹಿತ್ಯ ಪರಿಷತ್ತನ್ನು ಬದಲಾಯಿಸಬೇಕೆಂಬ ಆಶಯವನ್ನು ಹೊಂದಿದ್ದೇನೆ.

2. ಕನ್ನಡ ಮತ್ತು ಸಾಹಿತ್ಯ ಪರಿಷತ್ತು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯ. ಸಾಹಿತ್ಯ ಮತ ಸಂಸ್ಕೃತಿಗಳಿಗೆ ಮತ್ತು ಅವುಗಳನ್ನು ಪ್ರತಿನಿಧಿಸುವಂತಹ ಸಮಸ್ಯೆಗಳಿಗೆ ನಾವೆಲ್ಲಾ ಕನ್ನಡಿಗರು ಒಂದಾಗಿ ಸಂಸ್ಥೆಯ ಏಳಿಗೆಗೆ ಪ್ರಯತ್ನಿಸಬೇಕು. ಕರ್ನಾಟಕದಂತಹ ರಾಜ್ಯದಲ್ಲಿ ಕನ್ನಡ ಬೇರೆ ಬೇರೆ ರಾಜ್ಯಗಳ, ಬೇರೆ ಬೇರೆ ಭಾಷೆಗಳಿಂದ ಗಡಿ ಪ್ರದೇಶಗಳಲ್ಲಿ ತೊಂದರೆ ಅನುಭವಿಸುತ್ತಿದ್ದು ಇವುಗಳಿಗೆ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಸಮಿತಿ ರಚಿಸಿ ಆ ಸಮಿತಿಯ ನಿರ್ಣಯದಂತೆ ಆ ಸಮಸ್ಯೆಗಳಿಗೆ ಸರ್ಕಾರ ಪರಿಷತ್ತಿನ ಎಲ್ಲಾ ಕಾರ್ಯಕ್ರಮಗಳಿಗೂ ಸ್ಪಂದಿಸುವಂತೆ ತಿಳಿಸಬೇಕು. ಭಾಷೆಗೆ ಸಂಬಂಧಿಸಿದಂತೆ ಸರ್ಕಾರವು ಕೂಡ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಹಾಗೂ ಕನ್ನಡ ಮಾಧ್ಯಮದಲ್ಲಿ ಓದಿರುವ ವಿದ್ಯಾರ್ಥಿಗಳಿಗೆ ಉದ್ಯೋಗದಲ್ಲಿ ಆದ್ಯತೆ ನೀಡುವಂತಾಗಬೇಕು. ಈ ರೀತಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಕನ್ನಡನಾಡಿನಲ್ಲಿಯ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸುವಂತಾಗಬೇಕು ಎಂಬುದೇ ನನ್ನ ಆಶಯ.



3. ಜಾತಿವಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಮಾತ್ರ ಸೀಮಿತವಾಗಿಲ್ಲ, ಇದು ಕೆಟ್ಟ ಸಂಪ್ರದಾಯ. ಜಾತಿಯ ವ್ಯವಸ್ಥೆಯ ಮೇಲೆ ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟುವ ಪ್ರಯತ್ನ ಮೂರ್ಖತನದಿಂ ಕೂಡಿದ್ದು ಕರ್ನಾಟಕದ ಎಲ್ಲಾ ವಲಯಗಳಲ್ಲೂ ಈ ವ್ಯವಸ್ಥೆ ವ್ಯಾಪಿಸಿದೆ. ಇದರಿಂದ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಬಂದಂತಾಗುತ್ತದೆ. ಸಂವಿಧಾನಾತ್ಮಕವಾಗಿ ಆಡಳಿತ ನಡೆಸುವ ಯಾವುದೇ ಸರ್ಕಾರ ಇಂತಹ ಅನಿಷ್ಟ ಪದ್ಧತಿಯ ನಿವಾರಣೆಗೆ ಶ್ರಮಿಸಬೇಕು. ಆಗ ಮಾತ್ರ ನಮ್ಮ ನಾಡು ಜಾತಿರೋಗದಿಂದ ಎಲ್ಲಾ ಕ್ಷೇತ್ರಗಳಲ್ಲೂ ಮುಕ್ತವಾಗಿ ಪ್ರಜಾಸತ್ತಾತ್ಮಕವಾಗಿ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು.

4. ಕನ್ನಡ ಸಾಹಿತ್ಯ ಪರಿಷತ್ತು ಪ್ರಧಾನವಾಗಿ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ವಿಶೇಷವಾಗಿ ಸಮ್ಮೇಳನಗಳಲ್ಲಿ ಮಠಾಧೀಶರು ಮತ್ತು ರಾಜಕಾರಣಿಗಳನ್ನು ಸ್ವ ಮನಸ್ಸಿನಿಂದ ಪಾಲ್ಗೊಳ್ಳು ಹಾಗೆ ಅವರ ಮನಸ್ಸನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ನಾವೆಲ್ಲಾ ಕನ್ನಡಿಗರು ಪ್ರಯತ್ನಿಸಬೇಕು. ಮಹಾರಾಷ್ಟ್ರ ಸಾಹಿತ್ ಪರಿಷತ್ತಿನಂತೆ ಎಲ್ಲರನ್ನೂ ಒಂದೇ ತರಹ ಕಾಣುವಂತಾಗಬೇಕು. ಬಹಳಷ್ಟು ರಾಜಕಾರಣಿಗಳು ಮಠಾಧೀಶರುಗಳು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಪಡೆದುಕೊಂಡು ಜನಸಾಮಾನ್ಯರಂತೆ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತಾಗಬೇಕು. ಅವರೂ ಕೂಡ ಕನ್ನಡ ಸಾಹಿತ್ಯ ಪರಿಷತ್ತಿನ ಅವಿಭಾಜ್ಯ ಅಂಗಗಳಾಗಬೇಕೇ ವಿನಃ ಅವರುಗಳಿಗ ವಿಶೇಷತೆ ಕಲ್ಪಿಸುವ ಅಗತ್ಯವಿಲ್ಲ. ಈ ದಿಸೆಯಲ್ಲಿ ಮುಂದಿನ ದಿನಗಳಲ್ಲಿ ಆ ಪ್ರಯತ್ನ ಮಾಡಲಾಗುವುದು.

5. ಕನ್ನಡದ ಓದು ಪ್ರಸ್ತುತವಾಗಲು ಮತ್ತು ವಿಸ್ತಾರಗೊಳ್ಳಲು ಉಳಿದುಕೊಳ್ಳಲು ನಾನು ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಕನ್ನಡದ ಓದು ನಮ್ಮ ಜೀವನಾಡಿಯಾಗುವ ಹಾಗೆ ಪ್ರಯತ್ನಿಸುವೆ. ಕನ್ನಡ ಸಾಹಿತ್ಯ ಪರಿಷತ್ತು ಜನಮುಖಿಯಾಗಬೇಕು. ಕಲುಷಿತಗೊಳ್ಳುತ್ತಿರುವ ಈ ವಾತಾವರಣದಲ್ಲಿ ಓದುವ ಹವ್ಯಾಸವನ್ನು ಬೆಳೆಸುವಂತಹ ಕಾರ್ಯಕ್ರಮಗಳನ್ನು ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ರೂಪಿಸುತ್ತೇನೆ. ಕೇವಲ ಅಂಕ ಗಳಿಕೆಯ ಪರೀಕ್ಷಾ ವಿಧಾನಕ್ಕಿಂತ ಭಾವನಾತ್ಮಕ ವಿಕಾಸದ ಜ್ಞಾನಗಳ ಕಡೆಗೆ ಕನ್ನಡಿಗರನ್ನು ಕೊಂಡೊಯ್ಯಲು ಸಹಕಾರಿಯಾಗುವ ಕಾರ್ಯಕ್ರಮಗಳನ್ನು ರೂಪಿಸುತ್ತೇನೆ. ಸಾಹಿತ್ಯ ಪರಿಷತ್ತಿನ ಹಿತದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಸಲಹಾ ಸಮಿತಿ ರಚಿಸಿ ತನ್ಮೂಲಕ ಕನ್ನಡ ಭಾಷೆಯ ಏಳಿಗೆಗಾಗಿ ಮತ್ತು ಸಾಹಿತ್ಯದಲ್ಲಿ ತೊಡಗಿಕೊಂಡಿರುವ ಸಾಹಿತಿಗಳಿಗೆ ಕನ್ನಡ ಸಾಹಿತ್ ಪರಿಷತ್ತಿನ ಮೇಲೆ ಉತ್ತಮವಾದ ಭರವಸೆ ಮೂಡುವ ಹಾಗೆ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸುತ್ತೇನೆ.

6. ನಮ್ಮದು ಬಹುತ್ವದ ಸಮಾಜ. ಅಕ್ಷರಕ್ಕೆ ತೆರೆದುಕೊಂಡ ಸಮುದಾಯಗಳಿಗಿಂತ ಅಕ್ಷರಕ್ಕೆ ಇತ್ತೀಚೆಗೆ ತೆರೆದುಕೊಳ್ಳುತ್ತಿರುವ ಸಮುದಾಯಗಳೇ ಅಪಾರ ಸಂಖ್ಯೆಯಲ್ಲಿವೆ. ಇಂತಹ ಸಂದರ್ಭದಲ್ಲಿ ನಮ್ಮ ಸಂವಿಧಾನ ಕಟ್ಟಕಡೆಯ ಮನುಷ್ಯನನ್ನು ಗಮನದಲ್ಲಿಟ್ಟುಕೊಂಡಂತೆ ರೂಪಿತವಾಗಿರುವ ಸಂವಿಧಾನ. ಸಂವಿಧಾನದತ್ತವಾದ ಶಿಕ್ಷಣ ನೀತಿಗಳನ್ನು ರೂಪಿಸುವಂತ ನನ್ನ ಒತ್ತಾಯವಿದ್ದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜಾತಿ, ಧರ್ಮ ಇದಾವುದನ್ನೂ ಗಮನಕ್ಕೆ ತೆಗೆದುಕೊಳ್ಳದೇ ಇವನು ಕನ್ನಡಿಗ ಎಂಬುದನ್ನು ಮಾತ್ರ ಪರಿಗಣಿಸಬೇಕು. ಸರ್ಕಾರಗಳು ಕೂಡ ಯಾವುದೇ ನಿರ್ಣಯ ತೆಗೆದುಕೊಳ್ಳುವಾಗ ಯಾವುದೇ ಜನಾಂಗಕ್ಕೆ ಅಥವಾ ಅವರ ಭಾವನೆಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂಬ ವಾದ ನನ್ನದು.

...ವಿ ಬೇಂದ್ರೆ ನೆನಪಿನಲ್ಲಿ...!

...ಬೇಂದ್ರೆ ನಮ್ಮ ಯುಗದ ಬಹುದೊಡ್ಡ ಕವಿಯಾಗಿ ... ಎನ್ನುವುದು ಒಂದು ಹಳೆ ಕ್ಲೀಷೆಯ ಪುನರಾವರ್ತನೆ ... ಆದರೆ ಅವರು ಎಷ್ಟು ದೊಡ್ಡ ಮನುಷ್ಯರಾಗಿದ್ದರು, ... ದೊಡ್ಡ ವಿದ್ವಾಂಸರಾಗಿದ್ದರು. ಏನೇನೆಲ್ಲಾ ಓದಿ ...ಮುಕೊಂಡಿದ್ದರು ಎಂಥ ಸರ್ವಕುತೂಹಲಿ, ಮಾತುಗಾರ, ...ದ ಚತುರ, ಹಾಸ್ಯಪ್ರಿಯ, ...ಕೋಪಿಗಳಾಗಿದ್ದರು ಎನ್ನುವ ...ರ ಬಹುರೂಪಿ ವ್ಯಕ್ತಿತ್ವಕ್ಕೆ ಕನ್ನಡಿ ...ಯುವ, ಒಳನೋಟ ಒದಗಿಸುವ ...- ಡಾ. 'ಜೇವಿ' ಕುಲಕರ್ಣಿ ಅವರ ...ದ್ರೆ ಒಳನೋಟ' ಇತ್ತೀಚೆಗೆ ಪ್ರಕಟ ...ದೆ. [ಪ್ರಕಾಶಕರು: ಪುರೋಗಾಮಿ ಸಾಹಿತ್ಯ ...ಶನ, ಪತ್ರಕರ್ತರ ನಗರ, ನೃಪತುಂಗ ಬೆಟ್ಟ ...), ಹುಬ್ಬಳ್ಳಿ-580032. ಪುಟ 280. ಬೆಲೆ ...-/-] ಅವರೇ ಬರೆದ ಇನ್ನೊಂದು ಪುಸ್ತಕ ...ವಿ ಬೇಂದ್ರೆಯವರ ಮಹಾಕಾವ್ಯ 'ಔದುಂಬರ ...'ಯನ್ನಾಧರಿಸಿದ ಲೇಖನ ಮಾಲಿಕೆಯನ್ನೊಳ ...ಡ ಬೇಂದ್ರೆ ಸಮಗ್ರ ಕಾವ್ಯದರ್ಶ ...ದೊಂದಿಗೆ ಪ್ರಕಟವಾಗಿದೆ.


...'ಬೇಂದ್ರೆ ಒಳನೋಟ'ದಲ್ಲಿ ಕ್ರಮವಾಗಿ ...ರ್ಶನ', 'ದರ್ಶನ' ಮತ್ತು 'ನೆನಪು' ... ಮೂರು ಭಾಗಗಳಿವೆ. ಮೊದಲನೆಯ ...ದಲ್ಲಿ ದೀರ್ಘಕಾಲ ಬೇಂದ್ರೆಯವರ ...ಟದ ಅನುಭವ ಪಡೆದ ಹನ್ನೊಂದು ...ರ ಸಂದರ್ಶನಗಳಿವೆ. ಎರಡನೇಯ ...ದಲ್ಲಿ ಬೇಂದ್ರೆಯವರ ಕೆಲವು ಕವನಗಳ ... ಅವರೊಡನೆ ಚರ್ಚಿಸಿ, ಮಾಹಿತಿ ಪಡೆದು ...ಲ್ಲಿ ಕಾವ್ಯಾಭ್ಯಾಸಿಗಳಿಗೆ ಒಳನೋಟ ಒದಗಿಸ ...ದು ಎಂಬ ಆಶಯದಿಂದ 'ಜೇವಿ'ಯವರು ...ವ ಲೇಖನಗಳಿವೆ.

...ಮೂರನೇ ಭಾಗದ ಐದು ಲೇಖನಗಳು ಹೆಸರೇ ...ಚಿಸುವಂತೆ ಕೆಲವು ನೆನಪುಗಳನ್ನು ದಾಖಲಿಸುತ್ತವೆ.

...ಬೇಂದ್ರೆಯವರ ಅನ್ಯಾದೃಶ ವ್ಯಕ್ತಿತ್ವವನ್ನು ಅನಾವರಣ ...ಳಿಸುವ ಮೊದಲನೆಯ ಭಾಗ 'ಸಂದರ್ಶನ' ಈ ...ಣಕ್ಕಾಗಿಯೇ ತುಂಬಾ ಮಹತ್ವದ್ದು. ಈ ವಿಭಾಗದ ...ದ್ರವಸ್ತು ಒಬ್ಬ ಕವಿ. ಸಂದರ್ಶಕ ಒಬ್ಬನೇ. ...ರ್ಶಿತರು ಹಲವರು. ಪ್ರಶ್ನೆಗಳೆಲ್ಲ ಏಕವ್ಯಕ್ತಿ ಕೇಂದ್ರಿತ. ... ಒಂದು ಚೌಕಟ್ಟಿನಲ್ಲಿ ನಡೆಸಿದ ಸಂದರ್ಶನಗಳು ...ಲಿತ ರೂಪದಲ್ಲಿ ಬಂದ ಇನ್ನೊಂದು ಪ್ರಯತ್ನ. ... ತಿಳಿದಂತೆ ಪ್ರಾಯಶಃ ಕನ್ನಡದಲ್ಲಿ ಇದ್ದಂತಿಲ್ಲ. ... ಈ ವಿಭಾಗದ ವೈಶಿಷ್ಟ್ಯ. ಡಾ.ಜಿ.ಎಂ.ಹೆಗಡೆ ...ರು ಇಂಥದೊಂದು ಪುಸ್ತಕ ಪ್ರಕಟಿಸಿದ್ದಾರೆ. ... ಕೇಂದ್ರ ವ್ಯಕ್ತಿ (ಚೆನ್ನವೀರ ಕಣವಿ) ಒಬ್ಬರೇ. ಸಂದರ್ಶಕರು ... ಬೇರೆ. ಸಂದರ್ಭ ಬೇರೆ ಬೇರೆ. ಇಂಥ ಸಂದರ್ಶನ ...ಗಳೆಲ್ಲ ಹೆಗಡೆಯವರು ಸಂಪಾದಿಸಿ ಪುಸ್ತಕರೂಪದಲ್ಲಿ ...ದ್ದಾರೆ.

... ಈ ವಿಭಾಗದ ಸಂದರ್ಶಿತ ವ್ಯಕ್ತಿಗಳೆಲ್ಲ ಬೇಂದ್ರೆಯವರನ್ನು ... ಹತ್ತಿರದಿಂದ ಕಂಡ ಬೇಂದ್ರೆ ಎಂಬ ಸೌರವ್ಯೂಹದ ...ಸ್ಯರು. ಬೇಂದ್ರೆಯವರ ಭೂಮ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದ್ದ ...ರ ಅನುಭವಗಳಿಗೆ ಅಧಿಕೃತತೆ ಇದೆ. ಜ್ಯೋತಿಷ್ಯ ...ಗೋಳ, ಭೂಗೋಳ, ಸಮಾಜಶಾಸ್ತ್ರ ವಿಶೇಷತಃ ತತ್ವಜ್ಞಾನ ...ಲ್ಲವನ್ನು ಅಭ್ಯಸಿಸಿದ್ದ (ರುಕ್ಮಿಣಿ ಪರ್ವತಿ, ಪುಟ 78); ...ರತ ಹಾಬ್ಬಿಯ ಜೈನ-ಬೌದ್ಧ-ವೀರಶೈವ ಧರ್ಮಗಳ ...ಸ, ಕನ್ನಡ, ಮರಾಠಿ, ಸಂಸ್ಕೃತ ಸಾಹಿತ್ಯಗಳ ಆಳವಾದ ...ಂಗ (ಬ್ರಹ್ಮಾಂಡ, ಪುಟ 127) ಮಾಡಿದ್ದ ಜ್ಞಾನದಾಹಿ, ...ಕುತೂಹಲಿ ಬೇಂದ್ರೆಯವರ ಅಮೋಘ ಚಿತ್ರವೊಂದನ್ನು ...ರ್ಶನ ವಿಭಾಗದ ಸಾಕ್ಷಿ ಪುರುಷರು ಮೂಡಿಸುತ್ತಾ ...ಗುತ್ತಾರೆ. ಬೇಂದ್ರೆಯವರ ಲೋಕಜ್ಞಾನ, ವಿಷಯಜ್ಞಾನದ ...ರಲ್ಲೊಂದು ಪುಟ ಸಂದರ್ಶನದಿಂದ ಒಂದೊಂದನ್ನಾದರೂ ...ತ್ತಾ ಹೋದರೆ ಹಲವು ಪುಟಗಳಾದಾವು. ಕೊಡದೆ ...ದರೆ ಬೇಂದ್ರೆಯವರ ನೆನಪುಗೂ ಓದುಗರ ಕುತೂ...ಕೂ, ಅನ್ಯಾಯ ಬಗೆದಂತಾದೀತು ಎಂದು ಹೆಕ್ಕಿ ತೆಗೆದ ಕೆಲವನ್ನಷ್ಟೇ ಕೊಡುತ್ತಿದ್ದೇವೆ. ಮಧ್ಯರಾತ್ರಿಯ ವೇಳೆ 'ರಾತ್ರಿರಾಣಿ' ಹೂವಿನ ವಾಸನೆ ಮೂಗಿಗೆ ಬಡಿದಾಗ ಅದನ್ನು 'ರಾತ್ರಿರಾಣಿ' ಎಂದು ಯಾಕೆ ಕರೆಯುವರು ಎಂದು ಮಾತಿಗೆ ತೊಡಗುವ (ಎನ್ಕೆ, ಪುಟ 6), ಆಕಾಶದಲ್ಲಿ ಒಂದು ನಕ್ಷತ್ರ ಕಾಣಿಸಿದಾಗ ಆ ನಕ್ಷತ್ರ ಗುರುತಿಸಿ ಹೊಸ್ತಿಲಲ್ಲೇ ನಿಂತು ಅರ್ಧಗಂಟೆ ಆ ನಕ್ಷತ್ರದ ಬಗ್ಗೆ ಹೇಳುತ್ತಾ ನಿಲ್ಲುವ (ರುಕ್ಮಿಣಿ ಪರ್ವತಿ, ಪುಟ 79).

'ಕಲಾವಿದನಿಗೆ ಕ್ಷಣಕ್ಷಣಕ್ಕೂ ನೋಡುವಂಥ ಕಣ್ಣಬೇಕು. ಚಿತ್ರ ನಿತ್ಯನೂತನ ಇರ್ತದ. ಅದರಿಂದ ಹೊಸ isms ಬರ್‍ತಾವ' ಅಂತ ಹೇಳಿ ನಂತರ ಅರ್ಧಗಂಟೆ ಪೇಂಟಿಂಗ್ ಸ್ಕೂಲ್‌ಗಳ ಬಗ್ಗೆ ಮಾತನಾಡಿ, ಪಿಕಾಸೋನ ಬಗ್ಗೆ ಪುಸ್ತಕ ಬರೆಯಲು ಪ್ರೇರೇಪಿಸಿ ಅದಕ್ಕೆ ಮುನ್ನುಡಿಯನ್ನು ಬರೆದುಕೊಡುವ (ಸುರೇಶ್ ಕುಲಕರ್ಣಿ, ಪುಟ 134); ಗಣಿತಶಾಸ್ತ್ರದಲ್ಲಿ ಬರುವ 'ಫಿಬಿನಾಕ್ಸಿ ಸೀಕ್ವೆನ್ಸ್'ಗೂ ಬಯಾಲಜಿಯಲ್ಲಿ ಬರುವ 'ಫಿಲೋಟ್ಯಾಕ್ಸಿ' ಎಂಬ ಎಲೆಗಳ ವಿಕಾಸದ ತತ್ವಕ್ಕೆ ಸಂಬಂಧ ಕಲ್ಪಿಸಿದಾಗ



ವೈಜ್ಞಾನಿಕ ವಿಷಯದ ಬಗ್ಗೆ ಇವರಿಗಿರುವ ಜ್ಞಾನಕ್ಕೆ ವಿಜ್ಞಾನಿಗಳೂ ಅಚ್ಚರಿಪಡುವಂತೆ ವಿಷಯ ಮಂಡಿಸುವ (ಸುರೇಶ್ ಕುಲಕರ್ಣಿ, ಪುಟ 136); 'ನೀ ಇದ್ದಿ' ಅಂತ ದೇವರಿಗೆ ಹೇಳಿ ಅರ್ಪಣಾ ಮಾಡೋದೆ 'ಸಿದ್ದಿ' ಆಗಬೇಕು, 'ಸಾವು ಇತ್ರಿ, ಆದ್ರ ಸತ್ಯವಾನ ಸಾಯಲಿಲ್ಲರಿ' ಎಂದು ಸಾವಿತ್ರಿ ಶಬ್ದದಲ್ಲಿ ಸಾವು+ಇತ್ರಿ ಎಂಬ ಶ್ಲೇಷೆ ಹೊರತೆಗೆದು 'ಸತ್ಯವಾನಗೆ ಸಾವು+ಇತ್ರಿ, ಸಾವಿತ್ರಿ ಇಂದಾಗಿ ಸಾಯಲಿಲ್ಲರಿ' ಎಂದು ಶಬ್ದ ಒಡೆದು ಹೊಸ ವ್ಯಾಖ್ಯೆ ನೀಡುತ್ತಾರೆ ಬೇಂದ್ರೆ. (ಸುರೇಶ್ ಕುಲಕರ್ಣಿ, ಪುಟ 145-146);

ಎರಡು ವರ್ಷ ಮನೆಯ ಕಡೆ ಸುಳಿಯದೇ ಇದ್ದ ಒಬ್ಬ ಭಿಕ್ಷುಕ ಬಂದಾಗ ಸ್ವತಃ ತಾವೇ ಎದ್ದು ಗೇಟು ತೆರೆದು 'ಏನೋ ಎರಡು ವರ್ಷ ಆಯ್ತು ನಿನ್ನ ಮುಖ ನೋಡಿ ಇಲ್ಲವಲ್ಲ ಎಲ್ಲಿ ಹೋಗಿದ್ದಿ ಏನಾಗಿತ್ತೋ?' ಎಂದು ಭಿಕ್ಷುಕನೊಬ್ಬನ ಸುಖದುಃಖ ವಿಚಾರಿಸುವ; ಹಾವಾಡಿಗರು ಬಂದರೆ ಅವರನ್ನು ಕರೆದು 'ಯಾವ ಜಾತಿ ಹಾವು, ಎಲ್ಲಿ ಹಿಡಿದಿ, ಹ್ಯಾಂಗ ಹಿಡಿದಿ' ಎಂದು ಪ್ರಶ್ನೆಗಳ ಸುರಿಮಳೆ ಪ್ರಾರಂಭಿಸುತ್ತಿದ್ದ; ಒಂದು ಪಕ್ಷಿ ನೋಡಿದರೆ ಅದರ ಬಗ್ಗೆ ಹೇಳುತ್ತಾ ಕೂಡುವ (ಸುರೇಶ್ ಕುಲಕರ್ಣಿ, ಪುಟ 136-137) ಸರ್ವಕುತೂಹಲಿ, ಬಹುಶ್ರುತ ಬೇಂದ್ರೆ ಒಂದು ಕಡೆ, ಕಾವ್ಯ-ಹಾಸ್ಯದ ಜೋಡಾಟದಿಂದ ರಂಜಿಸುವ ಬೇಂದ್ರೆ ಮಗದೊಂದು ಕಡೆ. ಅವರು ತಮ್ಮ ಹಾಸ್ಯ-ವಿನೋದದ ಮೂಲಕ ಜಡ ವಾತಾವರಣದ ಶುದ್ಧೀಕರಣವನ್ನು ಮಾಡುತ್ತಿದ್ದ ಪರಿಯ ಒಂದು ಉದಾಹರಣೆ: 'ಬೇಂದ್ರೆಯವರ ಸಾಕ್ಷ್ಯಚಿತ್ರ ಗಿರೀಶ್ ಕಾರ್ನಾಡ್ ತೆಗೆದಾಗ ನಾನೂ ಅಲ್ಲಿ ಇದ್ದೆ. ಬೇಂದ್ರೆ ಹೇಳಿದರು 'ನೀವು ಚಿತ್ರ ತೆಗೆಯದಿದ್ರೆ ನಾನು ಮಂಗನನ್ನು ಕರೆಯುತ್ತೇನೆ.' ಕ್ಯಾಮರಾ ಸೆಟ್ ಆಯ್ತು, ಆಗ ಬೇಂದ್ರೆ ಮಂಗನನ್ನು ಕರೆದರು 'ಅರೆ ಮಾಕಡಾ ಇಥ ಎ' ಅಂದರು. ಅದು ಜಿಗಿದು ಮಾವಿನ ಗಿಡದಿಂದ ಹಲಸಿನ ಗಿಡ ಏರಿತು. ನಂತರ ಅವರ ಬಳಿ ಬಂದು ಇವರು ಕೊಟ್ಟ ಹಣ್ಣು ತಿಂದಿತು..... 'ಅತ್ತಾ ಜಾ' ಅಂದರು ಬೇಂದ್ರೆ. ಮಂಗ ಮತ್ತೆ ಹೋಗಿ ಗಿಡ ಏರಿ ಕುಳಿತಿತು. ಆಗ ಅಲ್ಲಿಯ ಅಸಿಸ್ಟೆಂಟ್ ಒಬ್ಬನು 'ಇನ್ನೊಮ್ಮೆ ಮಂಗನನ್ನು ಕರೆಯಿರಿ. ಇನ್ನೊಂದು ಶಾಟ್ ತೆಗೆದುಕೊಳ್ಳುತ್ತೇವೆ' ಅಂದನು. ಆಗ ಬೇಂದ್ರೆ ಉತ್ತರಿಸಿದರು 'ಅದೇನು ಬೇಂದ್ರೆ ಅಂತ ತಿಳಿದಿರಾ ನೀವು ಹೇಳಿದಂತೆ ಪೋಸ್ ಕೊಡಲಿಕ್ಕೆ' ಎಂದು ನಕ್ಕರು" (ಸುರೇಶ ಕುಲಕರ್ಣಿ, ಪುಟ 148)

ಈಗಿರುವಂತೆ 'ಜೇವಿ' ಅವರ ಸಂದರ್ಶನ ವಿಭಾಗ ತನಗೆ ತಾನೇ ಮಹತ್ವದ್ದಾಗಿದ್ದರೂ ಅನಿವಾರ್ಯ ಹರಕೆಯೊಂದು ಉಳಿದುಬಿಟ್ಟದೆ ಎನಿಸುತ್ತದೆ. ಬೇಂದ್ರೆಯಂಥ ಬಹುದೊಡ್ಡ ಕವಿಯ ಕುರಿತಿರುವ ಪುಸ್ತಕಗಳು ಆದಷ್ಟೂ ಸರ್ವಾಂತರ್ಗತ ಸ್ವರೂಪದ್ದಾಗಿರಬೇಕಾದದ್ದು ಅಪೇಕ್ಷಣೀಯ. 'ಜೇವಿ' ಅವರು ಸಂದರ್ಶಿಸಬಹುದಾಗಿದ್ದ, ಸಂದರ್ಶಿಸಬೇಕಾಗಿದ್ದ ಇನ್ನೂ ಕೆಲ ವ್ಯಕ್ತಿಗಳನ್ನು (ಅಂಥವರ ಯಾದಿ ಉದ್ದವಿದೆ. ಆದರೂ ಮುಖ್ಯವಾಗಿ ಸುಮತೀಂದ್ರ ನಾಡಿಗ, ಡಾ.ಜಿ. ಕೃಷ್ಣಪ್ಪ ಮತ್ತು ಈಗಿಲ್ಲದ ಕಿ.ರಂ. ನಾಗರಾಜ ಅವರನ್ನು) ಸಂದರ್ಶಿಸಿದ್ದರೆ ಪ್ರಾಯಶಃ ಈ ವಿಭಾಗ ಬೇಂದ್ರೆ ಕಾವ್ಯಾಭ್ಯಾಸಿಗಳ, ಅಭಿಮಾನಿಗಳ ದೃಷ್ಟಿಯಿಂದ ಮತ್ತಷ್ಟು ಶ್ರೀಮಂತವಾಗುತ್ತಿತ್ತು, 'ಈ ನಾಡಿನ ಕಾವ್ಯಪ್ರೇಮಿಗಳ ಪರಮ ಗುರುವಾಗಿದ್ದ ಕಿ.ರಂ. ನಾಗರಾಜರು ಬೇಂದ್ರೆ ಕಾವ್ಯ ಸುಲಭವಾಗಿ ಬಿಟ್ಟುಕೊಡದ ಅಪೂರ್ವ ಒಳನೋಟಗಳನ್ನು ಹೊಸ ಮಾತುಗಳಲ್ಲಿ ಅನಾವರಣಗೊಳಿಸುತ್ತಾ ಬಂದವರು. ನಾಲ್ಕು ವಾರಗಳ ಕಾಲ ಬೇಂದ್ರೆ ಕಾವ್ಯದ ಮೇಲೆ ಮಾತನಾಡಲಿದ್ದು ಅವರ ಮೊದಲನೇ ಭಾಷಣವೇ 'ಲಾಸ್ಟ್ ಲೆಕ್ಚರ್' ಆದದ್ದು ದುರ್ದೈವ. ಕಾವ್ಯಾಭ್ಯಾಸಿಗಳ ದೃಷ್ಟಿಯಿಂದ ದೊಡ್ಡ ನಷ್ಟ.

ಬೇಂದ್ರೆ ಕಾವ್ಯಪ್ರಿಯರು ಯಾವತ್ತು ಮರೆಯಬಾರದ ಆದರೆ ಯಾಕೋ ಬೇಂದ್ರೆ ಸೌರವ್ಯೂಹದಲ್ಲೇ ಪರಿಭ್ರಮಣ ಮಾಡುತ್ತಿದ್ದೂ 'ಖಗೋಲ ಶಾಸ್ತ್ರಜ್ಞ'ರ ದುರ್ಲಕ್ಷ್ಯಕ್ಕೊಳಗಾದ 'ಗ್ರಹ'ವೊಂದರ ಬಗ್ಗೆ ಪದ್ಮರಾಜ ದಂಡಾವತಿಯವರು 'ಪ್ರಜಾವಾಣಿ'ಯ ತಮ್ಮ ಅಂಕಣದಲ್ಲಿ (ಇಂಥ ಬೇಂದ್ರೆ ಹುಚ್ಚರು ಎಲ್ಲಾದರೂ ಇದ್ದಾರೆಯೇ? 30.1.11) ಸವಿಸ್ತಾರವಾಗಿ ಬರೆದ ಅಂಕಣಕ್ಕಾಗಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಆ 'ಹುಚ್ಚರ' ಹೆಸರು: ಡಾ. ಜಿ. ಕೃಷ್ಣಪ್ಪ. ಈ ಕೃಷ್ಣಪ್ಪನವರ ಭೂಪಟದಲ್ಲಿರುವ ಒಂದೇ ಊರು-ಧಾರವಾಡ. ಬಿಟ್ಟರೆ ಧಾರವಾಡ. ಇವರು ಬಲ್ಲ, ಓದಿದ, ಅಭ್ಯಸಿಸಿದ, ಅಧ್ಯಯನ ನಡೆಸಿದ, ಮೋಕ್ಷ ಕಂಡ ಕಾವ್ಯ-ಬೇಂದ್ರೆ ಕಾವ್ಯ. ಬಿಟ್ಟರೆ ಬೇಂದ್ರೆ ಕಾವ್ಯ. ಸಾರಿಗೆ ಇಲಾಖೆಯಂಥ ಅಸಾಹಿತ್ಯಕ ವಾತಾವರಣದಲ್ಲಿದ್ದೂ ಬಾಹ್ಯವಾಗಿ ಬಿಎ., ಎಂ.ಎ., ಮಾಡಿಕೊಂಡ ಕೃಷ್ಣಪ್ಪ ಅವರು 'ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ: ಒಂದು ಅಧ್ಯಯನ ಎಂಬ ವಿಷಯದಲ್ಲಿ ಪ್ರೊ. ಹರಿಶಂಕರ್ ಮಾರ್ಗ ದರ್ಶನದಲ್ಲಿ ಪಿಎಚ್.ಡಿ.ಗೆ ನೋಂದಾಯಿಸಿ ಕೊಂಡರು. ಇವರ 'ಹೂತದ ಹುಣಸಿ' ಪುಸ್ತಕಕ್ಕೆ ಮುನ್ನುಡಿ ಬರೆದ ಶಂಕರ ಮೊಕಾಶಿ ಪುಣೇಕರ್ 'ಈ ಪುಸ್ತಕ ಓದಿದ ನಂತರ ಬೇಂದ್ರೆ ಯವರನ್ನು ನಾನು ತಿಳಿದುಕೊಳ್ಳಬಲ್ಲೆ ಎಂಬ ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ' ಎಂದು ಪ್ರಾಂಜಲವಾಗಿ ಒಪ್ಪಿಕೊಂಡರು. 'ಇಂಥ ಪುಸ್ತಕಕ್ಕಾಗಿ ಐವತ್ತು ವರ್ಷಗಳಿಂದ ಕಾಯುತ್ತಿದ್ದೆ' ಎಂದು ನಮ್ರವಾಗಿ ನುಡಿದರು (ಅಂಕಣದಿಂದ). ಪುಣೇಕರ್‌ರ ಈ ಮುಕ್ತ ಪ್ರಶಂಸೆ ಕೃಷ್ಣಪ್ಪನವರ ಸಾಧನೆ-ಸಿದ್ಧಿಗೆ ಸಿಕ್ಕ ಬಹುದೊಡ್ಡ ಶಿಫಾರಸ್ಸು ಪತ್ರ.

ಕೇಂದ್ರ ವ್ಯಕ್ತಿಯ ವ್ಯಕ್ತಿತ್ವದ ಆಳ-ಅಗಲಗಳಿಗೆ ಸಂಬಂಧಿಸಿದಂತೆ ಒಬ್ಬ ನಿಕಟವರ್ತಿ ಲೇಖಕ ಕಂಡುಂಡ ಅನುಭವಗಳಿಗೂ ಅನೇಕರ ಅನುಭವಗಳಿಗೂ ಮಹದಂತರವಿದೆ. ಅನೇಕರ ಅನುಭವ ಅನೇಕ, ವೈವಿಧ್ಯಮಯ, ಮಾಹಿತಿ ಪ್ರಧಾನ. ಒಬ್ಬನ ಅನುಭವಗಳು ಅಷ್ಟರಮಟ್ಟಿಗೆ ಸೀಮಿತ. 'ಒಳನೋಟ'ದ ಸಂದರ್ಶನ ವಿಭಾಗ ಈ ಸಾಧ್ಯತೆಯ ಕಡೆಗೆ ಬೊಟ್ಟು ಮಾಡಿ ತೋರಿಸುತ್ತದೆ.

ಬೇಂದ್ರೆಯ ಮನೆಮಂದಿಯಂತಿದ್ದ ರುಕ್ಮಿಣಿ ಪರ್ವತಿ, ವಸಂತ ದಿವಾಣಜಿ ಹಾಗೂ ಸುರೇಶ ಕುಲಕರ್ಣಿಯವರ ಬಳಿ ಬೇಂದ್ರೆ-ಸಂಬಂಧಿತ **'undeclared assets'** ಬಹ್ಪೂರವಿದೆ ಎನ್ನುವುದರ ಸುಳಿವು ಈ ಸಂದರ್ಶನಗಳಲ್ಲಿ ಸಿಗುತ್ತದೆ. ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ ಪಡೆದ ಇವರ ವೈಯಕ್ತಿಕ ಅನುಭವಗಳು ಅಕ್ಷರರೂಪದಲ್ಲಿ ಬಟವಾಡೆ ಮಾಡುವ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಲಿ.

'ಜೇವಿ' ಅವರ ಈ ಹೊಸ ಪುಸ್ತಕ ಕನ್ನಡಿಗರು, ಕಾವ್ಯಾಸಕ್ತರು, ಬೇಂದ್ರೆ ಅಭಿಮಾನಿಗಳು ಅವಶ್ಯ ಓದಬೇಕಾದ ಗ್ರಂಥ. ಇಂಥ ಒಂದು ಪುಸ್ತಕ ಕೊಟ್ಟ 'ಜೇವಿ'ಯವರಿಗೆ ನನ್ನ ಹಾರ್ದಿಕ ಅಭಿನಂದನೆಗಳು.

• ಶ್ರೀನಿವಾಸ ಜಿ.ರಾವ್, ಮುಂಬೈ

▶7

ತಮಾಷಿ ಪ್ರಸಂಗವು!



ಎನ್ನುವುದು ಆಫ್ರಿಕಾ ಹಾಗೂ ಅಮೆರಿಕಾಗಳೆರಡರಲ್ಲೂ ಇರುವ ಒಂದು ನಗರದ ಹೆಸರು.

ಕೆಲವರ್ಷಗಳ ನಂತರ ಈ ಪ್ರಖ್ಯಾತ ಮಾರ್ಕ್ಸ್ ಬ್ರದರ್ಸ್ ತಮ್ಮದೊಂದು ಹೊಸ ಸಿನಿಮಾಗೆ 'ಎ ನೈಟ್ ಇನ್ ಕ್ಯಾಸಬ್ಲಾಂಕಾ' ಎಂದು ಹೆಸರಿಟ್ಟು ಕೆಲಸ ಶುರು ಮಾಡಿದರು. ವಾರ್ನರ್ ಬ್ರದರ್ಸ್ ಇದಕ್ಕೆ ಕ್ಯಾತೆ ತೆಗೆದರು. 'ಈಗಾಗಲೇ ತಮ್ಮದೊಂದು 'ಕ್ಯಾಸಬ್ಲಾಂಕಾ' ಸಿನಿಮಾ ಬಂದಿರುವ ಕಾರಣ ನೀವು ಅದೇ ಪದ ಬಳಸಿ ಬೇರೆ ಸಿನಿಮಾ ಮಾಡಕೂಡದು' ಎಂಬ ತಗಾದೆ ಅದು.

ಈ ಮಾರ್ಕ್ಸ್ ಬ್ರದರ್ಸ್ ಪೈಕಿ ಕೊಂಚ ಕಿಡಿಗೇಡಿ ಬುದ್ಧಿಯವನಾಗಿದ್ದ ಗ್ರೋಚೊ ಮಾರ್ಕ್ಸ್‌ಗೆ ಸಿಟ್ಟು ಬಂದು ವಾರ್ನರ್‌ಗಳಿಗೆ ಒಂದು ಪತ್ರ ಬರೆದ.

"ಪ್ರಿಯ ವಾರ್ನರ್ ಸೋದರರೇ,

ನೀವು ಸಿನಿಮಾ ಮಾಡುವವರೆಂದು ತಿಳಿದಿದ್ದೆ. ಆದರೆ ನೀವು ನಗರಗಳನ್ನೇ ವಶಪಡಿಸಿಕೊಳ್ಳುವ ಶೂರರೆಂದು ನನಗೆ ಗೊತ್ತಿರಲಿಲ್ಲ. ಕ್ಯಾಸಬ್ಲಾಂಕ್ ನಗರ ನಿಮ್ಮದೋ? ಅದೇ ರೀತಿ ವಾರ್ನರ್ ಬ್ರದರ್ಸ್‌ನಲ್ಲಿರುವ ಬ್ರದರ್ಸ್ ಪದ ಕೂಡ ನಿಮ್ಮ ಕಂಪನಿಯ ಆಸ್ತಿಯಾ ಹೇಗೆ?" ಎಂಬಿತ್ಯಾದಿ ಗೇಲಿ ಮಾಡಿದ್ದ.

ಇದೊಂದು ರೀತಿಯಲ್ಲಿ 'ಜಯ' ಎನ್ನುವ ಸಿನಿಮಾ ತೆಗೆದವನು 'ವಿಜಯ' ಎಂಬ ಇನ್ನೊಂದು ಸಿನಿಮಾ ಬಗ್ಗೆ ಆಕ್ಷೇಪಿಸುವಂತೆ ಎಂದುಕೊಳ್ಳಬಹುದು.


ಟೈಮ್ಸ್ ಗ್ರೂಪ್‌ನ ಧಣಿಗಳಿಗೆ ಈ ಜೋಕ್ ಅರ್ಥವಾದರೆ ಚೆನ್ನ.

ವಿಜಯ ಕರ್ನಾಟಕ ಈಗ ಮೊದಲಿನ ಕೇಸರಿ ಕೊಳೆ ತೊಳೆದುಕೊಂಡು ಚೆನ್ನಾಗಿ ಬರುತ್ತಿದೆ. ಅದು ವಿಜಯವಾಣಿಯೊಂದಿಗೆ ಕ್ವಾಲಿಟಿ ವಿಚಾರದಲ್ಲಿ ಪೈಪೋಟಿ ನಡೆಸಲಿ. ಪ್ರಜಾವಾಣಿ, ಕನ್ನಡಪ್ರಭ, ವಾರ್ತಾಭಾರತಿಗೂ ಈಗ ಸ್ಪರ್ಧೆ ಅನಿವಾರ್ಯವಾಗಲಿದೆ.

ಗಾಯತ್ರಿ ಮಂತ್ರದ ಹಂಗು

ಕಳೆದ ವಾರ ಯು.ಆರ್. ಅನಂತಮೂರ್ತಿಯವರ ಕೆಲ ಹೊಸ ಪುಸ್ತಕಗಳು ಪ್ರಕಟಗೊಂಡಿವೆ. ಇದರ ಬಿಡುಗಡೆ ಕಾರ್ಯಕ್ರಮದಲ್ಲಿ ಇದ್ದ ದೇವನೂರು ಮಹಾದೇವರು ಒಂದು ಘಟನೆ ಬಗ್ಗೆ ಹೇಳಿದರು.

ಕೆಲ ವರ್ಷಗಳ ಹಿಂದೊಮ್ಮೆ ಅನಂತಮೂರ್ತಿಯವರಿಗೆ ಆರೋಗ್ಯ ಸರಿ ಇರದಿದ್ದಾಗ ಒಂದು ಕನಸು ಬಿತ್ತಂತೆ. ಆ ಕನಸಿನಲ್ಲಿ ಯುಆರ್‌ಎ ದೇವನೂರರ ಕಿವಿಯಲ್ಲಿ ಪವಿತ್ರವಾದ ಗಾಯತ್ರಿ ಮಂತ್ರ ಉಸುರಿದರಂತೆ. ಇದನ್ನು




ಅವರು ದೇವನೂರರಿಗೂ ಹೇಳಿದ್ದರಂತೆ. ಅದನ್ನು ಕೇಳಿದ ದೇವನೂರು 'ಅಲ್ಲಾ ಮೇಷ್ಟ್ರೇ ನಿಮ್ಮ ಬದಲು ನಾನೇ ನಿಮ್ಮ ಕಿವಿಯಲ್ಲಿ ಗಾಯತ್ರಿ ಮಂತ್ರ ಉಸುರಿದಂತೆ ನಿಮಗೆ ಯಾಕೆ ಕನಸು ಬೀಳಲಿಲ್ಲ' ಅಂತಾ ಮರು ಪ್ರಶ್ನಿಸಿದ್ದರಂತೆ!

ಬ್ರಾಹ್ಮಣನೊಬ್ಬ ಶೂದ್ರನಿಗೆ ಗಾಯತ್ರಿ ಮಂತ್ರ ಬೋಧಿಸಿ ಬಂಡಾಯ ಮೆರೆದ ತೃಪ್ತಿ ಒಬ್ಬರದಾದರೆ, ಶೂದ್ರನೇ ಬ್ರಾಹ್ಮಣನಿಗೆ ಗಾಯತ್ರಿ ಮಂತ್ರ ಬೋಧಿಸಿದಂತೆ ಕನಸು ಬಿದ್ದಿದ್ದರೆ ಅದಿನ್ನೂ ಉನ್ನತ ಮಟ್ಟದ ಬಂಡಾಯವಾಗಿರುತ್ತಿತ್ತೆಂಬ ನಂಬಿಕೆ ಇನ್ನೊಂದು ತುದಿಯಲ್ಲಿದ್ದವರಿಗಿತ್ತು ಅಂತಾಯಿತು.

ಇದೆಲ್ಲಾ ಕನಸಿನ ಬಂಡಾಯಗಳು ಎಂಬುದೇ ಮಜಾ ವಿಷಯ.

ಅಂದಹಾಗೆ ಇವರಿಬ್ಬರ ಆಶಯ ಮತ್ತು ಆಕ್ಷೇಪಣೆಗಳೆರಡರ ಹಿಂದುಬಂದು ಗಾಯತ್ರಿ ಮಂತ್ರವೇ ಆಗಿರುವುದಂತೂ ಕುಚೋದ್ಯದಂತೆ ಕಾಣುತ್ತಿದೆ. ಇಲ್ಲಿ ಗಾಯತ್ರಿ ಮಂತ್ರದ ಹಂಗು ತೊರೆದು ಕನಸು ಕಾಣುವ ಹಾಗೂ ಯೋಚಿಸುವ ಅಭ್ಯಾಸ ಬೆಳೆಸಿಕೊಳ್ಳುವುದೇ ಆರೋಗ್ಯಕರ ಅಲ್ಲವೆ?



ಧಾರಾಳಿ ಮತ್ತು ಜಿಪುಣ

ಲಂಕೇಶರು ದುಡ್ಡಿನ ವಿಷಯದಲ್ಲಿ ಎಷ್ಟು ಧಾರಾಳಿಯೋ ಅಷ್ಟೇ ಜಿಪುಣರು ಕೂಡಾ ಆಗಿದ್ದರು. ಯಾರಿಗಾದರೂ ಲಂಕೇಶರು ಸುಮ್ಮನೆ ಹಣ ಕೊಟ್ಟರೆ ಅದನ್ನು ಅವರು ಎಂದೂ ವಾಪಸ್ಸು ಕೇಳುತ್ತಿರಲಿಲ್ಲ. ಆದರೆ ಯಾರಾದರೂ ಇವರಿಂದ ಸಾಲ ಪಡೆದು - ಅದು ಕಡಿಮೆ ಮೊತ್ತದ್ದೇ ಆಗಿದ್ದರು - ಅದನ್ನು ವಾಪಸ್ ಮಾಡಿರದಿದ್ದರೆ "ದರಿದ್ರದವನು. ಹಣವನ್ನು ಇನ್ನೂ ವಾಪಸ್ ಕೊಟ್ಟಿಲ್ಲ" ಎಂದು ಬೈಯ್ಯುತ್ತಿದ್ದರು. ಹಣ ಮಾತ್ರವಲ್ಲ ಪುಸ್ತಕ, ಕ್ಯಾಮೆರ, ಸ್ವೆಟರ್, ಶರ್ಟ್, ಇತ್ಯಾದಿಗಳನ್ನೂ ತಮ್ಮ ಸ್ನೇಹಿತರಿಗೆ, ಪರಿಚಿತರಿಗೆ ಹಿಂದೂಮುಂದೂ ನೋಡದೆ ಕೊಟ್ಟುಬಿಡುತ್ತಿದ್ದರು.

ಸಾಮಾನ್ಯವಾಗಿ ಟೈಲರ್ ಹೊಲಿದಿದ್ದ ಶರ್ಟ್ ಮತ್ತು ಪ್ಯಾಂಟ್ ಧರಿಸುತ್ತಿದ್ದ ಲಂಕೇಶರಿಗೆ ಅದ್ಯಾಕೋ ಒಮ್ಮೆ ಸೂಟು-ಬೂಟು ಧರಿಸಬೇಕೆನ್ನಿಸಿತು. ಆದರೆ ಬರೀ ಕೋಟ್ ಇದ್ದರೆ ಸಾಕಾಗುವುದಿಲ್ಲವಲ್ಲ, ಅದಕ್ಕೆ ಹೊಂದುವ ಶರ್ಟ್, ಪ್ಯಾಂಟ್, ಶೂ, ಸಾಕ್ಸ್, ಟೈ, ಬೆಲ್ಟ್ ಎಲ್ಲವನ್ನೂ ಹೊಸದಾಗಿ ಕೊಂಡರು. ಅವನ್ನೆಲ್ಲ ಲಂಕೇಶರು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ನಡೆದ ಒಂದು ಕಾರ್ಯಕ್ರಮಕ್ಕೆ ಧರಿಸಿದ್ದರು.

ಕಾರ್ಯಕ್ರಮ ಮುಗಿದನಂತರ ತಮ್ಮ ಮಿತ್ರರೊಂದಿಗೆ ಆಫೀಸಿನಲ್ಲಿ ಸೇರಿದ್ದರು. ಶೂ ತೊಟ್ಟು ಅಭ್ಯಾಸ ಕಳೆದುಹೋಗಿದ್ದರಿಂದ ಲಂಕೇಶರು ಅದನ್ನು ಬಿಚ್ಚಿ ತಮ್ಮ ಕುರ್ಚಿಯಲ್ಲಿ ಕೂತಿದ್ದರು. ಆಗ ಲಂಕೇಶರ ಬಹಳ ವರ್ಷಗಳ ಮಿತ್ರ ಶೂದ್ರ ಶ್ರೀನಿವಾಸ್ ಹೊಸ ಶೂ ನೋಡಿ "ಸಾರ್, ಶೂ ತುಂಬಾ ಚೆನ್ನಾಗಿದೆ" ಎಂದರಂತೆ. ಅದಕ್ಕೆ ಲಂಕೇಶರು "ಹೌದಾ? ಚೆನ್ನಾಗಿದೆಯೇನೋ? ನೋಡು ಅದನ್ನು ಹಾಕಿಕೊಂಡು ಸೈಜ್ ಸರಿ ಇದೆಯಾ ಟ್ರೈ ಮಾಡು" ಎಂದರಂತೆ. ಶೂದ್ರ ಅದನ್ನು ಹಾಕಿಕೊಂಡು ನೋಡಿದರೆ ಅದು ಫಿಟ್ ಆಗುತ್ತಿತ್ತಂತೆ. ಆ ಹೊಸ ಶೂಗಳನ್ನು ಶೂದ್ರ ಶ್ರೀನಿವಾಸ್ ಅವರಿಗೆ ಕೊಟ್ಟ ಲಂಕೇಶರು ಮನೆಗೆ ಬರಿಗಾಲಲ್ಲಿ ಹಿಂದಿರುಗಿದ್ದರು.

'ಲಂಕೇಶ್ ಪತ್ರಿಕೆ'ಯ ಸ್ಟಾಫ್ ಮೆಂಬರ್‌ಗಳನ್ನು ಲಂಕೇಶರು ಎಂದೂ ಕೇವಲ ಕೆಲಸ ಮಾಡುವವರು ಎಂಬಂತೆ ನೋಡುತ್ತಿರಲಿಲ್ಲ, ಬದಲಾಗಿ ಅವರನ್ನೆಲ್ಲ ತಮ್ಮ ಮನೆಯವರಂತೆಯೇ ನಡೆಸಿಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ ಅವರು ತಮ್ಮ ಸಿಬ್ಬಂದಿಗೆ ಕೊಡುತ್ತಿದ್ದ ಸಂಬಳವೂ ಎಲ್ಲ ಪತ್ರಿಕೆಗಳೂ ಕೊಡುತ್ತಿದ್ದುದಕ್ಕಿಂತಲೂ ಹೆಚ್ಚಿಗೆಯೇ ಆಗಿತ್ತು. ಪತ್ರಿಕೆಯಲ್ಲಿ ಕಾಲಂಗಳನ್ನು ಬರೆಯುತ್ತಿದ್ದವರಿಗೂ ಚೆನ್ನಾಗಿಯೇ ಸಂಭಾವನೆಯನ್ನು ಕೊಡುತ್ತಿದ್ದರು. ಒಮ್ಮೆ ಚಳಿಗಾಲದಲ್ಲಿ ತಮ್ಮ ಎಲ್ಲ ಸಿಬ್ಬಂದಿಗಳಿಗೆ ಸ್ವೆಟರ್‌ಗಳನ್ನು ಖರೀದಿಸಿಕೊಟ್ಟಿದ್ದರು. ಇದು ಸಣ್ಣ ವಿಷಯ ಅನ್ನಿಸಬಹುದು. ಆದರೆ ಲಂಕೇಶರಿಗೆ ಯಾರಿಗಾದರೂ ಸಹಾಯ ಮಾಡಬೇಕು ಎನ್ನಿಸಿದರೆ ದುಡ್ಡಿನ ಬಗ್ಗೆ ಹಿಂದುಮುಂದು ನೋಡದೆ ನೆರವಾಗುತ್ತಿದ್ದರು.

* * * * * *

35 ಹುಳಿಮಾವು ಮತ್ತು ನಾನು



• ಇಂದಿರಾ ಲಂಕೇಶ್

ನನ್ನ ಅಪ್ಪಯ್ಯಗೆ ಹೃದಯದ ಸಮಸ್ಯೆಯಾಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ನನ್ನ ತಮ್ಮ ಶಿವಕುಮಾರ್ ಫೋನ್ ಮಾಡಿದ. ನಾನು ಕೂಡಲೇ ಶಿವಮೊಗ್ಗಕ್ಕೆ ಹೊರಡಬೇಕಿತ್ತು, ನನ್ನೊಂದಿಗೆ ಲಂಕೇಶರ ಡ್ರೈವರ್ ರೇವಣ್ಣನನ್ನು ಕರೆದುಕೊಂಡು ಹೋಗೋಣ ಅಂದರೆ ಅದರ ಬಗ್ಗೆ ಮೊದಲೇ ಲಂಕೇಶರಿಗೆ ಹೇಳಬೇಕಿತ್ತು. ಯಾಕೆಂದರೆ ಲಂಕೇಶರ ಅವತ್ತಿನ ಕಾರ್ಯಕ್ರಮಗಳೇನು, ಅವರು ಎಲ್ಲೆಲ್ಲಿಗೆ ಹೋಗಬೇಕಿದೆ ಎಂದು ನನಗೆ ಗೊತ್ತಿರುತ್ತಿರಲಿಲ್ಲ, ಆದರೆ ಅವತ್ತು ಲಂಕೇಶರು ಆಫೀಸಿನಲ್ಲಿ ಇರಲಿಲ್ಲ, ಆಗ ಮೊಬೈಲ್‌ಗಳು ಇರಲಿಲ್ಲವಾದ್ದರಿಂದ ಅವರನ್ನು ಸಂಪರ್ಕಿಸಲಾಗಲಿಲ್ಲ.

ವಿಧಿ ಇಲ್ಲದೆ ನಾನೊಬ್ಬಳೇ ನನ್ನ ಕಾರ್ ಡ್ರೈವ್ ಮಾಡುತ್ತಾ ಶಿವಮೊಗ್ಗೆಗೆ ಹೊರಟೆ. ಅಪ್ಪಯ್ಯನ ಹೃದಯ ರಕ್ತ ಪಂಪ್ ಮಾಡುವುದನ್ನು ನಿಧಾನ ಮಾಡಿತ್ತು, ಅವರಿಗೆ ಅಷ್ಟುಹೊತ್ತಿಗೆ 81 ವರ್ಷ ವಯಸ್ಸಾಗಿದ್ದರಿಂದ ವೈದ್ಯರು "ಈ ವಯಸ್ಸಿನಲ್ಲಿ ಅವರಿಗೆ ಆಪರೇಷನ್ ಮಾಡಿದರೆ ಯಾವುದೂ ಗ್ಯಾರಂಟಿ ಕೊಡಲಾಗುವುದಿಲ್ಲ, ಎಷ್ಟು ದಿನ ಬದುಕಿರುತ್ತಾರೋ ಅಷ್ಟು ದಿನ ಇವರು ಔಷಧಿ ತೆಗೆದುಕೊಳ್ಳುತ್ತಾ ಮನೆಯಲ್ಲೇ ಇರಲಿ" ಎಂದು ಹೇಳಿ ಅಪ್ಪಯ್ಯನನ್ನು ಮನೆಗೆ ಕಳುಹಿಸಿದ್ದರು.

ಅಲ್ಲಿಯ ತನಕ ನನ್ನ ಅಪ್ಪಯ್ಯ ಎಂದೂ ಹಾಸಿಗೆ ಹಿಡಿದವರೇ ಅಲ್ಲ, ಆದರೆ ಈ ಬಾರಿ ಅವರು ತುಂಬಾ ಸುಸ್ತಾಗಿದ್ದರು. ಪ್ರತಿಯೊಂದಕ್ಕೂ ಅವರು ಬೇರೆಯವರನ್ನು ಅವಲಂಬಿಸಬೇಕಿತ್ತು, ಅಪ್ಪಯ್ಯನ ಹಲ್ಲು ಉಜ್ಜುವುದರಿಂದ ಹಿಡಿದು ಎಲ್ಲ ಕೆಲಸಗಳನ್ನು ನನ್ನ ತಮ್ಮ ಶಿವಕುಮಾರನೇ ಮಾಡುತ್ತಿದ್ದ.

ಒಂದು ತಿಂಗಳಲ್ಲಿ ಅಪ್ಪಯ್ಯ ಸುಧಾರಿಸಿಕೊಂಡರು. ಆದರೆ ಮುಂಚಿನಂತೆ ಅವರು ಲವಲವಿಕೆಯಿಂದ ಇರಲಿಲ್ಲ, ಸುಮ್ಮನೆ ಕೂತು ಏನನ್ನಾದರೂ ಯೋಚಿಸುತ್ತಿದ್ದರು. ಒಬ್ಬರೇ ಇರಲು ಇಷ್ಟಪಡುತ್ತಿದ್ದರು. ಅವರ ಸ್ನೇಹಿತರಲ್ಲಿ ಬಹಳಷ್ಟು ಜನ ತೀರಿಕೊಂಡಿದ್ದರು. ಮತ್ತೆ ಎಲ್ಲಿ ತನ್ನ ಆರೋಗ್ಯ ಕೆಟ್ಟು ಬೇರೆಯವರನ್ನು ಅವಲಂಬಿಸಬೇಕಾಗುತ್ತದೋ ಎಂಬ ಭಯದಿಂದ ತಾವು ಯಾವುದಾದರೊಂದು ವೃದ್ಧಾಶ್ರಮವನ್ನು ಸೇರುತ್ತೇನೆ ಎನ್ನುತ್ತಿದ್ದರು. ಹಿಂದೆಲ್ಲ ತುಂಬಾ ಆಕ್ಟಿವ್ ಆಗಿದ್ದ ಅವರಿಗೆ ತಾನು ಈಗ ಅಸಹಾಯಕ ಎಂಬ ಭಾವನೆ ಕಾಡಲಾರಂಭಿಸಿತ್ತು.

ನನ್ನ ಅಪ್ಪಯ್ಯ ಓದಿದ್ದು ಕೇವಲ ಎಸ್‌ಎಸ್‌ಎಲ್‌ಸಿ ತನಕವಾದರೂ ಅವರು ಇಂಗ್ಲಿಷ್‌ನಲ್ಲಿ ಕಾಗದ ಬರೆಯುವ ರೀತಿ ಅದ್ಭುತವಾಗಿತ್ತು, ಕಷ್ಟಪಟ್ಟು ದುಡಿಯುತ್ತಿದ್ದ ಅವರು ಹಂತಹಂತವಾಗಿ 'ಎಲ್‌ಐಸಿ'ಯಲ್ಲಿ ಡೆವಲಪ್‌ಮೆಂಟ್ ಆಫೀಸರ್ ಹುದ್ದೆ ತನಕ ಏರಿದ್ದರು. ಯುವಕರು ತಮ್ಮಂತೆ ವಿದ್ಯೆ ಪಡೆದು ಬೆಳೆಯಬೇಕೆಂಬ ಆಶೆಯಿಂದ ಅವರು ದಾವಣಗೆರೆ ಮತ್ತು ಶಿವಮೊಗ್ಗೆಯಲ್ಲಿದ್ದ ಯುವಕರ ಹಾಸ್ಟೆಲ್‌ಗಳ ಜವಾಬ್ದಾರಿಯನ್ನು ಹೊತ್ತಿದ್ದರು. ಅಸಹಾಯಕ ಮಹಿಳೆಯರಿಗೆ ನೆರವಾಗಲೆಂದು ಹಲವಾರು ಅಬಲಾಶ್ರಮಗಳಿಗೆ ಧನಸಹಾಯ ಮಾಡುತ್ತಿದ್ದರು.

ಅದೆಲ್ಲದರ ಜೊತೆಜೊತೆಗೆ ತಾಯಿ ಇಲ್ಲದ ತಮ್ಮ ಮೂವರು ಮಕ್ಕಳಿಗೆ ತಂದೆ-ತಾಯಿ ಎರಡೂ ಆಗಿ ಬೆಳೆಸಿದ್ದರು. ಒಂದೆಡೆ ಕೆಲಸ, ಇನ್ನೊಂದೆಡೆ ಮೂವರು ಮಕ್ಕಳ ಜವಾಬ್ದಾರಿ, ಮತ್ತೊಂದೆಡೆ ಮನೆ - ಹೀಗೆ ಒಬ್ಬ ಪುರುಷನಿಗೆ ಇವನ್ನೆಲ್ಲ ಒಮ್ಮೆಗೆ ನಿಭಾಯಿಸುವುದು ಸಾಮಾನ್ಯ ಕೆಲಸವಲ್ಲ, ಆದರೆ ಅವರು ಅದನ್ನೆಲ್ಲ ಸಾಧಿಸಿದ್ದರು.

ಇಂತಹ ಅಪ್ಪಯ್ಯ ಅನಾರೋಗ್ಯದಿಂದ ಚೇತರಿಸಿಕೊಂಡು ಯಾರನ್ನೂ ಅವಲಂಬಿಸದಷ್ಟು ಚೈತನ್ಯವನ್ನು ಮತ್ತೆ ಪಡೆದಿದ್ದರೂ ಮತ್ತೊಮ್ಮೆ ತಾನೆಲ್ಲಿ ಅಸಹಾಯಕನಾಗುತ್ತೇನೋ ಎಂಬ ಆತಂಕದಲ್ಲೇ ಇದ್ದರು. ಕೊನೆಗೊಂದು ದಿನ ನನ್ನ ತಮ್ಮನ ಹೆಂಡತಿಗೆ "ಉಡುಪಿಯ ಎಲ್‌ಐಸಿ ಕಚೇರಿಯಲ್ಲಿ ಕೆಲಸ ಇದೆ. ಅಲ್ಲಿಗೆ ಹೋಗಿಬರುತ್ತೇನೆ" ಎಂದು ಹೇಳಿ ಮನೆಯಿಂದ ಹೋದರು. ಉಡುಪಿಯ ಹೋಟೆಲ್ ಒಂದರಲ್ಲಿ ರೂಮ್ ಮಾಡಿ, "ಇದು ಆತ್ಮಹತ್ಯೆಯಲ್ಲ, ಇಚ್ಛಾ ಮರಣ" ಎಂದು ಪತ್ರ ಬರೆದಿಟ್ಟು, ಹೋಟೆಲ್ ರೂಮ್ ಬಾಡಿಗೆಯ ಹಣವನ್ನು ಒಂದು ಕವರ್‌ನಲ್ಲಿಟ್ಟು, ಹೋಟೆಲ್‌ನವರಿಗೆ ಅನಾನುಕೂಲ ಮಾಡಿದ್ದರಿಂದ ಅವರ ಕ್ಷಮೆ ಕೋರಿ, ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ ಮಗನಿಗೆ ಒಂದು ಪತ್ರ ಬರೆದು ತಾವು ಸ್ವಾವಲಂಬಿ ಆಗಿರುವಾಗಲೇ ತಮ್ಮ ಪ್ರಾಣವನ್ನು ತೊರೆದರು.

ಹೆತ್ತ ತಾಯಿಯ ಮುಖ ಕೂಡಾ ನೆನಪಿರದ ನಾನು ನನಗೆ ತಂದೆ-ತಾಯಿ ಎರಡೂ ಆಗಿದ್ದ ನನ್ನ ಅಪ್ಪಯ್ಯನನ್ನು ಕಳೆದುಕೊಂಡೆ.

ಲಂಕೇಶರು ಯಾವಾಗಲೂ ನನ್ನ ಅಪ್ಪಯ್ಯನನ್ನು 'ಅಪಾಯ' ಎಂದು ತಮಾಷೆ ಮಾಡುತ್ತಿದ್ದರು. ಅಪ್ಪಯ್ಯನ ಮುಂದಲ್ಲ; ನನ್ನ ಮತ್ತು ನಮ್ಮ ಮಕ್ಕಳ ಮುಂದೆ. ಆದರೆ ಅಪ್ಪಯ್ಯನ ಸಾವು ಲಂಕೇಶರನ್ನು ಅಲುಗಾಡಿಸಿತು. ದೈಹಿಕವಾಗಿ ಅಸಹಾಯಕರಾಗುವ, ಬೇರೆಯವರನ್ನು ಅವಲಂಬಿಸುವ ಸ್ಥಿತಿಯನ್ನು ಯಾರೂ ತಲುಪಬಾರದು ಎಂಬುದು ಲಂಕೇಶರ ಆಶಯ ಕೂಡ ಆಗಿತ್ತು, ಅದನ್ನು ಕುರಿತು ಅವರು ಹಲವಾರು ಬಾರಿ ತಮ್ಮ ಅಂಕಣಗಳಲ್ಲಿ ಬರೆದಿದ್ದಾರೆ ಕೂಡ.

ಅಪ್ಪಯ್ಯನ ನಿರ್ಗಮನದ ರೀತಿಯ ಬಗ್ಗೆ ಅವರಿಗೆ ವಿವರಿಸಿದಾಗ "ನಿನ್ನ ಅಪ್ಪಯ್ಯ ನಿಜಕ್ಕೂ ಗ್ರೇಟ್. ಎಲ್ಲರಿಂದಲೂ ಇಂತಹದ್ದು ಸಾಧ್ಯವಿಲ್ಲ" ಎಂದರು.

(ಮುಂದುವರೆಯುವುದು)

ಅಪರೂಪದ ಫೋಟೋ

ಒಂದಾನೊಂದು ಕಾಲದಲ್ಲಿ ದಲಿತ ಮಿತ್ರರು....!

ಬಹುಶಃ 1981 ರ ಸುಮಾರಿನಲ್ಲಿ ಅಂದರೆ ಈಗ್ಗೆ ಮೂವತ್ತು ವರ್ಷಗಳ ಹಿಂದೆ ಬೆಂಗಳೂರಿನ ಕುಮಾರಕೃಪಾ ಗೆಸ್ಟ್‌ಹೌಸಿನ ಆವರಣದಲ್ಲಿ ತೆಗೆದಿರಬಹುದಾದ ಫೋಟೋ ಇದು.

ಮಧ್ಯೆ ನಿಂತಿರುವ ಹಿರಿಯ ಮಹಿಳೆ ಸವಿತಾ ಅಂಬೇಡ್ಕರ್. ಉಳಿದವರ ಪೈಕಿ ಗುರುತು ಸಿಕ್ಕವರ ಹೆಸರುಗಳನ್ನು ಇಲ್ಲಿ ನೀಡಿದೆ. ಕರ್ನಾಟಕದಲ್ಲಿ ರಾಜಕೀಯ, ಸಾಮಾಜಿಕ ನ್ಯಾಯಕ್ಕಾಗಿನ ಹೋರಾಟ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಪಲ್ಲಟಗಳಿಗೆ ಕೊಡುಗೆ ನೀಡಿದ ಅನೇಕರು ಈ ಚಿತ್ರದಲ್ಲಿದ್ದಾರೆ.... ಯೌವ್ವನ, ಪ್ರಾಮಾಣಿಕ ಕಾಳಜಿ ಹಾಗೂ ಹುಮ್ಮಸ್ಸು ಇಲ್ಲಿನ ಪ್ರತಿಯೊಬ್ಬರಲ್ಲೂ ಹೇಗೆ ಕಾಣುತ್ತಿದೆ ನೋಡಿ.



ನಿಂತಿರುವವರು (ಎಡಗಡೆಯಿಂದ)
1. ದೇವಯ್ಯ ಹರವೆ
3. ಪ್ರೊ. ಬಿ. ಕೃಷ್ಣಪ್ಪ
4. ಡಿ. ರಾಜಣ್ಣ
5. ಕವಿ ಸಿದ್ಧಲಿಂಗಯ್ಯ
6. ಕೋಟಗಾನಹಳ್ಳಿ ರಾಮಯ್ಯ
7. ಗಂಗಾರಾಂ ಚಂಡಾಳ
8. ದಾಸಪ್ಪ
9. ಭಾರತಿ ರಾಜಣ್ಣ
10. ಸವಿತಾ ಅಂಬೇಡ್ಕರ್
11. ರಾಮದಾಸ್ ಅಠಾವಲೆ (ಕೈಕಟ್ಟಿ ನಿಂತಿರುವ ಆಜಾನುಬಾಹು) ನಿಂತಿರುವವರ ಸಾಲಿನ ಬಲತುದಿಯಲ್ಲಿರುವವರು ಬಹುಶಃ ಈಗಿನ ಬೆಂಗಳೂರು ವಿ.ವಿ.ಯ ರಿಜಿಸ್ಟ್ರಾರ್ ಆಗಿರುವ ಡಾ. ಬಿ.ಸಿ. ಮೈಲಾರಪ್ಪ ಇರಬಹುದು.

ಕುಳಿತಿರುವವರು
4. ಎಂ. ವೆಂಕಟಸ್ವಾಮಿ
5. ಎಲ್. ಹನುಮಂತಯ್ಯ
6. ವಿ. ನಾಗರಾಜ್
7. ಮಂಗ್ಳೂರ ವಿಜಯ
8. ಜನಕರಾಜ್

...ಕೆ ಉತ್ತರ ಭಾರತದೋರಿಗಿಂತ ನಾವ್ಯಾತ್ರಲ್ಲಿ ಕಮ್ಮಿ ಇದ್ದಿವಿ?

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಕಾಳಮಾವ ಮತ್ತು ಸೀರ ಇಬ್ಬರೂ ಅರೆಬೆತ್ತಲೆಯಾಗಿ ...ತಿದ್ದರು. ಅವರ ಅಂಗಿಗಳು ಭುಜದ ಮೇಲೆ ...ಗಿದ್ದವು. ಶೆಕೆಗೆ ಸೆಣೆಯುತ್ತಿದ್ದರು. ಚಿಕ್ಕಣ್ಣ ಮಡಕೆ ...ನಿಂದ ಶರಬತ್ತು ಮಾಡುವ ತಯಾರಿ ನಡೆಸಿದ್ದ. ಆಗ ...ದ ವಾಟಿಸ್ಸೆ. ಬಿಸಿಲ ಝಳಕ್ಕೆ ಸೆಣೆಯುತ್ತ,

"ಚಿಕ್ಕಣ್ಣ, ನೀನೊಂದು ಫ್ಯಾನ್ ತಂದು ಮಡಗಬೇಕು ...ೂ" ಎಂದ.

"ನಾನ್ಯಾಕೆ ತರ್ಲೆಪ್ಪ? ತೆವಲಿದ್ದರೆ ನೀವೇ ತಂದು ...ಕಳಿ" ಎಂದ ಚಿಕ್ಕಣ್ಣ.

"ಅದೂ ಸ್ವಾಗೆ ಗುಡ್ಡಾಗಿತ್ತು ನೋಡು, ಓಟ್ಗು ಆಗ ...ಾಗಿತ್ತು ಕಂಡ್ಯ. ಯಾವತ್ತು ಸ್ವಾಗೆ ತಗದು ಹಂಚಾಕಿದ್ರೊ ...ತ್ತಿಂದ ಓಟ್ಗು ಮನೆಲಿ ಕೂತಗಳಕ್ಕಾಗದಿಲ್ಲ, ಅಂತಾ ..." ಎಂದ ಕಾಳಮಾವ.

"ಈ ಶಕೆ ನೋಡಿ ನಾನು ಹಂಚ ತಗದು ...ಟ್ಲೊಚ್ಚನ ಮನಿಗೆ ಅಂತ ಏಟೊ ಸತಿ ಯೇಚನೆ ...ಡಿದ್ದಿನಿ ದೊಡಪ್ಪ. ಆದ್ರೆ ಜನ ಕೆಟ್ಕೊಗ್ಯವುರೆ. ...ವನೊ ನನಿಗಾಗದೋನು ಬೆಂಕಿಕೊಟ್ಟ ಅಂದ್ರೆ ಮನೆ ಬೆಂದೋಗದು. ಹೋಗ್ಲಿ ಇಡೀ ಊರಿಗೇ ...ಚ ಬೀಳ್ತದಲ್ಲ ಹೇಳು." ಎಂದ ವಾಟಿಸ್ಸೆ.

"ನಿಜ ಕಂಡ್ಯ. ಈಚೆಗೆ ಕ್ಯಟ್ಟ ಮನುಸುರು ...ಸ್ತಿಯಾಯ್ತಾ ಅವುರೆ. ವಳ್ಳೆ ಜನ ಹಳ್ಳೀಲಿ ಇರದೆ ...ಟ್ಗ್ಯದೆ."

"ಹಳ್ಳಿ ಏನು, ತಾಲೋಕು ಕೆಟ್ಕೋಗ್ಯವೆ ದೊಡಪ್ಪಾ. ...ದ್ಲಿಗೆ ಎಮ್ಮೆಲ್ಲೆಗಳು ತಾಲೋಕಲ್ಲಿ ಇರೋರು. ಈಗ ...ವನೂ ಇಲ್ಲ. ಅದ್ಕೆ ಯಲ್ಲ ಹೋಗಿ ಬೆಂಗಳೂರು ...ಕೊಂಡ್ರು."

"ಬೆಂಗಳೂರಲ್ಲಿ ತಾನೆ ಮನುಸ್ರು ಇರಕ್ಕಾದತೇನ್ಲ?"

"ನೀನು ಇರಕ್ಕಾಗದಿಲ್ಲ ದ್ವಡಪ್ಪ. ಆದ್ರೆ ಇನ್ನಲ್ಲಾರೂ ...ಬವುದು. ಜೇಬಲ್ಲಿ ದುಡ್ಡಿರಬೇಕು ಅಷ್ಟೆಯ."

"ದಿನ ಬೆಳಗಾಯ್ತು ಅಂದ್ರೆ ಸಕಲಿಷ್ಟು ಪದಾರ್ಥಕ್ಕು ...ಡ್ಡು ಕೊಡಬೇಕು. ಅಂದ್ರೆ ಆದಾಯನೂ ಅಂಗೇ ...ಬೇಕು ಕಂಡ್ಯ. ಅದೇ ನಮ್ಮೂರಲ್ಲಿ ಇರದಾದ್ರೆ ...ಡ್ಡು ಯಾಕ್ಲಬೇಕು?"

"ನಿನಿಗೆ ಬೇಕಾಗಿಲ್ಲ ಅಷ್ಟೆ ದೊಡಪ್ಪ. ಆದ್ರೆ ...ಳದೋರಿಗೆ ಬೇಕೇಬೇಕು. ಬೀಡಿ ತೆವಲು ...ಕ್ಕೋನಿಗೂ ದುಡ್ಡಿರಬೇಕು. ಆದ್ರೆ ಅವುರಿವುರತ್ರ ಕೇಳಿ ...ಸಗಳೋನಿಗೆ ದುಡ್ಡು ಬೇಕಿಲ್ಲ. ಪರೆಗ್‌ಜಾಂಪಲ್ ನಮ್ಮ ...ದಚಿಗಪ್ಪ."

"ಅಮಿಕ್ಕಂಡು ಕೂತಗಳ್ಳ ಕಂಡಿದ್ದಿನಿ. ಯಾವತ್ತಾರ ...ನು ಯಾರತ್ರಲಾ ಬೀಡಿ ಈಸಗಂಡೆ ಅಂದ್ರೆ, ತಿರಗ ...ಪಸ್ ಕೊಟ್ಟೇ ಕೊಡ್ತಿನಿ. ಗೊತ್ತೇ?" ಎಂದು ಸೀರ ...ಕಿದ.

"ಅದು ಜುಮ್ಮಕ್ಕ ನಿನಿಗೆ ಕಪ್ಪ ಕಾಣಿಕೆ ಕೊಟ್ಟಂಗೆ ಬೀಡಿ ಕಟ್ಟ ತಗದು ಕೊಡ್ತಳೆ. ಅದರಲ್ಲೇ ಬೀಡಿ ಸಾಲ ತೀರಸದ ನಾನೇ ನೋಡಿದ್ದಿನಿ."

"ಬೀಡಿಕೊಡ್ತಳೆ ಅಂದ್ರೆ ಅವುಳ ಕೈಲಿ ಈಗ ದುಡ್ಡಾಡ್ತದೆ ಕಂಡ್ಯ. ಪಂಚಾತಿ ಮೆಂಬ್ರಾಗಿರದ್ರಿಂದ ಕಮಿಸನ್ ಬತ್ತದಂತೆ. ಆ ದುಡ್ಡು ನಮದೇ ಅಲವೆ?" ಎಂದ ಸೀರ.

"ಜುಮ್ಮಕ್ಕ ಬಂದಾಗ ಹೇಳ್ತಿನಿರು."

"ನಿನ್ನ ದಮ್ಮಯ್ಯ ಅಂಗಂತ ಹೇಳಿಗೀಳಿಯಾ ಕಂಡ್ಯ" ಎಂದು ಸೀರ ಕೈ ಮುಗಿದ. ನಗಾಡಿದ ವಾಟಿಸ್ಸೆ.

"ಅಂತೂ ನಮ್ಮ ಜುಮ್ಮಕ್ಕನೂ ಡಿಲ್ಲಿ ನೋಡಿಕಂಡು ಬತ್ತಳೆ."

"ಅವುಳು ಡಿಲ್ಲಿ ನೋಡಕ್ಕೋಗಿ ಆಗ್ಲೆ ಎಂಟು ದಿನಾಯ್ತಲವೆ?" ಎಂದ ಕಾಳಮಾವ.

"ಒಂದು ವಾರಾಯ್ತು ದೊಡಪ್ಪ, ಇನ್ನೇನು ಬತ್ತಳೆ.



ನಾನು ಒಂದು ಡ್ರಿಂಕ್ಸ್ ಬಾಟ್ಲು ತರೇಳಿದ್ದಿನಿ. ಅದ್ಕೆ ಕಾಯ್ತಾಯಿದ್ದಿನಿ."

"ನನಿಗೆ ಒಂದು ಸಟ್ಟರ್ ತತ್ತಿನಿ ಅಂತ ಹೋಗ್ಯವುಳೆ, ನೋಡನಿರು."

"ಯಾರ್ಯಾರು ಹೋಗಿದ್ದರ್ಲ ಅವುಳ ಜೊತೆಲಿ?" ಎಂದ ಕಾಳಮಾವ.

"ನಲವತ್ತೈವತ್ತು ಜನ ಹೋಗ್ಯವುರಂತೆ ದೊಡಪ್ಪಾ, ನಾಗ್ತಳ್ಳಿ ಚಂದ್ರಶೇಖರ ನಾಟಗ ಮಾಡೋ ಹೆಂಗುಸ್ರು, ಅವುರ ಜೊತಿಗೆ ರೈತರನ್ನೆಲ್ಲ ಸೇರಿಸಿಗಂಡು ಡೆಲ್ಲಿ ತೋರಸಕ್ಕೆ ಕರಕಂಡೋಗ್ಯವುನೆ."

"ಅಂಗರೆ ಖರ್ಚೆಲ್ಲ ಅವ್ನುಂದೆಯಾ?"

"ದಾರಿ ಖರ್ಚೆಲ್ಲ ಇವುರದು, ಇನ್ನಲ್ಲ ಅವ್ನುಂದೆಯಂತೆ. ಅವುನಿಗೇನು ಸಿನುಮಾದಲ್ಲಿ ಬೇಕಾದಂಗೆ ದುಡುದವುನೆ. ಅವುರೂರ ಜನಕೆ ಖರ್ಚು ಮಾಡ್ತನೆ ದ್ವಡಪ್ಪ."

"ಸಿನುಮದಲ್ಲಿ ಆಟೊಂದು ಆದಾಯ ಇದ್ದತ್ತೇನ್ಲ?"

"ಊ ದೊಡಪ್ಪ, ಒಂದು ಕೋಟಿ ಹಾಕಿ ಸಿನುಮ ತಗದ್ರೆ ಅವು ಒಂಬತ್ತು ಕೋಟಿ ದುಡಿತವೆ. ಅಂತ ಸಿನಿಮಾವ ಹನ್ನೆರಡು ತಗದವನೆ. ಅಲ್ಲಿ ಏಟಾದಾಯ ಬಂದಿರಬವುದ ಲ್ಯಕ್ಕ ಹಾಕು."

"ಲ್ಯಕ್ಕ ಹಾಕದೇನು ನ್ಯನಿಸಿಗಂಡ್ರೆ ತಲೆ ತಿರುಗ್ತದಪ್ಪ" ಎಂದ ಸೀರ ಧನಕನಕ ತುಂಬಿದ ಟ್ರೆಜರಿ ನೋಡಿದಂತೆ ಕಣ್ಣುಬಿಟ್ಟ.

"ಅವುರಪ್ಪ ಇಲ್ಲೆ ಮೇಟ್ರಾಗಿದ್ರು ಕಂಡ್ಯ. ನಾಗ್ತಳ್ಳಿ ಮೇಷ್ಟ್ರು ಅಂದ್ರೆ ವಳ್ಳೆ ಜನ. ಇಡೀ ಸುತ್ಲಳ್ಳಿ ಮೇಟ್ರೆಲ್ಲ ನಾಗ್ತಳ್ಳಿಯೋರೆ ಕಂಡ್ಯ" ಎಂದ ಕಾಳಮಾವ.

"ಬರೀ ಮೇಷ್ಟ್ರಲ್ಲ ದೊಡಪ್ಪ ನೀ ಯಾವುದೇ ಫೀಲ್ಡ ತಗೊ ನಾಗ್ತಳ್ಳಿಯೋರಿಗೆ ಸರಿಗಟ್ಟೋರೆ ಇಲ್ಲ. ಅಮೆರಿಕ, ಜರ್ಮನಿ, ಜಪಾನ್ ಗಂಟ ಹೋಗ್ಯವುರೆ. ಅವುರೊಂತರ ಕೇರಳದೋರಿದ್ದಂಗೆ."

"ಅದೇನಾಜನ ಅಂಗನೆದಲ್ಲಾ."

"ಆ ತಳಿನೆ ಬ್ಯಾರೆ ತಳಿ ದೊಡಪ್ಪಾ, ವಿಜಯನಗರದ ಅರಸು ತೀರಿಕೊಂಡ ಮ್ಯಾಲೆ ಅಲ್ಲಿ ಬಾರಿ ಅರಾಜಕತೆ ಆಯ್ತಂತೆ. ಆಗ ತಿರುಪ್ತಿ ಹತ್ರ ಇದ್ದ ತಿಮ್ಮೇಗೌಡ ಅನ್ನೊನು ತನ್ನ ಪರಿವಾರ ಕಟ್ಟಗಂಡು ಬಂದು ಹುಲಿಕ್ಯರೆತ ಬೀಡುಬುಟ್ಟನಂತೆ. ಅಲ್ಲಿಂದ ಬಂದು ಹಳ್ಳಳ್ಳಿಲಿ ಉಳಕಂಡು ಆಂಜನೇಯನ ಗುಡಿ ಕಟ್ಟಿದನಂತೆ. ಅದೇನಾಯ್ತೋ ಏನೋ ಆ ಜಾಗನೂ ಬುಟ್ಟು ನಾಗ್ತಳ್ಳಿಗೆ ಬಂದು ಸೇರಿಕಂಡ್ರು. ಆದ್ರಿಂದ ಆ ಊರ ಜನ ಯಾವೂರಿಗೋದ್ರು ಬದುಕ್ತರೆ."

"ಒಂಥರಾ ಬ್ರಾಂಬ್ರಿದ್ದಂಗೆ ಅನ್ನು" ಎಂದ ಸೀರ.

"ಬ್ರಾಂಬ್ರಿಗಿಂತ ವಳ್ಳೆ ಜನ ಚಿಗಪ್ಪ, ಇದೇ ನಮ್ಮ ಜುಮ್ಮಕ್ಕ ಆವತ್ತಿನ ದಿವಸದಲ್ಲಿ ಪಂಚಾತಿ ಮೆಂಬ್ರಾಗಕ್ಕೆ ನಮ್ಮೂರ ಹೆಣ್ಣಮಕ್ಕಳು ತಲೆ ಹ್ವಗದಾಗ ಅವುಳು ಬಂದು ನಿಂತುಗೊಂಡು ಗೆದ್ಲು. ಯಾಕೆ ಅಂದ್ರೆ, ಅವುಳು ನಾಗ್ತಳ್ಳಿಯೋಳು. ಅದ್ಕೆ ಅಲವೆ ಚಂದ್ರಶೇಖರ ಡೆಲ್ಲಿಗೆ ಕರಕಂಡೋಗಿರದು."

"ಓ ಅವುಳಿನ್ನ ಕೈಗೆ ಸಿಗದಿಲ್ಲ ಬುಡತ್ಗ."

"ಅಂಗೇನು ಇಲ್ಲ ಚಿಗಪ್ಪ. ನಮ್ಮ ದೇವರ ಶಕ್ತಿ ನಮಿಗೊತ್ತು, ನಮ್ಮ ಜುಮ್ಮಕ್ಕ ಅಷ್ಟಾಪ್ತ ವಯಿಸಿಗೇ ಮಕ್ಕಳ ತಾಯಿತರ ಆಡತಿದ್ಲು, ಆದ್ದರಿಂದ ನಮ್ಮ ಜೊತೆ ಬುಟ್ಟು ಹೋಗದಿಲ್ಲ."

"ದಿಲ್ಲಿಗ್ಯಾತ್ರಲೋಗಿದ್ದರ್ಲ ಅವುರು? ಬಸ್ನು ಮಾಡಿದ್ದರೆ?"

"ಬಸ್ನಲ್ಲಿ ಡಿಲ್ಲಿಗೋಗಕಾದತೆ ದೊಡಪ್ಪ? ರೈಲಲ್ಲಿ ಹೋಗ್ಯವುರೆ. ಯರಡು ದಿನ ಪ್ರಯಾಣವಂತೆ. ಅವುಳ ಪರ್ಸನಲ್ ಸೆಕ್ರೆಟ್ರಿ ನೋಡಿಕಳದ್ರಿಂದ ಏನೂ ತೊಂದ್ರೆಯಾಗದಂತೆ ಬತ್ತಾಳೆ."

"ನೀನು ಹೋಗಬೇಕಾಗಿತ್ತು ಕಂಡ್ಯ."

"ನನಿಗೆ ನಮ್ಮ ಮಂಡ್ಯನೆ ಡಿಲ್ಲಿ ದೊಡಪ್ಪ ಶ್ರೀರಂಗಪಟ್ಣನೆ ಆಗ್ರ. ಮೇಲುಕೋಟೆನೆ ಮಥುರಾ. ಕಾಳಮುದ್ದನದೊಡ್ಡಿನೆ ಪಂಜಾಬು ಅಂತ ತಿಳಕೊಂಡಿದ್ದಿನಿ. ಅವುರು ನೋಡಕ್ಕೋಗಿರದು ಇಷ್ಟೇ ಪ್ಲೇಸು. ನಾನು ಇಲ್ಲೇ ಇವುನ್ನ ನೋಡಿಕಂಡ್ರಾಯ್ತು."

"ಅಂಗಂದ್ರಾದತ್ಲ?"

"ದೊಡಪ್ಪ, ಆ ಉತ್ತರ ಭಾರತವ ನೀನು ತೆಪ್ಪುತಿಳಕೊಂಡಿದ್ದಿ. ಅಲ್ಲಿದ್ದ ಲಲ್ಲು ಪ್ರಸಾದ ನಮ್ಮ ಬಂಗಾರಪ್ಪನಂಗೆ, ಮುಲಾಯಂಸಿಂಗ್‌ನಂತೂ ಥೇಟ್ ನಮ್ಮ ದ್ಯಾವೇಗೌಡರಂತೆ. ಕಲ್ಯಾಣ ಸಿಂಗನಂತೂ ಎಡೂರಪ್ಪನೆಯಾ. ಆ ಮಾಯಾವತಿಗೆ ಹೋಲಿಸಿದ್ರೆ ನಮ್ಮ ಮೋಟಮ್ಮನೇ ಬೆಸ್ಟ್ ಲೇಡಿ. ಪ್ರಮೀಳ ನೇಸರ್ಗಿಗೆ ಪವರ್ ಸಿಕ್ಕಿದ್ರೆ ಉಮಾಭಾರತಿಯಂಗಿರೋಳೊ. ಸುಸಮ ಸ್ವರಾಜ್‌ಗಿಂತ ನಮ್ಮ ವಿಮಲಾಗೌಡನೇ ಬ್ಯೂಟಿಫುಲ್ ಗರ್ಲು. ಈ ತರ ಇರುವಾಗ, ನೀವು ಅದ್ಯಂಗೆ ಆ ಉತ್ತರ ಭಾರತದ ಪೊಲಿಸ್ ಫೆಲೊಗಳನ್ನ ದೊಡ್ಡಮನುಸ್ರು ಅಂತ ತಿಳಕೊಂಡಿದ್ದಿರಿ?"


"ಅವುರಿದಕವುರು, ನಮ್ಮಿದಕೆ ನಾವು ಬುಡ್ಯ ಹೋಗ್ಲತ್ಗ."

"ಬುಡದಿಲ್ಲ ದೊಡಪ್ಪ, ನಾವು ಯಾರಿಗೂ ಕಡಿಮೆ ಇಲ್ಲ. ನಾವು ಇರೋ ಜಾಗ ಯಾವ ಪ್ರದೇಶಕ್ಕೂ ಕಡಿಮೆ ಇಲ್ಲ. ಅದ್ಕೆ ನಮ್ಮ ಜನ ನೀರು ನೆರಳು ಇಲ್ದೆ ಇದ್ರೂ ಇದ್ದೂರಲ್ಲೇ ಇರ್ತರೆ. ಯಾಕಂದ್ರೆ ನಿಮ್ಮೂರಿಗಿಂತ ನಮ್ಮೂರೆ ಚಂದ ಅಂದಕಂಡಿರದ್ರಿಂದ."

"ನಿನಿಗೆ ಮಾತು ಕಲಿಸಕ್ಕಾಗಲ್ಲ ಹೋಗ್ಲ" ✿

ಹುಟ್ಟು ಮತ್ತು ಪ್ರೇಮ ▸▸▸

ಆತ ತುಂಬ ಖಾಸಗಿ ಮನುಷ್ಯ, ತನ್ನ ಬಗ್ಗೆ ಕೂಡ ಯೋಚಿಸುವುದೇ ಇಲ್ಲ ಎನ್ನುವಷ್ಟು ವಿನಯದ ಮನುಷ್ಯ. ...ವನ ಹೆಂಡತಿ ಗಮನಿಸಿದಂತೆ, ಅವತ್ತು ಅವನು ಸ್ವಲ್ಪ ಚಡಪಡಿಸುತ್ತಿದ್ದ. ಯಾಕೆಂದು ಅವಳಿಗೆ ಅಸ್ಪಷ್ಟವಾಗಿ ...ೂತ್ತಿತ್ತು. ಬೆಳಗ್ಗೆ ಐದೂವರೆಗೇ ಎದ್ದ ಅವನು ಮೂಡಣವನ್ನು ನೋಡುತ್ತಾ ನಿಂತ; ಸೂರ್ಯನನ್ನು ಹೀರಿಕೊಳ್ಳುವವನಂತೆ, ...ಳಗಿನ ಹಿತವಾದ ಗಾಳಿಯನ್ನು ತನ್ನ ಜೀವಕ್ಕಾಗಿ ಶೇಖರಿಸಿಕೊಳ್ಳುವವನಂತೆ ಕಾಣುತ್ತಿದ್ದ. ಬೆಳಗಿನಿಂದ ಮೌನವಾಗಿದ್ದ ...ಸೆಯಲ್ಲಿ ಸುಮಾರು ಎಂಟು ಗಂಟೆಗೆ ಫೋನ್ ರಿಂಗ್ ಆಯಿತು. ಅವನು ಬೆಚ್ಚಿದಂತೆ ಕಂಡ. ಹುಬ್ಬು ಗಂಟಿಕ್ಕಿ ...ತ್ತಿಗೆ, 'ಯಾರು ನೋಡ್ತೀಯಾ' ಅಂದ. ಫೋನ್ ಅವನಿಗೆ ಬಂದಿತ್ತು. ಎಂದೂ ಫೋನ್ ತೆಗೆದುಕೊಳ್ಳದ ಆತ ಸ್ವಲ್ಪ ...ತರದಿಂದ ತೆಗೆದುಕೊಂಡ. ಅದು 'ಮಲ್ಲಿಕಾ'ಳ ಫೋನ್.




ಮೂವತ್ತು ವರ್ಷದಿಂದ ವರ್ಷಕ್ಕೊಮ್ಮೆ ಏಪ್ರಿಲ್ 4 ರಂದು 'ಶುಭಾಶಯಗಳು', ಎಂದಷ್ಟೇ ...ೇಳುವ ಮಲ್ಲಿಕಾ, ಅವನ ಕಣ್ಣಲ್ಲಿ ತೆಳ್ಳಗೆ ಅಶ್ರು ಬರಿಸಿದವು. ಅವತ್ತು ತನ್ನ ಹುಟ್ಟುಹಬ್ಬವನ್ನು ...ಬ್ಬವಾಗಿ ಆಚರಿಸುವ ಧೈರ್ಯ ಅವನಿಗಿರಲಿಲ್ಲ; ಆ ಬಗ್ಗೆ ಹೆಂಡತಿ ಮಾತಾಡುತ್ತಿರಲಿಲ್ಲ. ಬೆಳಗ್ಗೆ ...ನ್ನ ಅಲ್ಮೇರಾ ತೆಗೆದರೆ ಅಲ್ಲಿ ಹೊಸ ಶರ್ಟ್ ಇತ್ತು. ಎಂಟು ಗಂಟೆಗೆ ಮಲ್ಲಿಕಾಳ ಫೋನ್. ದಿನ ...ರಿಪಕ್ವಗೊಂಡಂತೆ ಮತ್ತೊಂದು ವರ್ಷ ತನ್ನ ಅಸ್ಥಿಯಲ್ಲಿ, ರಕ್ತದಲ್ಲಿ ಸಂಚರಿಸುತ್ತಿತ್ತು. ಆತನಿಗೆ ಆ ...ಗ್ಗೆ ಹೆಮ್ಮೆಯಾಗಲಿ, ಶಂಕೆಯಾಗಲಿ ಇಲ್ಲ. ಕೋಟ್ಯಾನುಕೋಟಿ ಪಶುಪಕ್ಷಿ ಮರಗಿಡಬಳ್ಳಿಗಳೆಲ್ಲ ...ನಗಳಲ್ಲಿ, ನಿಮಿಷಗಳಲ್ಲಿ, ವರ್ಷಗಳಲ್ಲಿ ಬದುಕುತ್ತವೆ. ಆ ಬಗ್ಗೆ ತೀವ್ರವಾಗಿ ಚಿಂತಿಸಲು, ತನ್ನ ...ುಟ್ಟುಹಬ್ಬ ಕುರಿತು ಬಹುಮುಖ್ಯ ಘಟನೆಯೆಂದು ಚಿಂತಿಸಲು ನಾನ್ಯಾರು? ಎಲ್ಲ ಜೀವಿಗಳಿಗಿಂತ ...ಾನು ಯಾವ ರೀತಿಯಲ್ಲಿ ಭಿನ್ನ ಅಥವಾ ಉತ್ತಮ? ಎಂದು ಎಷ್ಟೇ ಚಿಂತಿಸಿದರೂ ಕಾಲ ...ರಿಯುತ್ತಿರುವುದು, ವರ್ಷಗಳು ಅರ್ಥಪೂರ್ಣವಾಗಿ ಅಥವಾ ವ್ಯರ್ಥವಾಗಿ ಚಲಿಸಿ ...ಮ್ಮರೆಯಾಗುತ್ತಿರುವುದು ಅವನಿಗೆ ಗೊತ್ತಿತ್ತು. ಮನುಷ್ಯ ಅನೇಕ ಸ್ತರದಲ್ಲಿ ಬದುಕುತ್ತಾನೆ. ತನಗೆ ಗೊತ್ತಿಲ್ಲದೇ ...ದುಕುತ್ತಾನೆ; ಇತರರನ್ನು ಸಂಪರ್ಕಿಸಿ ಬದುಕುತ್ತಾನೆ; ಒಬ್ಬಂಟಿಯಾಗಿ ಬದುಕುತ್ತಾನೆ. ಕಾಲದ ಉಪಟಳವನ್ನು ...ವನು ಎದುರಿಸುತ್ತಾನೆ-ಏಕಾಂಗಿಯಾಗಿ, ಎಲ್ಲರೊಂದಿಗೆ ಚರ್ಚಿಸಿ, ಎಲ್ಲರಿಗೆ ತನ್ನ ಅನುಭವದ ಬಗ್ಗೆ ನಂಬಿಕೆ ...ಮೂಡಿಸಿ ಅಥವಾ ತಾನು ಹೇಳಿದ್ದು ಯಾರಿಗೂ ಪೂರ್ತಿ ಅರ್ಥವಾಗಿಲ್ಲ ಎಂದು ನಿರಾಶೆ ಅನುಭವಿಸಿ ಬದುಕುತ್ತಾನೆ.

ಆತನಿಗೆ ನಿಜಕ್ಕೂ ಇದು ವಿಚಿತ್ರವೆನ್ನಿಸಿತು. ಮಲ್ಲಿಕಾ ವರ್ಷಕ್ಕೊಮ್ಮೆ ಏಪ್ರಿಲ್ 4 ರಂದು ಬೆಳಗ್ಗೆ ಫೋನ್ ...ಮಾಡಿದಾಗ ಯಾಕೆ ಖುಷಿಯಾಗಬೇಕು? ತನ್ನ ಪತ್ನಿ, ಮಕ್ಕಳು ತನ್ನ ಅಲ್ಮೇರಾದಲ್ಲಿ ಹೊಸ ಅಂಗಿ ಇಟ್ಟದ್ದು ನೋಡಿ ...ಯಾಕೆ ಖುಷಿಯಾಗಬೇಕು? ಇದಕ್ಕೆ ಅವನಲ್ಲಿರುವ ವಿವರಣೆ ಬಹು ಸರಳವಾಗಿದೆ. ಯಾರೂ ತನ್ನ ಹುಟ್ಟಿದಹಬ್ಬ ...ಚರಿಸಬಾರದೆಂಬುದು ಆತನ ನಂಬಿಕೆಯಾದರೂ ಯಾರಾದರೊಬ್ಬರು ತನ್ನ ಬಗ್ಗೆ ಇವತ್ತು ಯೋಚಿಸುತ್ತಿದ್ದಾರೆ ...ನ್ನುವುದು ಸಂತೋಷ ಕೊಡುತ್ತದೆ.

ಇದು ಅಷ್ಟು ಕ್ಲಿಷ್ಟ ವಿಷಯವಲ್ಲ. ಮನುಷ್ಯ ತನ್ನ ಅಂತರಾಳದಲ್ಲೇ ಅಡಗಿಹೋಗಿರುತ್ತಾನೆ; ತನ್ನ ವೃತ್ತಿ, ಪರಿಸರ, ಸ್ನೇಹಿತರು, ಶತ್ರುಗಳು ಎಲ್ಲರೂ ಅವನನ್ನು ಚಿಂತನೆಗೆ ಹಚ್ಚುವುದರ ಜೊತೆಗೇ ತನ್ನಲ್ಲಿರುವ ಗುಪ್ತ ಆಶೆಗಳು, ನೆನಪಾಗುತ್ತಿರುವ ರಸಗಳಿಗೆಗಳು, ಮರೆಯಾಗದ ನೋವುಗಳು, ಮುಜುಗರಗಳು ಅವನ ಯೋಚನೆಗೆ ವಸ್ತುಗಳಾಗಿರುತ್ತವೆ. ಅವನು ಇನ್ನೊಬ್ಬರೊಂದಿಗೆ ಮಾತಾಡುತ್ತಿದ್ದರೂ ಏನು ಮಾತಾಡುತ್ತಿದ್ದೇನೆಂದು ಗಮನವಿರುವುದಿಲ್ಲ; ಆತನ ಮಾತನ್ನು ಇನ್ನೊಬ್ಬ ಕೇಳಿಸಿಕೊಳ್ಳುತ್ತಿರುವಂತೆ ತೋರಿಸಿಕೊಂಡರೂ ಆತ ನಿಜಕ್ಕೂ ಕೇಳುತ್ತಿರುವುದಿಲ್ಲ. ವ್ಯಕ್ತಿಗಳ ನಡುವೆ ಗೋಡೆಗಳೇ ಎದ್ದುಬಿಟ್ಟಿರುತ್ತವೆ. ಆದ್ದರಿಂದ ಮನುಷ್ಯ ತನ್ನೆದುರಿನ ಒಂದು ವಸ್ತುವನ್ನು ಅಥವಾ ವ್ಯಕ್ತಿಯನ್ನು ನೋಡಲು ಪ್ರಯತ್ನಪಡಬೇಕಾಗುತ್ತದೆ; ನಿಜಕ್ಕೂ ನೋಡುವುದು, ಸ್ಪರ್ಶಿಸುವುದು, ಮಾತಾಡಿಸುವುದು ಮಾತ್ರ ವಸ್ತು ಅಥವಾ ವ್ಯಕ್ತಿಯ ಬಗ್ಗೆ ತಿಳಿವಳಿಕೆ, ಪ್ರೀತಿ ಹುಟ್ಟಿಸಬಲ್ಲದು. ಬೆಳಗ್ಗೆ ಒಬ್ಬ ಎದ್ದು 'ಇವತ್ತು ಗೆಳೆಯನ ಹುಟ್ಟುಹಬ್ಬ' ಎಂದು ನೆನೆದು ಅವನನ್ನು ಸಂಪರ್ಕಿಸುವುದು ಕೇವಲ ಒಂದು gesture ಆಗಿ ಉಳಿಯುವುದಿಲ್ಲ, ತಮ್ಮಿಬ್ಬರ ಗೆಳೆತನದ ಒಂದು ಹೆಜ್ಜೆ ಅದು; ಇಬ್ಬರೂ ಒಂದು ವರ್ಷ ಕಳೆದ, ಇನ್ನೊಂದು ವರ್ಷಕ್ಕೆ ಕಾಲಿಡುವ ಕ್ರಿಯೆ ಕೂಡ.

'ನಾನು ನಾಳೆ ಊರಲ್ಲಿರೋಲ್ಲ' ಎಂದು ಒಬ್ಬ ಹೇಳಿದ. 'ನಾಳೆ ನಿನ್ನ ಹುಟ್ಟುಹಬ್ಬ' ಅಂದೆ. 'ಅದಕ್ಕೇ ನಾನು ಯಾರಿಗೂ ಸಿಗೋಲ್ಲ' ಅಂದ. ನಾನು ನಕ್ಕು ಹೇಳಿದೆ: "ನಾನು ಎಷ್ಟೋ ವರ್ಷ ನಿನ್ನಂತೆಯೇ ವರ್ತಿಸುತ್ತಿದ್ದೆ. ಆದರೆ ಯಾರೋ ಗೆಳೆಯ ನನಗೆ ಶುಭಾಶಯ ಹೇಳಿದಾಗ ಒರಟಾಗಿ ವರ್ತಿಸಿದರೂ ಅಂತರಂಗದಲ್ಲಿ ಮುದಗೊಳ್ಳುತ್ತಿದ್ದೆ. ಹುಟ್ಟುಹಬ್ಬ ಆಚರಿಸುವುದು, ಆಚರಿಸದಿರುವುದು, ನಿನ್ನಂತೆ ಆಡುವುದು, ಏನೂ ಆಗಿಲ್ಲವೆಂಬಂತೆ ಇದ್ದುಬಿಡುವುದು, ಅದೊಂದು ರಾಷ್ಟ್ರೀಯ ಹಬ್ಬವೆಂಬಂತೆ ಮೂರ್ಖವಾಗಿ ಸಂಭ್ರಮಗೊಳ್ಳುವುದು... ಎಲ್ಲವೂ ಸಮಾನವಾಗಿ ವ್ಯರ್ಥ. ಸಮಾನವಾಗಿ gestures. ನಾವು ನಮ್ಮ ಅಂತರಾಳಕ್ಕೆ ಪ್ರಾಮಾಣಿಕವಾಗಿರುವುದನ್ನು ಕಲಿಯಬೇಕು; ನಮ್ಮ ಬಗ್ಗೆ ಸರಿಯಾದ ದಿನಗಳಿದಂತೆ ... ಆಗ ಇನ್ನೊಬ್ಬರನ್ನು ಕಾಣುವುದನ್ನು, ತಿಳಿದುಕೊಳ್ಳುವುದನ್ನು ನಿಲುವು ತೆಗೆದುಕೊಳ್ಳುವುದನ್ನು ಕಲಿಯಬೇಕು. ಆಗ ಇನ್ನೊಬ್ಬರನ್ನು ಕಾಣುವುದನ್ನು, ತಿಳಿದುಕೊಳ್ಳುವುದನ್ನು ಕಲಿಯುತ್ತೇವೆ...." ಎಂದು ಏನೇನೋ ಹೇಳಲು ಪ್ರಯತ್ನಿಸಿದೆ. ಆದರೆ ಎಲ್ಲದರ ಸಾರಾಂಶ ನಮ್ಮ ಹುಟ್ಟುಹಬ್ಬದಂದು ಇತರರು ನಮ್ಮ ಇರುವಿಕೆಯನ್ನು ಗುರುತಿಸುವುದು.

–ಏಪ್ರಿಲ್ 16, 1997



ಸ್ವಯಂ ಸುಪಾರಿ!

ಮನುಷ್ಯನ ಸ್ವಭಾವವೇ ವಿಚಿತ್ರ.

ಕೆಲವರು ಇರುತ್ತಾರೆ. ತಪ್ಪು ಮಾಡುತ್ತಾರೆ. ಹಾಗೆ ಮಾಡುತ್ತಿರುವಾಗಲೇ ಸಿಕ್ಕಿಹಾಕಿಕೊಳ್ಳುತ್ತಾರೆ. ಆದರೂ ಅಂಜುವುದಿಲ್ಲ ಅಳುಕುವುದಿಲ್ಲ 'ತಾವು ತಪ್ಪೇನೂ ಮಾಡಿಲ್ಲ' ಎಂದು ಸಾಧಿಸುತ್ತಾರೆ. 'ತಾವು ಮಾಡಿದ್ದೇ ಸರಿ' ಎಂದು ವಾದಿಸುತ್ತಾರೆ. ಇನ್ನು ಕೆಲವರು ಇರುತ್ತಾರೆ. ಅವರೂ ತಪ್ಪು ಮಾಡುತ್ತಾರೆ. ಆದರೆ ಯಾರ ಕೈಗೂ ಸಿಕ್ಕಿಬೀಳುವುದಿಲ್ಲ. ತಾವು ಸಭ್ಯರು, ಮರ್ಯಾದೆವಂತರು ಎಂದೆಲ್ಲ ಮೆರೆಯುತ್ತಾರೆ. ಎಲ್ಲರೂ ಇವರಂತೆಯೇ ಇರುವುದಿಲ್ಲ. ತಪ್ಪು ಮಾಡುತ್ತಾರೆ. ಸಿಕ್ಕಿ ಹಾಕಿಕೊಳ್ಳುವುದಿಲ್ಲ. ಆದರೆ ಪಾಪಪ್ರಜ್ಞೆ ಅವರನ್ನು ಕಾಡುತ್ತದೆ. ನೈತಿಕತೆ ಎನ್ನುವುದು ಯದ್ವಾತದ್ವಾ ತೊಂದರೆ ಕೊಡುತ್ತದೆ. ಕೊಲಂಬಿಯಾದ ಈರ್ವರು ಕ್ರೈಸ್ತ ಸನ್ಯಾಸಿಗಳಿಗೆ ಹಾಗೇ ಆಗುತ್ತಿದೆಯಂತೆ. ಅವರಿಗೋ ಕಟ್ಟಾ ಬ್ರಹ್ಮಚಾರಿಗಳಾಗಿರಬೇಕೆಂಬ ಆಸೆ. ಛಲದಂಕ ಮಲ್ಲರಂತೆ



ಹಾಗೆ ಇರಲು ಸತತ ಪ್ರಯತ್ನಿಸಿದರಂತೆ. ಆದರೆ ಹಾಳಾದ ಕ್ಯುಪಿಡ್ ದೇವತೆ ಕಾಟ ಕೊಡಲು ಪ್ರಾರಂಭಿಸಿದಳಂತೆ. ಅವಳ ಕಾಟ ತಡೆಯಲಾರದ ಹಂತ ತಲುಪಿದಾಗ ಹೋಗಬಾರದ ಕಡೆ ಹೋಗಲೇಬೇಕಾದ ಅನಿವಾರ್ಯತೆ ಉದ್ಭವಿಸಿದಂತೆ. ಅಲ್ಲಿಗೆ ಯಾಕೆ ಹೋಗಬೇಕಾಗಿತ್ತು? ಕ್ಯುಪಿಡ್ ದೇವತೆಯು ದೃಷ್ಟಿಬೀರಿದ ಕ್ರೈಸ್ತ ಸನ್ಯಾಸಿನಿಯರು ಅಲ್ಲೇ ಇರಲಿಲ್ಲವೆ ಎಂದರೆ ಇರಲೇ ಇಲ್ಲ ಅಂತ ಅಲ್ಲ, ತಾವು ಬೀಳುವ ಪಾಪಕೂಪಕ್ಕೆ ಅವರನ್ನು ಬೀಳಿಸಬಾರದು ಎಂಬ ಧಾರ್ಮಿಕ ದೃಷ್ಟಿ ಅದಕ್ಕೆ ಅಡ್ಡ ಬಂದಿರಬಹುದು. ಕೈಗೆ ಎಟುಕುವಂತೆಯೇ ಇದ್ದ ಹಣ್ಣನ್ನು ಬಿಟ್ಟು ಬಜಾರಿನ ಹಣ್ಣು ತಿಂದರು. ಒಮ್ಮೆ ತಿಂದ ಮೇಲೆ ಮತ್ತೊಮ್ಮೆ ರುಚಿ ನೋಡಬೇಕು, ಮಗದೊಮ್ಮೆ ಆಸ್ವಾದಿಸಬೇಕು ಎನ್ನಿಸಿರಬೇಕು. ರುಚಿ ನೋಡುತ್ತಲೇ ಬಂದರು. ಹೀಗೇ ಮುಂದುವರೆಸುತ್ತಿದ್ದರೋ ಏನೋ. ಆದರೆ ಏಡ್ಸ್ ಮಾರಿ ಮೈ ದುಂಬಿದಳು!

ವಿಷಯ ತಿಳಿದಾಗ ಧರ್ಮಗುರುಗಳಿಬ್ಬರಿಗೂ ಬರಸಿಡಿಲು ಬಡಿದಂತಾಯಿತು. ದಯಾಮಯನಾದ ಏಸು ಪ್ರಭುವಿಗೆ ಮೋಸ ಮಾಡಿದೆವು ಎಂದೇ ಅವರು ಭಾವಿಸಿದರು. ಬದುಕೇ ಬೇಡವಾಯಿತು. ತಮ್ಮ ಇರುವಿಕೆಯೇ ಜಿಗುಪ್ಸೆ ತಂದಿತು. ಇನ್ನು ಬದುಕಿರಬಾರದು ಎಂದು ನಿರ್ಧರಿಸಿದರು. ಆತ್ಮಹತ್ಯೆ ಮಾಡಿಕೊಳ್ಳಲು ಬೆಟ್ಟದ ತುದಿಗೆ ಏರಿದರು. ಅಲ್ಲಿ ದೊಡ್ಡ ಕಂದಕ ಇತ್ತು. ಅದಕ್ಕೆ ಹಾರಲು ಸಿದ್ಧರಾದರು. ಆಳವಾದ ಕಂದಕ ನೋಡಿದರು. ಪಾತಾಳದಂತಿದ್ದ ಕಂದಕ. ಭಯ ತಂದಿತು. ಅಲ್ಲಿಂದ ಒಳಕ್ಕೆ ಬೀಳಲು ಹೆದರಿಕೆ ಆಯಿತು. ಬದುಕನ್ನು ತ್ಯಜಿಸಬೇಕು ಸರಿ. ಆದರೆ ಕಂದಕಕ್ಕೆ ಬೀಳಲು ಭಯ. ಪಾಪಕ್ಕೆ ಪ್ರಾಯಶ್ಚಿತ್ತ ಹೇಗೆ ಎಂಬ ಚಿಂತೆ ಕಾಡಿತು. ದಯಾಮರಣ ನೀಡಿ ಎಂದು ವೈದ್ಯರನ್ನು ಕೇಳುವಂತಿಲ್ಲ, ಹಾಗೆ ಕೇಳಿದರೂ ಕಾರಣ ತಿಳಿದು ಕಠಿಣ ಶಿಕ್ಷೆಗೆ ಒಳಪಡಿಸಬಹುದೇ ಪರಂತು ಸಾವು ನೀಡುವುದಿಲ್ಲ, ಅಳೆದು ಸುರಿದರು. ಕೊನೆಗೆ ಒಂದು ನಿರ್ಧಾರಕ್ಕೆ ಬಂದರು. ಅದೇ ಸ್ವಯಂ ಸುಪಾರಿ! ತಮ್ಮ ಕೊಲೆಗೆ ತಾವೇ ಸುಪಾರಿ ನೀಡುವುದು! ಇದೇ ಸರಿಯಾದ ಮಾರ್ಗ ಎಂದು ತೀರ್ಮಾನಿಸಿದರು.

ಆಶ್ಚರ್ಯ ಎನಿಸಬಹುದು. ಆದರೆ ಇದು ಸತ್ಯಸ್ಯಸತ್ಯ ಕೊಲಂಬಿಯಾದ ನ್ಯಾಯಾಲಯದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ!

ನ್ಯಾಯಾಲಯಕ್ಕೆ ಬರಲು ಕಾರಣ ಏನು? ಸುಪಾರಿ ಕೊಲೆಗಾರರೇ ಮಾಹಿತಿ ನೀಡಿದರೋ? ಪೊಲೀಸರೇ ಪತ್ತೆ ಹಚ್ಚಿದರೋ ಎಂಬುದರ ವಿವರ ತಿಳಿದುಬಂದಿಲ್ಲ. ಆದರೆ ತಮ್ಮ ಕೊಲೆಗೆ ತಾವೇ ಸುಪಾರಿ ನೀಡಿದ್ದು ಇದೇ ಪ್ರಥಮ ಇರಬಹುದು!



ಅಣಕ

ತಾಳ್ಮೆ ಇರಲಿ ಸ್ವಾಮಿ

ಯಡ್ಯೂರಪ್ಪನವರು ಕರೆದಿದ್ದ ಉಪಾಹಾರ ಕೂಟಕ್ಕೆ ಹೋದರೆ ಹಿಂದೆ ಮಾಡಿದಂತೆ ಈಗಲೂ ಅಲ್ಲಿಂದ ನೇರ ರೆಸಾರ್ಟ್‌ಗೆ ಅಟ್ಟಿಕೊಂಡು ಹೋಗಬಹುದು ಎಂಬ ಆತಂಕ ಒಂದು ಕಡೆ. ಭ್ರಷ್ಟಾಚಾರದ ವಾಸನೆ ಮೂಗಿಗೆ ಬಡಿಯುತ್ತಾ ಇದೆ ಹೋಗಲಾರೆ ಅನ್ನೋಣ ಅಂದರೆ ಹಾಜರಾದವರ ಪಟ್ಟಿ ಬೇರೆ ಮಾಡುತ್ತಾ ಕುಂತವ್ರಂತೆ. ವೃಥಾ ಅವರ ಸಿಟ್ಟಿಗೆ ಗುರಿಯಾಗಬೇಕಲ್ಲ ಎಂಬ ಚಿಂತೆ ಮತ್ತೊಂದು ಕಡೆ. ಈ ನಡುವೆ ಅವರ ಬೆಂಬಲಿಗರು ಬೇರೆ 'ಬರ್ಲೇಬೇಕು' ಅಂತಾವ ಫೋನಿನ ಮೇಲೆ ಫೋನು ಹಚ್ಚುತ್ತಾ ಕುಂತವ್ರೆ. ಹೆಂಗೋ ತಪ್ಪಿಸಿಕೊಳ್ಳೋಣ ಅಂದ್ರೆ ಕರ್‍ಕೊಂಡು ಹೋಗೋಕೆ ಅಂತ ಜನಾನೂ ಬುಟ್ಟವ್ರೆ. ಅವ್ರೂ ಒಳ್ಳೆ ಸೀಳ್ನಾಯಿತರ ಕಾಯ್ತಾ ಕುಂತವೆ. ಏನು ಮಾಡುವುದು ಅನ್ನೋದು ಕೆಲವು ಶಾಸಕರ ಚಿಂತೆ ಆಗಿದೆಯಂತೆ.

ಇತ್ತ ಯಡ್ಯೂರಪ್ಪನವರದ್ದೇ ಬೇರೆ ರೀತಿಯ ಚಿಂತೆ. ಹುಟ್ಟಿದ ಹಬ್ಬದ ನೆಪದಲ್ಲಿ ಶಕ್ತಿ ಪ್ರದರ್ಶನ ಮಾಡಿದರೂ ಹೈಕಮಾಂಡು ಕಣ್ಣು ಕಿವಿ ಇಲ್ಲದಂಗೆ ಆಡುತ್ತಾ ಇದೆ. ಅವರೇ ಖುದ್ದು ಆಹ್ವಾನ ಪತ್ರಿಕೆ ಕೊಟ್ಟಿದ್ದರೂ, ಅದೆಷ್ಟು ಜನ ಬರುತ್ತಾರೋ ತಿಳಿಯದಾಗಿದೆ. ಸಾಲದ್ದಕ್ಕೆ ಹೈಕಮಾಂಡು ಬಣ ರಾಜಕೀಯ ಮಾಡುತ್ತಿದ್ದೀಯೆ ಎಂದು ಗರಂ ಬೇರೆ ಆಗಿದೆಯಂತೆ. ಅವರ ಸುಮ್ಮಾನ ನೋಡಿ. ಸುಮ್ಮನೆ ಇದ್ದರೆ ಕ್ಯಾರೆ ಅಂತಾನೂ ಅನ್ನಲ್ಲ. ಹಿಂಗಾದರೂ ಗಮನ ಸೆಳೆಯೋಣ ಅಂದ್ರೆ ಹಿಂಗೆ ಕೊಂಕು ನುಡೀತವೆ. ಇದರ ಜೊತೆಗೆ ಆ ಹಾಳಾದ ಗೋವಿಂದ ಕಾರಜೋಳ ಬೇರೆ ಮಧ್ಯಾಹ್ನ ಊಟಕ್ಕೆ ಶಾಸಕರನ್ನ ಕರೆದವನಂತೆ. ಅಲ್ಲಿಗೇನಾದರೂ ಹೆಚ್ಚಿನ ಜನ ಹೋದರೆ ಗತಿ ಏನು. ತನಗೆ ಹೋಗಲು ಇಷ್ಟವಿಲ್ಲ, ಹಾಗೆ ಮಾಡಿದರೆ ತನ್ನ ನಿಜವಾದ ಬೆಂಬಲಿಗರೆಷ್ಟು ಅನ್ನುವುದು ಬಯಲಾಗುತ್ತೆ, ತಾನು ಹೋದರೆ ಯಾರ ಕಡೆ ಎಷ್ಟು ಶಾಸಕರು ಇದ್ದಾರೆ ಎಂಬುದು ಯಾರಿಗೂ ತಿಳಿಯುವುದಿಲ್ಲ, ಹೋಗಬೇಕೊ? ಬೇಡವ್ರೊ? ಎಂಬ ತೊಳಲಾಟದಲ್ಲಿ ಸನ್ಮಾನ್ಯರು ಮುಳುಗಿದ್ದರಂತೆ.

ಯಡ್ಯೂರಪ್ಪನವರು ಈ ರೀತಿ ಆಲೋಚನಾ ಪರವಾಗಿದ್ದರೆ ಸದಾನಂದ ಗೌಡರದ್ದೇ ಇನ್ನೊಂದು ರೀತಿಯ ಪರಿಪಾಟಲು, ಹಾಳಾದವನು ತನ್ನ ಅಧಿಕಾರದ ಅವಧಿಯಲ್ಲಿ ಲಿಂಗಾಯತ ಮಠಗಳಿಗೆ ಹಣದ ಹೊಳೆಯನ್ನೇ ಹರಿಸಿದ್ದ. ಜನಾಂಗವೇನೂ ಇದರಿಂದ ಉದ್ಧಾರ ಆಗಲಿಲ್ಲ ನಿಜ. ಆದರೂ ಏಕೈಕ ವೀರಶೈವ ನಾಯಕ ಅನ್ನಿಸಿಕೊಂಡ. ನಾನು ಉಡಿಕಡಿ ಮಠಗಳಿಗೆ ಇದೇ ಕೆಲಸವನ್ನು ಮಾಡಿದರೂ ಒಳ್ಳೆ ಬಡ್ಜೆಟ್ ಕೊಟ್ಟಿದ್ದೀಯೆ ಅನ್ನುತ್ತಾರೆಯೇ ಹೊರತು ಯಾರೂ ದಲಿತ, ಹಿಂದುಳಿದ ನಾಯಕ ಅನ್ನುವಲ್ರು. ಸಾಲದ್ದಕ್ಕೆ ಯಡ್ಯೂರಪ್ಪ ಯಾರಿಗೂ ಎಪ್ಪತ್ತು ವರ್ಷ ಆಗುವುದೇ ಇಲ್ಲವೇನೋ ಅನ್ನುವ ಹಾಗೆ, ಹುಟ್ಟಿದ ಹಬ್ಬದ ನೆಪದಲ್ಲಿ ಶಕ್ತಿ ಪ್ರದರ್ಶನ ಮಾಡುತ್ತಾ ಕುಂತವ್ನೆ. ಮಹಿಳಾ ಸಮಾವೇಶ ಅಂತ ಮಾಡಿ ಕೇಂದ್ರದಿಂದಲೇ ನಿರ್ಮಲಾ ಸೀತಾರಾಮನ್ ಕರೆಸಿ ಇದನ್ನು ಹೇಗೋ ಶಮನ ಮಾಡಿಯಾಯಿತು. ಇದು ಅರಿವಿಗೆ ಬರುತ್ತಿದ್ದಂತೆ ಇನ್ನೊಂದು ಜಾಡು ಹಿಡಿದವ್ನೆ. ನಡೆದಾಡುವ ದೇವರಿಗೆ ಒಂದು ನೂರಾ ಐದು ವರ್ಷಗಳು ತುಂಬಿತು ಅನ್ನೊ ನೆಪದಲ್ಲಿ ಬೆಂಗಳೂರಿನಲ್ಲಿ 'ಗುರುವಂದನಾ' ಮಾಡುತ್ತಾನಂತೆ. ಇಪ್ಪತ್ತು ಲಕ್ಷ ಜನ ಸೇರಿಸುತ್ತಾನಂತೆ. ಹುಚ್ಚು ಹೊಳೇಲಿ ನೀರು ಹರಿದಂಗೆ ಹಣ ಕೊಚ್ಚಿ ಹೋಗುತ್ತೆ ನಿಜ. ಅವನಿಗೇನು ಕಡಿಮೆಯಾಗಿರುವುದು? ಇಂತಹ ನೂರು


ನಾರಾಯಣ್ ವಿದಾಯ ಹೇಳಿದ್ದು ಸಂತೋಷದ ಸಂಗತಿ

ಏಪ್ರಿಲ್ 11ರ ಸಂಚಿಕೆಯಲ್ಲಿ ಪ್ರಕಟಗೊಂಡ 'ಮಕ್ಕಳ ಊಟ ಕದ್ದವರಿಗೆ ಬಡ್ತಿ' ಸುದ್ದಿ ಓದಿ ಆತಂಕದ ಜೊತೆಗೆ ನಾವು ಇರುವುದು ಮನುಷ್ಯರು ನಡೆಸುವ ಸರ್ಕಾರದಲ್ಲಿಯೇ? ಎಂಬ ಸಂದಿಗ್ಧತೆಯಲ್ಲಿ ಸಿಲುಕಿದಂತಾಯ್ತು. ಈ ಕೇಸರಿ ಪಕ್ಷ ಯಾವಾಗ ರಾಜ್ಯದಲ್ಲಿ 'ಸರ್ಕಾರ' ರಚಿಸಿತೋ ಆಗಿನಿಂದಲೇ ಸರ್ಕಾರದ ಪ್ರಮುಖ ಹುದ್ದೆಯಲ್ಲಿರುವವರು ಸರ್ಕಾರದ ಯೋಜನೆಗಳ ಹಣವನ್ನು ಕಳ್ಳತನ ಮಾಡುವುದು, ನೈಸರ್ಗಿಕ ಸಂಪತ್ತನ್ನು ಬಗೆಯುವುದು, ಇದರಿಂದ ಜೈಲು ಪಾಲಾಗುವುದು ಸಾಮಾನ್ಯವಾಯಿತು. ಇದೀಗ ನಗರ ಮತ್ತು ಹಳ್ಳಿಗಳ ಅಸಹಾಯಕ ಕುಟುಂಬಗಳ ಮಕ್ಕಳಿಗೆ ಅಂಗನವಾಡಿಗಳ ಮೂಲಕ ಪೌಷ್ಟಿಕ ಆಹಾರ ಒದಗಿಸಬೇಕಾದ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರು ತಮ್ಮ ಹಣದ ತೆವಲಿಗಾಗಿ ಖಾಸಗಿಯವರಿಗೆ ವಹಿಸಿ ಕಳಪೆ ಮಟ್ಟದ ಆಹಾರ ಒದಗಿಸಿ ಆ ಮಕ್ಕಳ ಅನಾರೋಗ್ಯಕ್ಕೆ ಕಾರಣರಾಗಿದ್ದಾರೆಂದು ತಿಳಿದು ವಿಷಾದವಾಯಿತು. ಇಂತಹ ಕಳಪೆಮಟ್ಟದ ಆಹಾರವನ್ನು ಅಂಗನವಾಡಿಗಳಿಗೆ ಸರಬರಾಜುಗೊಳಿಸುವಲ್ಲಿ ಸಹಕರಿಸಿದ ಇಲಾಖೆ ಮುಖ್ಯಸ್ಥರು ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದು, ಇವರನ್ನು ಜೈಲಿಗಟ್ಟಬೇಕಾದ ಈ ಮಾನಗೆಟ್ಟ ಸರ್ಕಾರ ಬಡ್ತಿ ನೀಡುತ್ತಿದೆ ಎಂದರೆ ನಿಜಕ್ಕೂ ಇದು ರಾಕ್ಷಸ ಸರ್ಕಾರವೇ ಸರಿ.

ರಾಜ್ಯದ ಬರ ಪರಿಸ್ಥಿತಿಯನ್ನು ಎದುರಿಸಲು ಕೋಟ್ಯಂತರ ರೂ.ಗಳನ್ನು ಬಿಡುಗಡೆಗೊಳಿಸಿರುವುದಾಗಿ ಬಡಾಯಿ ಕೊಚ್ಚಿಕೊಳ್ಳುವ ಸರ್ಕಾರ, ಯಾವ ಬರ ಕಾಮಗಾರಿಗಳನ್ನು ಆರಂಭಿಸದೇ ಬರೀ 'ಬಂಡಲ್ ಬಡಾಯಿ ಮಹದೇವ'ವಾಗಿದೆ. ಇದು ನಿಜಕ್ಕೂ ಕಳ್ಳರ, ಸುಳ್ಳರ ಸರ್ಕಾರವಾಗಿದೆ. ಇಂತಹ ಸರ್ಕಾರದ ಅಮಾನವೀಯ ಘನ ಸಾಧನೆಗಳ ಬಗ್ಗೆ ಜನರ ಮುಂದಿಡುತ್ತಿರುವ ಪತ್ರಿಕೆ ಬಳಗದ ಕಾರ್ಯ ಅಭಿನಂದನೀಯ.

-ದೇವೇಂದ್ರ ಶರ್ಮಾ, ಶಹಾಪುರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.




ದಕ್ಷಿಣ ಕನ್ನಡಿಗರು ವೇದಿಕೆಯಡಿ ಬ್ಯಾರಿ ಭಾಷೆಯ ಪ್ರಥಮ ಚಿತ್ರ 'ಬ್ಯಾರಿ' ನೋಡುವ ಅವಕಾಶ ಮಾರ್ಚ್ 18ರಂದು ವಾರ್ತಾ ಇಲಾಖೆಯಲ್ಲಿ ಒದಗಿ ಬಂತು. ಖ್ಯಾತ ಉದ್ಯಮಿ ಉಮರ್‌ಟೀಕೆ ಪ್ರಾಯೋಜಕತ್ವದಲ್ಲಿ ನಡೆದ ಕಾರ್ಯಕ್ರ ಬೆಂಗಳೂರಿನ ಮಟ್ಟಿಗೆ ಅತ್ಯಂತ ವಿಶಿಷ್ಟ ಹಾಗೂ ಸಂದರ್ಭೋಚಿತವಾಗಿತ್ತು. ಈ ಚಿತ್ರದ ಕಥಾವಸ್ತು ಸಾರಾ ಅಬೂಬಕರ್‌ರವರ ಕಾದಂಬರಿಯಿಂದ ಆಯ್ದದ್ದು ಎನ್ನುವ ತಾರ್ಕಿಕ ವಿವಾದ ನನಗಂತೂ ಬಾಲಿಶವೆನಿಸಿತು. ಒಂದು ಕಥಾವಸ್ತು ಅಂದರೆ ತಲಾಖ್‌ನ ವಿಮರ್ಶಾತ್ಮಕ ಒಳನೋಟ ಅದ್ಯಾವಾಗಲೋ ಮುಸ್ಲಿಮ್ ಸಮುದಾಯದೆಲ್ಲೆಡೆ ಎಳೆ ಮಗುವಿಗೂ ಪರಿಚಿತವಾದ ವಿಷಯ! ಹಾಗಿರುವಾಗ ಅದನ್ನು ಕೃತಿಚೌರ್ಯವೆಂದು ವಾದಿಸುವುದಕ್ಕೆ ಮುಂದಾಗಿರುವವರು ಕಾಲಘಟ್ಟದ ಗತಿಯನ್ನು ಅರ್ಥೈಸಿಲ್ಲ ಎಂದು ಅನ್ನಿಸುತ್ತದೆ. ಇದಕ್ಕೆ ಪೂರಕವಾಗಿ ಲಂಕೇಶ್ ಪತ್ರಿಕೆಯಲ್ಲಿ ಮೂಡಿಬಂದ ಬಶೀರ್ ಲೇಖನ ಅರ್ಥವತ್ತಾಗಿದ್ದು, ಅವರ ಲವಲವಿಕೆಯ ಒಳನೋಟಗಳು ರಸವತ್ತಾಗಿದ್ದಾವೆ.

ಹೌದು, ನಮ್ಮಲ್ಲಿ ಚಿಂತನೆಗಳನ್ನು, ವಿಚಾರಗಳನ್ನು ಕದ್ದು, ಆರಿಸಿ ಸಿನಿಮಾ ಮಾಡುವವರು, ಡಾಕ್ಯುಮೆಂಟರಿಗೆ ಕೈ ಹಚ್ಚುವವರು ಬೇಕಾಗಿದ್ದಾರೆ. ಅವರೆಲ್ಲರಿಗೂ ನಮ್ಮ ಬೆಂಬಲವಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಒಂದು ರೀತಿಯ ರಿನ್ನಾಸೆನ್ಸ್ ಮೂವ್‌ಮೆಂಟ್ ನಡೆಯಲಿ ಎಂದು ಹಾರೈಸುವೆವು.

-ಅಕ್ಬರ್ ಅಲಿ ಹಾಗೂ ಮನೆಯವರು, ಬೆಂಗಳೂರು

ಸಿನಿಮಾ ನಿರ್ದೇಶಕ ನಾರಾಯಣ್‌ರವರು ಚಿತ್ರ ನಿರ್ಮಾಣಕ್ಕೆ ಮತ್ತು ನಿರ್ದೇಶನಕ್ಕೆ ವಿದಾಯ ಹೇಳಿದ್ದು ಕನ್ನಡದ ಪ್ರೇಕ್ಷಕರಿಗೆ ಸಂತೋಷದ ಸಂಗತಿ. ಸಿನಿಮಾ ನೋಡುಗರನ್ನು ಯಾವುದೋ ಅಡಗೂಲಜ್ಜಿ ಕಥೆಗೆ ಕೊಂಡೊಯ್ಯುತ್ತಿದ್ದ ಇವರು ನಿರ್ದೇಶನ, ನಿರ್ಮಾಣಕ್ಕೆ ವಿದಾಯ ಹೇಳಿದ್ದು ನನಗಂತೂ ವೈಯಕ್ತಿಕವಾಗಿ ಖುಷಿ ತಂದಿದೆ. ಹಾಗೆಯೇ



ಸ್ಪಷ್ಟೀಕರಣ

ದಿ. 11.4.2012 ರ ತಮ್ಮ ಪತ್ರಿಕೆಯಲ್ಲಿ 'ಸತ್ತವರ ನೆರಳಲ್ಲಿ ಸಾ.ರಾ. ಗೋವಿಂದು'ಎಂಬ ಶೀರ್ಷಿಕೆಯಡಿ ಡಾ. ರಾಜ್‌ಕುಮಾರ್ ಮತ್ತು ಡಾ. ವಿಷ್ಣುವರ್ಧನ್ ಪ್ರತಿಸ್ಪರ್ಧಿಗಳು ಎಂದು ಇಬ್ಬರ ಅಭಿಮಾನಿಗಳ ನಡುವೆ ನಾನು ರಾಡಿಯೆಬ್ಬಿಸಿದ್ದೆ ಎಂತಲೂ, ಇತ್ತೀಚೆಗೆ ಡಾ. ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಆಚರಿಸುವ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ "ಇತ್ತೀಚೆಗೆ ಬೆಂಗಳೂರಿನ ಒಳಗೆ ವಿಷ್ಣುವರ್ಧನ್ ಪ್ರತಿಮೆಗಳು ಹೆಚ್ಚಾಗುತ್ತಿವೆ. ಆದಷ್ಟು ಅದನ್ನು ಅವಾಯ್ಡ್ ಮಾಡಿಸಬೇಕು" ಎಂದು ತಿಳಿಸಿರುವುದಾಗಿ ಪ್ರಕಟಿಸಿದ್ದೀರಿ. ಇದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂತಹ ವಿಷಯ.



ಈ ಹಿಂದೆಯೂ ಸಹ ಡಾ. ವಿಷ್ಣುವರ್ಧನ್‌ರವರು, ಡಾ. ರಾಜ್‌ಕುಮಾರ್‌ರವರ ಪ್ರತಿಸ್ಪರ್ಧಿ ಎಂದು ನಾನು ಯಾವತ್ತೂ ಪುಕಾರೆಬ್ಬಿಸಿರುವುದಿಲ್ಲ, ಇತ್ತೀಚೆಗೆ ನಡೆದ ಸಭೆಯಲ್ಲಿಯೂ ಸಹ ಮೇಲೆ ತಿಳಿಸಿದಂತೆ ಯಾವುದೇ ರೀತಿಯ ಹೇಳಿಕೆಗಳನ್ನಾಗಲೀ ಅಥವಾ ಮಾತುಗಳನ್ನಾಗಲೀ ಆಡಿರುವುದಿಲ್ಲ, ಹೀಗಿರುವಾಗ ತಮ್ಮ ಘನತೆವೆತ್ತ ಪತ್ರಿಕೆಯಲ್ಲಿ ಮೇಲೆ ತಿಳಿಸಿದಂತೆ ತಾವು ಪ್ರಕಟಿಸಿರುವ ವಿಷಯ ಶುದ್ಧ ಸುಳ್ಳು. ಒಂದು ವೇಳೆ ತಾವು ಪ್ರಕಟಿಸಿರುವ ವರದಿಯನ್ನು ಯಾವುದೇ ಸಭೆ-ಸಮಾರಂಭದಲ್ಲಾಗಲೀ ಅಥವಾ ಇನ್ನಿತರೇ ಸಂದರ್ಭದಲ್ಲಿ ಮಾತನಾಡಿರುವುದನ್ನು ಸಾಬೀತುಪಡಿಸಿದರೆ ಸಾರ್ವಜನಿಕರಲ್ಲಿ ನಾನು ಕ್ಷಮೆ ಕೇಳಲು ಸಿದ್ಧನಿದ್ದೇನೆ.

ನಾನು ಡಾ. ರಾಜ್‌ಕುಮಾರ್‌ರವರ ಅಭಿಮಾನಿಯಾಗಿದ್ದು, ಅವರ ವ್ಯಕ್ತಿತ್ವ, ನಡೆ-ನುಡಿಗೆ ಮಾರುಹೋಗಿ ಅವರನ್ನು ಈ ನಾಡಿನ ಸಾಂಸ್ಕೃತಿಕ ರಾಯಭಾರಿ ಎಂದು ಪರಿಗಣಿಸಿ, ಅವರಲ್ಲಿರುವ ಸದ್ಗುಣಗಳನ್ನು ಸಮಾಜದಲ್ಲಿ ಪ್ರತಿಯೊಬ್ಬರು ಅಳವಡಿಸಿಕೊಳ್ಳುವ ಮೂಲಕ ಅವರನ್ನು ಗೌರವಿಸುವುದರ ಜೊತೆಗೆ ಉತ್ತಮ ಸಮಾಜವನ್ನು ಕಟ್ಟಲು ಅನುವಾಗುವಂತೆ ನಡೆದುಕೊಳ್ಳುತ್ತಿದ್ದೇವೆ. ಜೊತೆಗೆ ನಾವು ಡಾ. ವಿಷ್ಣುವರ್ಧನ್‌ರವರನ್ನು ಯಾವತ್ತೂ ಪ್ರತಿಸ್ಪರ್ಧಿಯಾಗಿ ಭಾವಿಸಿಲ್ಲ, ಡಾ. ವಿಷ್ಣುವರ್ಧನ್‌ರವರನ್ನು ಅತ್ಯುತ್ತಮ ಕಲಾವಿದರೆಂದು ಭಾವಿಸಿ, ನಮ್ಮದೇ ಆದ ಗೌರವವನ್ನು ಅವರಿಗೆ ಸಮಯ ಸಿಕ್ಕಾಗಲೆಲ್ಲಾ ಸೂಚಿಸಿದ್ದೇನೆ. ಹೀಗಿರುವಾಗ ತಮ್ಮ ಪತ್ರಿಕೆಯಲ್ಲಿ ಮೇಲ್ಕಾಣಿಸಿದ ವಿಷಯ ಪ್ರಕಟಗೊಂಡ ನಂತರ ಅನವಶ್ಯಕವಾಗಿ ಪರಸ್ಪರ ಹಿರಿಯ ಕಲಾವಿದರುಗಳ ಅಭಿಮಾನಿಗಳಲ್ಲಿ ಗೊಂದಲ ಸೃಷ್ಟಿಯಾಗಿದೆ. ಇದರಿಂದಾಗಿ ನನ್ನ ಮನಸ್ಸಿಗೆ ತುಂಬಾ ಆಘಾತವೂ ಸಹ ಆಗಿದ್ದು, ಇನ್ನು ಮುಂದೆ ಇಂತಹ ಅಚಾತುರ್ಯಗಳು ನಡೆಯದಂತೆ ತಾವು ನಿಗಾವಹಿಸಬೇಕೆಂದು ಕೋರುತ್ತೇನೆ.

ಈ ಗೊಂದಲವನ್ನು ನಿವಾರಿಸಲು ಮುಂದಿನ ತಮ್ಮ ಪತ್ರಿಕೆಯಲ್ಲಿ ಅದೇ ಗಾತ್ರದಲ್ಲಿ ಅದೇ ಭಾವಚಿತ್ರದೊಂದಿಗೆ ನನ್ನ ಈ ಸ್ಪಷ್ಟೀಕರಣವನ್ನು ಪ್ರಕಟಿಸಬೇಕೆಂದು ತಮ್ಮಲ್ಲಿ ವಿನಂತಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಸಾ.ರಾ. ಗೋವಿಂದು

ವೇಶ ಮಾಡಿದರೂ ಕೊಳ್ಳೆ ಹೊಡೆದಿರೋ ಹಣದ ಸ ಧೂಳೂ ಹೋಗುವುದಿಲ್ಲ. ಇದಕ್ಕೆ ಪ್ರತಿತಂತ್ರ ಸುವುದು ಹೇಗೆ ಎಂಬ ಆಲೋಚನೆಯಲ್ಲಿ ಅವರು ರಾಗಿದ್ದರು.

ಪಾಪ ತಂತ್ರ ಪ್ರತಿತಂತ್ರ ರೂಪಿಸೋಕೆ ಎಷ್ಟು ಸಮಯ ಸಾಲದು. ಅಂತಹದ್ದರಲ್ಲಿ ಭೀಕರ ಬರಗಾಲ ದೆ. ದನಕರುಗಳಿಗೆ ಮೇವಿಲ್ಲ, ಕುಡಿಯಲು ನೀರಿಲ್ಲ, ಗುಳೆ ಹೋಗ್ತಿದಾರೆ ಎಂದೆಲ್ಲ ಕೆಲವರು ಹಾರಾಡ್ತ ರೀ ಸ್ವಾಮಿ, ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ಯ ಸಮಸ್ಯೆ ಬಗೆಹರಿಯಲಿ. ಆಮೇಲೆ ಅವರಿಗೆ ಏನು ಕೆಲಸ? ನಿಮ್ಮ ಕಡೆ ಗಮನ ಕೊಟ್ಟೇ ಸುತ್ತಾರೆ..... ಅಲ್ಲೀತನಕ ಜನ ಬದುಕಿರಬೇಕಲ್ಲ ಅಂದ್ರೆ... ನು ಬ್ರಹ್ಮನೇನ್ರಿ ಸಾಯುವವರನ್ನ ಬದುಕಿಸೋಕೆ... ಂದೂ....

ದರ ಇಳಿಕೆ ನಾಟಕ

ಬೆಲೆಗಳು ಗಗನಕ್ಕೆ ಏರುತ್ತಿವೆ. ಯಾವ ಸರ್ಕಾರಕ್ಕೂ ಚಿಂತೆ ಇಲ್ಲ. ತನ್ನದೆಲ್ಲಿ ಮಡಗಲಿ ಅಂತಾವ ತಾವೂ ಹೇಳ್ತಾ ಕುಂತವೆ. ಆದರೆ 'ದೀದಿ' ಮಾತ್ರ ಇದಕ್ಕೆ ವಾದ. ಯಾರು 'ದೀದಿ' ಅಂದಿರಾ... ರಾಜಕೀಯದಲ್ಲಿ ಗಾಲು ಇಡುತ್ತಿರುವ ಹಾಗಿದೆ. 'ಅಮ್ಮಾ' ಅಂದರೆ ಚಕ್ಕೆಲ್ಲ ಇರುವವರು ಒಬ್ಬರೇ. ಅವರೇ ಜಯಲಲಿತಾ. ನ್' ಅಂದರೆ ಒಬ್ಬರೇ ಬೆಹೆನ್ನು, ಅವರು ಮಾಯಾವತಿ. 'ದೀದಿ' ಅಂದರೆ ಒಬ್ಬರೇ ಒಬ್ಬರು ಇರೋದು. ಮಮತಾ ಬ್ಯಾನರ್ಜಿ. ಅವರಿಗೆ ಬಡಬಗ್ಗರನ್ನು ಕಂಡರೆ ಏನು ಮಮಕಾರ ಅಂತೀರಿ. ಈ ಸಲ ರೈಲ್ವೆ ಗಡ ಪತ್ರ ಮಂಡಿಸಿದರಲ್ಲ, ಆಗೇನು ಆಯಿತು ರಿ. ಕಳೆದ ಏಳೆಂಟು ವರ್ಷದಿಂದ ಪ್ರಯಾಣ ದರ ಲ್ಲ ಅಂತ ತಲೆ ಕೆಟ್ಟ ಮಂತ್ರಿ ಪ್ರಯಾಣ ದರ ದ. ಅಲ್ಲಾ ಅಲ್ಲಿರೋ ಮಂತ್ರಿ ದೀದಿ ಪಕ್ಷದೋನು. ಹಿಂಗೆ ಮಾಡವನಲ್ಲ ಅಂತಾವ ಬಡವರ ಬಂಧು ಗೆ ಉರಿದುಹೋಯ್ತು. ಅವನ್ನ ಕಿತ್ತೆಸೆದರು. ಅರೆ ನಿ ಅಲ್ವೆ ಮಂತ್ರಿಮಂಡಳದಲ್ಲಿ ಯಾರು ಇರಬೇಕು, ರು ಇರಬಾರದು ಅನ್ನುವುದನ್ನು ನಿರ್ಧರಿಸುವುದು ... ಇದು ಕೂಡಾವಳಿ ಸರ್ಕಾರ ಕಣ್ರಿ. ರೈಲ್ವೆ ಖಾತೆಗೆ ನೇ ಪ್ರಧಾನಿ. ಅವನ್ನ ಒದ್ದೋಡಿಸಿ ಬ್ಯಾರೆಯೋರ ಸಿದ್ರು. ಅವನೇನು ಮಾಡ್ದ... ಏರಿಸಿದ್ದನಲ್ಲ ಪ್ರಯಾಣ ಅದೂ ಎಷ್ಟು ಅಂತೀರಿ, ಕಿ.ಮೀ.ಗೆ 2 ಪೈಸೆ, ಬಾರಿ ದುಬಾರಿ ಆಯ್ತು ಅಂತಾವ ಹಿಂದಕ್ಕೆ ಂಡ. ರೈಲ್ವೆ ಹಳಿಗಳು ತುಕ್ಕು ಹಿಡೀತಾ ಕುಂತವಂತೆ, ಗಿಗಳು ಲಡಾಸ್ ಆಗವಂತೆ. ಅವನ್ನೆಲ್ಲ ಸರಿ ತಬೇಕಾದ್ರೆ ದರ ಹೆಚ್ಚಿಸಲೇಬೇಕು ಅಂತೆಲ್ಲ ಕೆಲವರು ಹೇಳ್ತಾರೆ. ಹೆಂಗೋ ಓಡ್ತಾ ಅವೆಲ್ಲ ಹಂಗೇ ಓಡ್ತಿರಲಿ ಬಿಡಿ. ಇನ್ನು ಓಡಿಸಲು ಸಾಧ್ಯವೇ ಇಲ್ಲ ಅನ್ನೊ ಕಾಲ ಬಂದಾಗ ನೋಡ್ಕಿಳಾನ. ಬಡವರಿಗೆ ತೊಂದರೆ ಆಗಬಾರದು ಅನ್ನೋದು ದೀದಿ ಮನಸ್ಸು. ಅದಕ್ಕೆ ಹೊಸ ಮಂತ್ರಿಯ ಕಾರ್ಯವೈಖರಿ ಅವರಿಗೆ ಮೆಚ್ಚುಗೆ ಆಗಿರಲೇಬೇಕು!

ಅಲ್ಲಿ ರೈಲ್ವೆ ಮಂತ್ರಿ ತೃಣಮೂಲ ಕಾಂಗ್ರೆಸ್‌ನವರು ಅಂತೀರಿ. ಅವನು ಪ್ರಯಾಣ ದರ ಏರಿಸುವುದಕ್ಕೆ ಮುಂಚಿ ದೀದಿಗೆ ಒಂದು ಮಾತು ತಿಳಿಸಬೇಕಾಗಿತ್ತಲ್ವಾ ಅಂತ ಅಂತೀರಿ ಅನ್ನೋದು ಗೊತ್ತು, ದೀದಿ ಅಂದರೆ ಹಾದಿಬೀದಿ ಜನ ಏನ್ರಿ... ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಆಗಿರೋರು. ಸುಲಭಕ್ಕೆ ಅವರು ಎಲ್ಲರಿಗೂ ಸಿಗೋಲ್ಲ, ಕೇಂದ್ರ ಮಂತ್ರಿ ಆದರೂ ಅಷ್ಟೇಯ. ಹಿಂದಿನ ಮಂತ್ರಿ ನೋಡೋಕೆ ಆಗಿರಲಿಲ್ಲವಂತೆ. ಅದ್ಕೆ ದೀದಿಗೆ ಬೇಕಾದವರ ಹತ್ತಿರ ಸುದ್ದಿ ಮುಟ್ಟಿಸಿದನಂತೆ. ದೀದಿ ಕಿವಿಗೂ ಇದು ಹೋಗಿತ್ತಂತೆ. ಆಗಲೇ ಪ್ರಯಾಣ ದರ ಏರಿಸಕೂಡದು ಅನ್ನಬಹುದಿತ್ತಲ್ಲಾ ಅಂತ ಕೇಳ್ತಾ ಕುಂತವರಿಗೆ ಏನು ಹೇಳೋದು ಹೇಳಿ. ಅಲ್ಲರೀ ದರ ಏರಿಸುವವರಿಗೆ ಸುಮ್ಮನಿದ್ದು ಆಮೇಲೆ ದರ ಏರಿಕೆ ಕೂಡದು ಎಂದೆಲ್ಲ ರಂಪಾಟ ಮಾಡಿ ಇಳಿಸಿದರೆ ಅದಕ್ಕೊಂದು ಇದು. ಆಗಲೇ ಅಲ್ಲವೇನ್ರಿ, ಬಡಬಗ್ಗರ ಮೇಲಿನ ದೀದಿ ಕರುಣೆ ಜಗಜ್ಜಾಹೀರು ಆಗೋದು.....


ದೀದಿಯ ದರ ಇಳಿಕೆ ಕೆಲವು ಪತ್ರಿಕೆಗಳಿಗೆ ನಾಟಕವಾಗಿ ತೋರಿದೆಯಂತೆ. ಆ ಪತ್ರಿಕೆಗಳ ಚಾಳೀನೆ ಹಾಗಂತೆ. ಅದು ಯಾವುದೋ ಆಸ್ಪತ್ರೆಯಲ್ಲಿ ಒಂದೇ ದಿನ ಹದಿನೈದೋ ಇಪ್ಪತ್ತೋ ಹಸುಗೂಸುಗಳು ಸತ್ತವಂತೆ. ಅದೂ ದೀದೀದೇ ತಪ್ಪು ಅಂತವಂತೆ. ಅವರೇನು ಡಾಕ್ಟರೇನ್ರಿ ಸಾವು ತಡೆಯೋಕೆ. ಯಾವ್ನೋನೋ ಯಾವ್ಳೋಳ್ನೋ ರೇಪ್ ಮಾಡಿದ್ನಂತೆ. ಅವನು ದೀದಿ ಸಂಬಂಧಿಕ ಅಂತೆ. ಅದ್ಕೂ ಆಕೆಯದ್ದೇ ತಪ್ಪು ಅಂತ ಬರೀತವಂತೆ. ಇವರೇನು 'ಹೋಗು ಕಂದ ರೇಪ್ ಮಾಡಿ ಬಾ' ಅಂತ ಹೇಳಿ ಕಳಿಸಿದ್ರಾ ಅಂತೀನಿ. ದೀದಿ ಕುರಿತು ಹೀಯಾಳಿಕೆ ಮಾತು ಬರೆಯೋದೆ ಅವರ ಕಸುಬು ಆಗಿದೆಯಂತೆ. ಪತ್ರಿಕೆಗಳ ಸಾವಿರಾರು ಪ್ರತಿಗಳನ್ನು ಸರ್ಕಾರ ಲೈಬ್ರರಿಗಳಿಗೆ ತರಿಸಿಕೊಳ್ತಾ ಇದೆ. ಹಂಗಾದ್ರೂ ಹಿಂಗೆಲ್ಲ ಬರೀತಾ ಅವಲ್ಲ ಅಂತ ದೀದಿಗೂ ರೇಗಿಹೋಯಿತಂತೆ. ಅವರೇನು ಮಾಡಿದರಪ್ಪ ಅಂದರೆ ತಮ್ಮ ವಿರುದ್ಧ ಬರೆಯುತ್ತಿರುವ ಪತ್ರಿಕೆಗಳ ಪಟ್ಟಿ ತಯಾರು ಮಾಡಿದರಂತೆ. ಈ ಪತ್ರಿಕೆಗಳನ್ನು ಯಾವ ಸರ್ಕಾರಿ ಸಂಸ್ಥೆಗಳೂ ತರಿಸಬಾರದು ಅಂತಾವ ಆರ್ಡ್ರು ಮಾಡಿದ್ದಾರಂತೆ. ಸರ್ಕಾರಿ ನೌಕರನೂ ಇಂತಹ ಪತ್ರಿಕೆಗಳನ್ನು ಓದಲೇಕೂಡದು ಎಂದೂ ಆರ್ಡ್ರು ಮಾಡಿದ್ದಾರೋ ಏನೋ ತಿಳೀದು! ಆಮ್ ಆದ್ಮಿ ತೆರಿಗೆ ಹಣ ಹೀಗೆ ಪತ್ರಿಕೆಗಳಿಗೆ ಪೋಲಾಗಬಾರದು ಎಂದು ಹಿಂಗೆ ಮಾಡಿರಬಹುದೋ ಏನೊ!

❖


'ಜನ್ಮ' ರಹಸ್ಯವೇನು?




ನಿರ್ಮಾಪಕ ಆನೇಕಲ್ ಬಾಲರಾಜ್ ಈಗ ಭಯಂಕರ ಖುಷಿಯಲ್ಲಿದ್ದಾರೆ. ಅದಕ್ಕೆ ಕಾರಣ ಅವರ ಮಗ ಸಂತೋಷ್ ನಟಿಸಿರುವ 'ತಂಬಿ ಊರುಕ್ಕು ಪುದುಸ್ಸು' ಎಂಬ ತಮಿಳು ಚಿತ್ರ ಮತ್ತು ಪಂಚವಾರ್ಷಿಕ ಯೋಜನೆಯಂತಾಗಿದ್ದ 'ಜನ್ಮ' ಎಂಬ ಕನ್ನಡ ಸಿನಿಮಾ ಒಟ್ಟೊಟ್ಟಿಗೇ ಬಿಡುಗಡೆಯ ಹಂತದಲ್ಲಿರುವುದು. ಈ ಎರಡೂ ಚಿತ್ರಗಳನ್ನು ಸ್ವತಃ ಬಾಲರಾಜ್ ನಿರ್ಮಿಸಿದ್ದಾರೆ.



'ಕರಿಯ'ದಂಥ ಸೂಪರ್ ಹಿಟ್ ಚಿತ್ರ ಮಾಡಿ, ದರ್ಶನ್ ಮತ್ತು ಪ್ರೇಮ್ ಎಂಬ ಇಬ್ಬರು ಸ್ಟಾರ್‌ಗಳನ್ನು ಇಂಡಸ್ಟ್ರಿಗೆ ನೀಡಿದ ಬಾಲರಾಜ್ ತಮ್ಮ ಮಗನನ್ನೂ ಚಿತ್ರರಂಗದಲ್ಲಿ ನೆಲೆಯೂರಿಸಬೇಕು ಎಂದು ಕನಸು ಕಂಡವರು. ಈ ಕಾರಣಕ್ಕೇ ಐದು ವರ್ಷಗಳ ಹಿಂದೆ 'ಕೆಂಪ' ಎಂಬ ಚಿತ್ರವನ್ನು ತಾವೇ ನಿರ್ಮಿಸಿ ಮಗ ಸಂತೋಷ್‌ನನ್ನೇ ಹೀರೋ ಮಾಡಿದ್ದರು. ವೀರಪ್ಪನ್‌ನನ್ನು ಹಿಡಿಯಲು ಹೋದ ಎಸ್‌ಟಿಎಫ್‌ನವರು ಮಾಡಿದ ಅರಾಜಕತೆಯನ್ನು ಆಧರಿಸಿದ್ದ 'ಕೆಂಪ' ಸುಂದರವಾಗಿ ಮೂಡಿಬಂದಿದ್ದರೂ ಪ್ರೇಕ್ಷಕರು ಸಿನಿಮಾವನ್ನು ತಿರಸ್ಕರಿಸಿದ್ದರು. ಅಷ್ಟಕ್ಕೇ ಸುಮ್ಮನಾಗದ ಬಾಲರಾಜ್ ಮತ್ತೆ 'ಜನ್ಮ' ಎಂಬ ಚಿತ್ರವನ್ನು ಆರಂಭಿಸಿದ್ದರು. ಚಂದ್ರಚೂಡ್ ಚಕ್ರವರ್ತಿ ನಿರ್ದೇಶಿಸಿರುವ ಈ ಚಿತ್ರ ಶುರುವಾಗಿ ಭರ್ತಿ ಐದು ವರ್ಷ ಕಳೆದುಹೋಗಿದೆ. ಗಜಗರ್ಭದಲ್ಲಿ ಅಡಗಿದ್ದ ಈ ಚಿತ್ರಕ್ಕೆ ಕಡೆಗೂ 'ಜನ್ಮ'ವೆತ್ತುವ ಘಳಿಗೆ ಕೂಡಿಬಂದಿದೆ. ಇದೇ ತಿಂಗಳ 12ಕ್ಕೆ ಸಿನಿಮಾ ತೆರೆಗೆ ಬರುತ್ತಿದೆ.



ಗರ್ಭದೊಳಗಿರುವ ಮಗುವೊಂದರ ಕೈಗೆ ಮಚ್ಚು ನೀಡಿ ವಿಚಿತ್ರವಾಗಿ ಪಬ್ಲಿಸಿಟಿ ಮಾಡುತ್ತಿರುವ ಈ ಚಿತ್ರದ ಹಿಂದೆ ಏನೋ ನಿಗೂಢ ಅಡಗಿರುವುದಂತೂ ನಿಜ. ಈ ಚಿತ್ರದ ಟೈಟಲ್ 'ಜನ್ಮ'ವನ್ನು ಗೋರಿಯ ಮೇಲೆ ಬರೆಯಲಾಗಿದೆ. ಜೊತೆಗೆ ಡಾ.ರಾಜ್‌ಕುಮಾರ್ ಹುಟ್ಟು, ಸಾವಿನ ದಿನಾಂಕವನ್ನು ನಮೂದಿಸಲಾಗಿದೆ. ಈ ಚಿತ್ರದ ಮುಹೂರ್ತ ರಾಜ್ ಸಮಾಧಿಯ ಮುಂದೆ ನೆರವೇರಿತ್ತು, ರಾಜ್ ಅಂತಿಮ ಯಾತ್ರೆಯಲ್ಲಿ ನಡೆದ ದೊಂಬಿಯಲ್ಲಿ ಕಾಲು ಕಳೆದುಕೊಂಡಿದ್ದ ಯುವಕ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದ್ದ. 'ಗಾಜನೂರು' ಎಂದು ಬರೆದಿದ್ದ ಪೋಸ್ಟ್ ಬಾಕ್ಸ್‌ನಿಂದ ಚಿತ್ರದ ಸಿಡಿಗಳನ್ನು ತೆಗೆಯುವುದರ ಮೂಲಕ ಮೊನ್ನೆ ಆಡಿಯೋ ಬಿಡುಗಡೆ ಮಾಡಲಾಯಿತು. 'ಜನ್ಮ' ಚಿತ್ರದ ಮುಕ್ಕಾಲು ಪಾಲು ಚೆನ್ನೈನಲ್ಲೇ ಚಿತ್ರೀಕರಣಗೊಂಡಿದೆ. ಪಾರ್ವತಮ್ಮ ರಾಜ್‌ಕುಮಾರ್ ದುಃಖದಿಂದ ರೋದಿಸುತ್ತಿರುವ ದೃಶ್ಯಗಳನ್ನೂ ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಅಲ್ಲಿಗೆ 'ಜನ್ಮ' ಚಿತ್ರಕ್ಕೂ ರಾಜ್‌ಕುಮಾರ್‌ಗೂ ನೇರಾನೇರ ಸಂಬಂಧವಿದೆ ಅನ್ನೋದು ಪಕ್ಕಾ.



ಇವೆಲ್ಲ ಏನೇ ಆಗಲಿ, ಜನರ ಭಾವನೆಗಳನ್ನು ಕೆರಳಿಸುವ, ಘರ್ಷಣೆಗಳಿಗೆ ಕಾರಣವಾಗುವ ಅಂಶಗಳು ಚಿತ್ರದಲ್ಲಿ ಇರದಿದ್ದರೆ ಎಲ್ಲರಿಗೂ ಒಳಿತು.

❖

ಚೆಗೆ ರಾಜೇಂದ್ರ ಸಿಂಗ್ ಬಾಬುರವರ ವ್ಯಥೆಯನ್ನು 'ಪತ್ರಿಕೆ'ಯಲ್ಲಿ ಓದಿ ಸ್ಸಿಗೆ ತುಂಬಾ ನೋವಾಗಿದೆ. ಬಾಬುರಂಥ ನಿರ್ದೇಶಕರು ಕನ್ನಡಕ್ಕೆ ದಕ್ಕಿರುವುದು ಪ್ರೇಕ್ಷಕನ ಸೌಭಾಗ್ಯವೇ ಸರಿ. ಮರೆಯಲಾರದ ಚಿತ್ರಗಳನ್ನು ನೀಡಿದ ಬಾಬುರವರು ಬಂದದೆ ಚಿತ್ರರಂಗದಲ್ಲಿ ಮತ್ತೆ ಎದ್ದು ಬರಲೇಬೇಕು. ಆರೋಗ್ಯಕರವಾದ ಳನ್ನು ನೀಡಬೇಕೆಂದು ಈ ಪತ್ರಿಕೆಯ ಮುಖೇನ ಬಾಬುರಲ್ಲಿ ಕೇಳಿಕೊಳ್ಳುತ್ತೇನೆ.

-ಸಿ. ಶಿವಕುಮಾರ್, ತುಮಕೂರು

...ೃವಾರ ತಾತಯ್ಯನ ಮಠ ಮಾದರಿಯಾಗಬೇಕು

ಮಠಗಳು ಧರ್ಮಕಾರಣದಿಂದ ವಿಚಲಿತವಾಗಿ ರಾಜಕಾರಣಕ್ಕೆ ಹತ್ತಿರವಾಗುವ ಠ ಕಳೆದ ಐದಾರು ವರ್ಷಗಳಿಂದ ಹೆಚ್ಚಾಗುತ್ತಿದೆ. ಎಲ್ಲ ಭೌತಿಕ ಸುಖಗಳಿಂದ ಮರಿಯುವಂತೆ ಬದುಕಬೇಕೆನ್ನುವ ಹಂಬಲ ಹನಿಯುವವರೇ ಮಠಾಧೀಶರರಾದರೆ ನಿರ್ವಹಣೆಯ ಕ್ಷೇತ್ರಗಳೇ ಅದಲುಬದಲಾಗುವ ಅಪಾಯಗಳಿವೆ. ಮಠಗಳು ಅನುಯಾಯಿಗಳ ಮಾನಸಿಕ ಸ್ಥೈರ್ಯ ಮತ್ತು ನೈತಿಕತೆಯ ಬೆಂಗಾವಲಾಗಬೇಕೇ ತು ಒಂದು ಉದ್ಯಮದ ಹಾಗೆ ವ್ಯಾಪಿಸುವ ಅವಶ್ಯಕತೆಯಿಲ್ಲ. ಬಜೆಟ್ ಮಂಡನೆಯನ್ನು ಕಣ್ಣಗಲಿಸಿ ಕಾಯುವವರ, ಕಿವಿ ನಿಮಿರಿಸಿ ಕೇಳುವವರ ಲ್ಲಿ ಮಠಗಳು ನಿಲ್ಲಬಾರದು. ಅವುಗಳ ಕಾರ್ಯ ನಿರ್ವಹಣೆ ಅತ್ಯಂತ ವಿಕವಾಗಿರಬೇಕು. ರಾಜಕೀಯ ಮುಖಂಡರುಗಳು ನೀಡುವ ಹಣದಲ್ಲಿ ಮಠದ ಕ ಸ್ವರೂಪ ಬದಲಾಗಬಹುದೇ ಹೊರತು ಆಂತರಿಕ ತತ್ವಾದರ್ಶಗಳಲ್ಲ. ತ್ತೀಚಿನ ಬಜೆಟ್ ಮಂಡನೆಯಲ್ಲಿ ಕೈವಾರ ತಾತಯ್ಯನ ಮಠಕ್ಕೆ ನೀಡಲಾದ ಏ ಕೋಟಿ ಅನುದಾನವನ್ನು ಆ ಮಠ ಅತ್ಯಂತ ಸ್ಥಿತಪ್ರಜ್ಞೆಯಿಂದ ಹಿಂದಿರುಗಿಸಿ ಹಿರಿಮೆಯನ್ನು ಮೆರೆಯುವ ಜೊತೆಗೆ ಕೆಲ ಮಠಗಳಾದರೂ ಇಂದಿಗೂ ಸವನ್ನು ಉಳಿಸಿಕೊಂಡಿವೆ ಎನ್ನುವದನ್ನು ತೋರಿಸಿಕೊಟ್ಟಿದೆ. ಮೇಲ್ನೋಟಕ್ಕೆ ವದೋ ಒಂದು ಜಾತಿಗೆ ಸೀಮಿತವಾಗಿರುವ ಮಠ ಇದಾದರೂ ಸಾಧ್ಯವಾದ ಗೆ ಜಾತ್ಯತೀತ ನಿಲುವನ್ನು ಕಾಪಾಡಿಕೊಂಡು ಬಂದಿರುವದಿದೆ. ಈ ಮಠದ ಧಿಕಾರಿ ಎಮ್.ಆರ್.ಜಯರಾಮ ಹಾಗೆ ಮಾಡುವ ಮೂಲಕ ರಾಜ್ಯದ ಮಠಗಳಿಗೆ ಮಾದರಿಯಾಗಿದ್ದಾರೆ.

ಡಾ.ಎಸ್.ಬಿ.ಜೋಗುರ, ಧಾರವಾಡ

ಕೇಶ್ ಮೊಹಮ್ಮದ್ ಜಾನ್ ಅವರಿಗೆ ಸಾವಿರ ಅಭಿನಂದನೆಗಳು. ಹಾಗೆಯೇ ನ್ನು ಪರಿಚಯಿಸಿದ ಪಾರ್ವತೀಶ ಅವರಿಗೂ. ಇತಿಹಾಸದ ಸೂಕ್ಷ್ಮ ಮತ್ತು ಕ ಅರಿವು ಇಲ್ಲದೆ ಮಿದುಳು ತೊಳೆಯುವ ಪ್ರಚಾರ ಹಾಗು ಹಣಕ್ಕಾಗಿ ಸ ತಿರುಚುವ ಕೋಮುವಾದಿಗಳ ನಡುವೆ ಜಾನ್ ಅವರು ಒಂದು ರ್'. ತ್ರಿಕೆ ನಿಯಮಿತವಾಗಿ ಇಂಥ ಚೇತನಗಳನ್ನು ಪರಿಚಯಿಸಲಿ.

- ರವಿಕುಮಾರ್, ಹಾಸನ

ಮಾರ್ಚ್ 8, 2012ರ ಸಂಚಿಕೆಯಲ್ಲಿ ಪ್ರಕಟಗೊಂಡ ಶಿವಸುಂದರ್ ಅವರ ಅಂಬೇಡ್ಕರ ಅವರ ಅನ್ವೇಷಣೆಯಲ್ಲಿ' ಲೇಖನವನ್ನು ಪ್ರತಿಯೊಬ್ಬರೂ ...ಕಾದಂತಹದ್ದು, ಅದರಲ್ಲೂ ಶೋಷಿತ ಸಮುದಾಯಗಳ ಮತ್ತು ಅವುಗಳ ನಾಯಕರೆನಿಸಿಕೊಂಡವರು ಇದನ್ನು ಓದಲೇ ಬೇಕು.

ಪ್ರತಿವಾರದ 'ಚಾರ್ವಾಕ' ಸೂಪರ್ಬ್.

- ವಿ.ಆರ್.ಮೌರ್ಯ, ಬೆಂಗಳೂರು

'ನಕ್ಸಲ'ರೊಂದಿಗೆ ಸಂಪರ್ಕಗಳನ್ನು ಹೊಂದಿದ್ದಾರೆ ಎಂಬ ಶಂಕೆಯ ಮೇಲೆ ಬಂಧನಕ್ಕೊಳಗಾಗಿದ್ದ ಅನಿತಾ ಅವರು ಇತ್ತೀಚೆಗೆ ನಿರ್ದೋಷಿ ಎಂದು ಬಿಡುಗಡೆ ಆಗಿರುವುದು ಸ್ವಾಗತಾರ್ಹ. ಅನಿತಾಗೆ ತುಂಬಾ ಅನ್ಯಾಯವಾಗಿದೆ. ಅವರು ಹೇಳುವ ಜೈಲುವಾಸದ ಅನುಭವ ನಮ್ಮ ಪೊಲೀಸ್ ಮತ್ತು ಸಮಾಜದ ವಾಸ್ತವತೆಗೆ ಹಿಡಿದ ಕನ್ನಡಿ ಆಗುವುದರಲ್ಲಿ ಸಂಶಯವೇ ಇಲ್ಲ.



ಅನಿತಾ ಅವರು ಶಿವಮೊಗ್ಗದ ಪಂಚವಟಿ ಕಾಲೋನಿ ಮತ್ತು ಅನ್ಯಾಯದ ವಿರುದ್ಧ ನಡೆಸಿದ ಹೋರಾಟವನ್ನು ಮರೆಯಲು ಅಸಾಧ್ಯ.

- ವಿಷ್ಣುಶಂಕರ್, ಶಿವಮೊಗ್ಗ

ಉಡುಪಿ-ಚಿಕ್ಕಮಗಳೂರು ಉಪಚುನಾವಣೆಯಲ್ಲಿ ನಿಮ್ಮ ಪತ್ರಿಕೆಯು ಬಹಿರಂಗವಾಗಿ ಬೆಂಬಲಿಸಿದ ಸಜ್ಜನ ರಾಜಕಾರಣಿ ಜಯಪ್ರಕಾಶ್ ಹೆಗ್ಡೆಯವರು ನಿಜಕ್ಕೂ ಅಭಿನಂದನಾರ್ಹರು. ಚುನಾವಣೆಯಲ್ಲಿ ಗೆದ್ದು ಲೋಕಸಭೆಯಲ್ಲಿ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದ ಹೆಗ್ಡೆಯವರಿಗೆ ಅಭಿನಂದನೆಗಳು. ಹೆಗ್ಡೆ ಅವರ ಜಯಕ್ಕಿಂತ ಅವರು ಸ್ಪಷ್ಟ ಕನ್ನಡದಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದ್ದು ಅವರ ಬಗೆಗಿನ ಗೌರವವನ್ನು ಹೆಚ್ಚಿಸಿತು.

ಕರ್ನಾಟಕದಿಂದ ರಾಜ್ಯಸಭೆಗೆ ಅಭ್ಯರ್ಥಿಗಳನ್ನು ಆರಿಸುವಾಗ ಕನ್ನಡ ನೆಲ-ಜಲ-ನುಡಿ ಬಗ್ಗೆ ಗೌರವ-ಒಲುಮೆ-ಭಕ್ತಿ ಇರುವ ಕರ್ನಾಟಕದ ಅಭ್ಯರ್ಥಿಗಳನ್ನೇ ಆರಿಸಲು ನಾವು ಪ್ರತೀ ಬಾರಿ ಸೋಲುತ್ತಿದ್ದೇವೆ. ನಮ್ಮ ನಾಡು-ನುಡಿ ಬಗ್ಗೆ ಗೌರವವಿದ್ದಾಗಲೇ ಹೆಗ್ಡೆಯವರಂತೆ ಕನ್ನಡ ಕಹಳೆ ಮೊಳಗಿಸಲು ಸಾಧ್ಯ. ಇದು ಇತರರಿಗೆ ಮಾದರಿಯಾಗಲಿ ಎಂಬುದೇ ಆಶಯ.

- ಎನ್.ಶರವಣ ರಾಮಾಪುರ, ಬೆಂಗಳೂರು

ಲೀಲಾವತಿಯಂತಹ ಸಹೃದಯಿ ತಾಯಿಗೆ ಸರಿಯಾದ ಮಗನಾಗಿ ವಿನೋದ್‌ರಾಜ್ ಇರುವುದು ನಿಜಕ್ಕೂ ಹೆಮ್ಮೆಯ ವಿಷಯ. ತಾಯಿ ಬೆಳೆಸಿದಂತೆ ಮಕ್ಕಳು ಗುಣ ಹೊಂದಿರುತ್ತಾರೆ. ಈ ವಿಷಯ ಮಕ್ಕಳನ್ನು ಹೆಗ್ಗಣಗಳಂತೆ ಬೆಳೆಸುವವರಿಗೆ ಹೇಗೆ ತಿಳಿಯುತ್ತೆ? ವಿನೋದ್ ಮತ್ತು ಅವರ ತಾಯಿ ಲೀಲಾವತಿ ಅವರಿಗೆ ಒಳ್ಳೆಯದಾಗಲಿ.

- ರಮೇಶ್ ದೇವಿದಾಸ್, ಈ ಮೇಲ್ ಮೂಲಕ



ನನ್ನ ಪ್ರೀತಿಯ ಲಂಕೇಶ್ ವಾರ ಪತ್ರಿಕೆಯಲ್ಲಿ ಗೌರಿ ಅಕ್ಕನವರು 'ಕಂಡಹಾಗೆ'ಯಲ್ಲಿ ಬರೆದ 'ನೀಚತನದ ಪರಮಾವಧಿ' ತುಂಬ ಅದ್ಭುತವಾಗಿತ್ತು. ಹಾಗೆಯೇ ಹಸನ್ ನಯೀಂ ಸುರಕೋಡು ಅವರು ಬರೆದ 'ವಾಚಕವಾಣಿಯ ಮಹಿಮೆ' ಲೇಖನವೂ ತುಂಬಾ ಚೆನ್ನಾಗಿತ್ತು.

- ಅಬ್ದುಲ್ ಲತೀಫ್, ಈ ಮೇಲ್ ಮೂಲಕ

ಅಯ್ಯಯ್ಯೋ ಅಯ್ಯರ್



ಕಳೆದ ಬಾರಿ ಲಂಡನ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಆತ್ಮೀಯ ಸ್ನೇಹಿತೆಯರಾದ ನಾಯಕಿ ರಮ್ಯ ಮತ್ತು ನಿರ್ದೇಶಕಿ ರೂಪಾ ಅಯ್ಯರ್ ನಡುವೆ ಈಗ ಸಣ್ಣದೊಂದು ಬಿರುಕು ಕಾಣಿಸಿಕೊಂಡಿದೆ. ಈ ಹಿಂದೆ ರೂಪಾ ಅಯ್ಯರ್ ತಾವು ರಮ್ಯ ಮತ್ತು 'ನೆನಪಿರಲಿ' ಪ್ರೇಮ್ ಜೋಡಿಯನ್ನು ಹಾಕಿಕೊಂಡು 'ಚಂದ್ರ' ಎಂಬ ಚಿತ್ರವನ್ನು ನಿರ್ಮಿಸುವ ಬಗ್ಗೆ ಹೇಳಿಕೆ ನೀಡಿದ್ದರು. ಆ ಚಿತ್ರದ ಕಲಾವಿದರಿಗೆ ಮತ್ತು ತಂತ್ರಜ್ಞರಿಗೆ ಮುಂಗಡ ಹಣವನ್ನು ನೀಡಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದರು.

ಆದರೆ ಈಗ ರಮ್ಯ "ನಾನು ನಿನ್ನ ಚಿತ್ರದಲ್ಲಿ ನಾಯಕಿಯಾಗಿ ನಟಿಸಬೇಕೆಂದರೆ ನೀನು ನಾಯಕ ಪ್ರೇಮ್‌ನನ್ನು ಬದಲಾಯಿಸಬೇಕು. ಆತನ ಸ್ಥಾನದಲ್ಲಿ ಯಾರಾದರೂ ಪರಭಾಷೆಯ ನಾಯಕನನ್ನು ಹಾಕಬೇಕು" ಎಂದು ಷರತ್ತು ಹಾಕುತ್ತಿದ್ದಾಳಂತೆ. ಅದಕ್ಕೆ ರೂಪಾ ಅಯ್ಯರ್ "ಈ ಚಿತ್ರದ ಪಾತ್ರಕ್ಕೆಂದೇ ಪ್ರೇಮ್‌ಗೆ ಫೈಟಿಂಗ್ ಮತ್ತು ನಟನೆಯಲ್ಲಿ ವಿಶೇಷವಾದ ಟ್ರೈನಿಂಗ್ ಕೊಡಿಸಿದ್ದೇನೆ. ಈಗ ಆತನ ಜಾಗಕ್ಕೆ ಹೊಸಬನನ್ನು ತಂದರೆ ಅವನಿಗೆ ಟ್ರೈನಿಂಗ್ ಕೊಡಿಸಬೇಕಾಗುತ್ತದೆ. ಆಗ ಇಡೀ ಪ್ರಾಜೆಕ್ಟನ್ನು ಮುಂದೂಡಬೇಕಾಗುತ್ತದೆ. ಇದು ಸಾಧ್ಯವಿಲ್ಲ" ಎಂದಿದ್ದಾಳಂತೆ.

ಈ ಅಂತೆಕಂತೆಗಳಲ್ಲಿ ಎಷ್ಟು ನಿಜವೋ, ಎಷ್ಟು ಸುಳ್ಳೋ ಗೊತ್ತಿಲ್ಲ. ಆದರೆ ಈಗಾಗಲೇ ಹಲವಾರು ಹೊಸ ನಟರೊಂದಿಗೆ ನಟಿಸಿರುವ ರಮ್ಯಾ ಇಂತಹ ಕ್ಷುಲ್ಲಕ ಕಾರಣಕ್ಕೆ ಒಂದು ಪ್ರಾಜೆಕ್ಟ್‌ನಿಂದ ದೂರ ಸರಿಯುವಂತಹ ಹುಡುಗಿ ಅಲ್ಲ ಎಂಬುದು ಗೊತ್ತಿರುವವರು ರೂಪಾ ಅಯ್ಯರ್ ಸುಳ್ಳು ಹೇಳುತ್ತಿರಬೇಕೆಂದು ತರ್ಕಿಸುತ್ತಿದ್ದಾರೆ.

ಆದರೆ ಇದೀಗ ರಾಧಿಕಾ ಪಂಡಿತ್ ಮತ್ತು ಪ್ರಿಯಾಮಣಿ ಎಂಬ ನಟಿಯರ ಮನೆ ಬಾಗಿಲನ್ನು ತಟ್ಟುತ್ತಿರುವ ರೂಪಾ, ಒಂದುವೇಳೆ ಅವರಿಬ್ಬರು ತನ್ನ ಆಹ್ವಾನವನ್ನು ನಿರಾಕರಿಸಿದರೆ ತಾನೇ ಮುಖಕ್ಕೆ ಬಣ್ಣ ಹಚ್ಚಿಕೊಂಡು ನಟಿಸಲು ತಯಾರಾಗಿದ್ದಾರಂತೆ ಎಂಬ ಮಾತೂ ಕೇಳಿಬರುತ್ತಿದೆ.

ಕನ್ನಡ ಚಿತ್ರರಂಗಕ್ಕೆ ಇನ್ನೆಂತಹ ಅಪಾಯಗಳು ಕಾದಿವೆಯೋ, ಅಯ್ಯಯ್ಯೋ ಅಯ್ಯರ್!!

❖



3' ಸಿನಿಮಾದಲ್ಲಿ ಧನುಶ್ ಮತ್ತು ಶೃತಿ ಹಾಸನ್

ಧನುಶ್-ಐಶ್ವರ್ಯ ಕಬಾಬಿನಲ್ಲಿ ಶೃತಿ ಅಡ್ಡಿಯಾದಳೇ?



ಮದುವೆ ಸಂದರ್ಭದಲ್ಲಿ ಐಶ್ವರ್ಯಾ-ಧನುಶ್

ರಜನೀಕಾಂತ್ ಮಗಳಿಗೆ ಕೈಕೊಟ್ಟು ಕಮಲ್ ಹಾಸನ್ ಮಗಳ ಜೊತೆ ಧನುಶ್ ಚಕ್ಕಂದವಾಡುತ್ತಿದ್ದಾನೆ. ಇದರಿಂದ ಆತನ ಪತ್ನಿ ಐಶ್ವರ್ಯ ಕೋಪಗೊಂಡಿದ್ದರೆ ಸ್ವತಃ ರಜನೀಕಾಂತ್ ಕಂಗಾಲಾಗಿದ್ದಾರೆ... ಇಂತಹ ಸುದ್ದಿ ಈಗ ತಮಿಳುನಾಡಿನ ಪತ್ರಿಕೆಗಳಲ್ಲಿ ರಾರಾಜಿಸುತ್ತಿವೆ.

ಧನುಶ್ ಮತ್ತು ಶೃತಿ ನಟಿಸಿರುವ, ರಜನಿ ಮಗಳು ಮತ್ತು ಧನುಶ್‌ನ ಪತ್ನಿಯೂ ಆದ ಐಶ್ವರ್ಯ ನಿರ್ದೇಶಿಸಿರುವ '3' ಸಿನಿಮಾ ಇತ್ತೀಚೆಗೆ



ಬಿಡುಗಡೆಗೊಂಡು ವಿಮರ್ಶಕರಿಂದ 'ಸುಮಾರಾಗಿದೆ' ಎನಿಸಿಕೊಂಡಿದೆ. ಕೆಲ ತಿಂಗಳ ಹಿಂದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಗದ್ದಲ ಮಾಡಿದ್ದ 'ವೈ ದಿಸ್ ಕೊಲವೇರಿ ಡಿ' ಎಂಬ ಈ ಚಿತ್ರದ ಹಾಡು ಕೂಡ ಈ ಸಿನಿಮಾವನ್ನು ಬಾಕ್ಸ್ ಆಫೀಸಿನಲ್ಲಿ ಗೆಲ್ಲಿಸುವಲ್ಲಿ ಸೋತಿದೆ.

ಈ ಮಧ್ಯೆಯೇ, '3' ಸಿನಿಮಾದ ಚಿತ್ರೀಕರಣದ ಸಂದರ್ಭದಲ್ಲೇ ಧನುಶ್ ಮತ್ತು ಶೃತಿ ಹಾಸನ್ ನಡುವೆ ಪ್ರೇಮಾಂಕುರವಾಗಿದೆ ಎಂದೂ, ಸದ್ಯದಲ್ಲೇ ಐಶ್ವರ್ಯಳಿಗೆ ಸೋಡಾ ಚೀಟಿ ನೀಡಲಿದ್ದಾನೆಂದೂ ತಮಿಳು ಚಿತ್ರರಂಗದಲ್ಲಿ ಗುಲ್ಲೆದ್ದಿದೆ. ಇಂತಹ ಗಾಳಿಸುದ್ದಿಗೆ ಪುಷ್ಟಿ ಕೊಡುವಂತೆ "ಇತ್ತೀಚೆಗೆ '3' ಸಿನಿಮಾ ಕುರಿತಂತೆ ರೇಡಿಯೋ ಚಾನೆಲ್ ಒಂದರಲ್ಲಿ ಧನುಶ್, ಶೃತಿ ಮತ್ತು ಸಂಗೀತ ನಿರ್ದೇಶಕ ಅನಿರುದ್ಧ್ ಸಂದರ್ಶನ ಕೊಡುತ್ತಿದ್ದರಂತೆ. ಆದರೆ ಯಾವಾಗ ಐಶ್ವರ್ಯ ಕೂಡ ಆ ರೇಡಿಯೋ ಸ್ಟೇಷನ್ನಿಗೆ ಆಗಮಿಸಿದಳೋ ಆಗ ಧನುಶ್ ಇದ್ದಕ್ಕಿದ್ದಂತೆ 'ನನಗೆ ತಲೆನೋವು' ಎಂದು ನೆಪ ಕೊಟ್ಟು ಅಲ್ಲಿಂದ ಹೋದನಂತೆ" ಎಂದೂ ಕೆಲವರು ಹೇಳುತ್ತಿದ್ದಾರೆ. ಮಾತ್ರವಲ್ಲ, '3' ಸಿನಿಮಾದ ಪ್ರೀಮಿಯರ್ ಶೋಗೆ ಧನುಶ್ ಮತ್ತು ಶೃತಿ ಒಟ್ಟಿಗೆ ಆಗಮಿಸಿದ್ದು, ಐಶ್ವರ್ಯ ಏಕಾಂಗಿಯಾಗಿ ತಡವಾಗಿ ಬಂದದ್ದು, ಛಾಯಾಗ್ರಾಹಕರು ಫೋಟೊ ತೆಗೆಯುವಾಗ ಅವರಿಬ್ಬರು ವಿರುದ್ಧ ದಿಕ್ಕುಗಳಿಗೆ ಮುಖಮಾಡಿ ನಿಂತದ್ದು... ಇದೆಲ್ಲಕ್ಕೂ ಧನುಶ್-ಶೃತಿ ನಡುವಿನ ಸಂಬಂಧವೇ ಕಾರಣ ಎಂದು ಕೆಲವರು ತರ್ಕಿಸುತ್ತಿದ್ದಾರೆ.


ಈ ಹಿಂದೆಯೂ ಧನುಶ್ ಮತ್ತು ಐಶ್ವರ್ಯ ಅವರ ದಾಂಪತ್ಯ ಜೀವನದಲ್ಲಿ ಬಿರುಕು ಮೂಡಿತ್ತು, ಆಗ ಅವರಿಬ್ಬರೂ ಕೆಲಕಾಲ ಪರಸ್ಪರರನ್ನು ತೊರೆದಿದ್ದರು. ಆದರೆ ಹಿರಿಯರ ಮಧ್ಯಪ್ರವೇಶದಿಂದಾಗಿ ಅವರಿಬ್ಬರು ಮತ್ತೆ ಒಂದಾಗಿದ್ದರು.

ಈಗ ಧನುಶ್ ತನ್ನೊಂದಿಗೆ ಎಲ್ಲ ಕಡೆ ಶೃತಿಯನ್ನು ಕರೆದುಕೊಂಡು ಸುತ್ತುತ್ತಿರುವುದನ್ನು ಕಂಡು, ಅವರಿಬ್ಬರ ನಡುವಿನ ಸಂಬಂಧದ ಬಗೆಗಿನ ರೂಮರ್‌ಗಳನ್ನು ಕೇಳಿ ಸಹಜವಾಗಿಯೇ ರಜನೀಕಾಂತ್ ಅವರು ತಮ್ಮ ಮಗಳ ಭವಿಷ್ಯದ ಬಗ್ಗೆ ತುಂಬಾ ಆತಂಕಗೊಂಡಿದ್ದಾರಂತೆ. ಇತ್ತೀಚೆಗೆ ಧನುಶ್‌ನ ತಂದೆ ಕಸ್ತೂರಿ ರಾಜ ಅವರನ್ನು ತಮ್ಮ ಮನೆಗೆ ಕರೆಸಿಕೊಂಡ ರಜನಿ ಮತ್ತು ಪತ್ನಿ ಲತಾ ಅವರು "ನಿಮ್ಮ ಮಗನಿಗೆ ಬುದ್ಧಿ ಹೇಳಿ ಅವನು ಸರಿದಾರಿಗೆ ಬರುವಂತೆ ಮಾಡಿ. ಇಲ್ಲದಿದ್ದರೆ ನಾವೇ ಆತನನ್ನು ಒಂದು ಕೈ ನೋಡಿಕೊಳ್ಳಬೇಕಾಗುತ್ತದೆ" ಎಂದು ಎಚ್ಚರಿಸಿದ್ದಾರಂತೆ.

ತಾನು ಧನುಶ್ ಮತ್ತು ಐಶ್ವರ್ಯಳ ದಾಂಪತ್ಯದಲ್ಲಿ ಅಡ್ಡಿ ಬಂದಿದ್ದೇನೆ ಎಂಬ ಸುದ್ದಿಯನ್ನು ನಿರಾಕರಿಸಿರುವ ಶೃತಿ "ಧನುಶ್ ಮತ್ತು ನಾನು ಸ್ನೇಹಿತರಷ್ಟೇ. ಐಶ್ವರ್ಯ ನನ್ನ ಆಪ್ತ ಗೆಳತಿ. ನಮ್ಮಿಬ್ಬರ ಸ್ನೇಹವನ್ನು ಕೆಡಿಸುವಂತಹದ್ದನ್ನು ನಾನೆಂದೂ ಮಾಡುವುದಿಲ್ಲ" ಎಂದಿದ್ದಾಳೆ. ಆದರೆ ಧನುಶ್ ಮಾತ್ರ ಇದರ ಬಗ್ಗೆ ಇಲ್ಲಿಯತನಕ ಚಕಾರವೆತ್ತಿಲ್ಲ...

ಸೂಪರ್ ಸ್ಟಾರ್ ರಜನಿಗೆ ಇದು ಕಷ್ಟದ ದಿನಗಳು. ಕಳೆದ ಏಪ್ರಿಲ್ ತಿಂಗಳಲ್ಲಿ ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದ ಅವರು ಸಿಂಗಾಪೂರಿಗೆ ಹೋಗಿ ಶಸ್ತ್ರಚಿಕಿತ್ಸೆ ಪಡೆಯಬೇಕಾಗಿತ್ತು, ಅದರಿಂದ ಅದು ಹೇಗೋ ಚೇತರಿಸಿಕೊಂಡ ಅವರು ಈಗ ಹಿರಿಯ ಮಗಳು ನಿರ್ದೇಶಿಸಿರುವ '3' ಚಿತ್ರವನ್ನು ಮತ್ತು ಕಿರಿಯ ಮಗಳು ಸೌಂದರ್ಯ ನಿರ್ದೇಶಿಸುತ್ತಿರುವ ಸಿನಿಮಾದಲ್ಲಿ ತಾವೇ ನಟಿಸುತ್ತಿರುವುದನ್ನು ಆನಂದಿಸಬೇಕಾದ ದಿನಗಳಿವು. ಅಂತಹ ಸಂದರ್ಭದಲ್ಲೇ ಧನುಶ್ ಇಂತಹ ರಾದ್ಧಾಂತವೆಬ್ಬಿಸಿರುವುದು ಅವರಿಗೆ ನುಂಗಲಾರದ ತುತ್ತಾಗಿದ್ದರೆ ಏನಾಶ್ಚರ್ಯ?

ಟೈಟಾನಿಕ್ ನಿರ್ದೇಶಕನ ವೃತ್ತಿಪರತೆ





ಅದು 1997. ಆಗಷ್ಟೇ 'ಟೈಟಾನಿಕ್' ಸಿನಿಮಾ ಬಿಡುಗಡೆಯಾಗಿತ್ತು. ಚಿತ್ರವನ್ನು ನೋಡಿದ ಪ್ರತಿಯೊಬ್ಬರೂ ಪುಳಕಗೊಂಡಿದ್ದರು. ಅವರ ನಿರ್ದೇಶಕ ಜೇಮ್ಸ್ ಕ್ಯಾಮರಾನ್‌ರನ್ನು ಇಡೀ ಪ್ರಪಂಚವೇ ಕೊಂಡಾಡುತ್ತಿತ್ತು. ಆದರೆ ಒಬ್ಬೇ ಒಬ್ಬ ಪ್ರೇಕ್ಷಕ 'ಇಷ್ಟೊಂದು ಪರ್ಫೆಕ್ಷನಿಸ್ಟ್ ಆಗಿರುವ ನೀವು ಒಂದು ತಪ್ಪು ಮಾಡಿದ್ದೀರಿ' ಎಂದು ಸಿನಿಮಾದ ದೃಶ್ಯವೊಂದರ ಬಗ್ಗೆ ತಗಾದೆ ತೆಗೆದ. ಅದೇನೆಂದರೆ, ಟೈಟಾನಿಕ್ ಹಡಗು ಮುಳುಗಿದಾಗ ನಾಯಕ ಕ್ಯಾಪ್ರಿಯೋ ನಾಯಕಿ ವಿನ್ಸ್‌ಲೆಟ್‌ಳನ್ನು ಪ್ರಾಣಾಪಾಯದಿಂದ ಪಾರು ಮಾಡಿ ಮುಳುಗುತ್ತಾನೆ. ಆಕೆ ತೇಲುವ ಹಲಗೆಯೊಂದರ ಮೇಲೆ ಕುಳಿತು ಆಕಾಶದತ್ತ ಮುಖ ಮಾಡುತ್ತಾಳೆ. ಈ ದೃಶ್ಯ ಕ್ಷಣಮಾತ್ರದಲ್ಲಿ ಸಾಗಿಹೋಗುತ್ತದೆ.

ಆ ಪ್ರೇಕ್ಷಕ ಮಹಾನುಭಾವ ಬೊಟ್ಟುಮಾಡಿ ತೋರಿಸಿದ್ದು ಇದೇ ದೃಶ್ಯವನ್ನು. 'ಆ ದೃಶ್ಯದಲ್ಲಿ ನಕ್ಷತ್ರಗಳು ಪಲ್ಲಟಗೊಂಡಿವೆ. ವಾಸ್ತವವಾಗಿ ಆ ಕೋನದಿಂದ ನೀವು ತೋರಿಸಿದ ನಕ್ಷತ್ರಗಳು ಈ ಆಕಾರಗಳಲ್ಲಿ ಕಾಣುವುದಿಲ್ಲ' ಎಂದುಬಿಟ್ಟಿದ್ದ. ಬೇರೆ ಯಾರೇ ನಿರ್ದೇಶಕರಾಗಿದ್ದರೂ 'ಅಯ್ಯೋ ಹೋಗಯ್ಯ. ಇಡೀ ಪ್ರಪಂಚವೇ ನನ್ನ ಚಿತ್ರವನ್ನು ಕೊಂಡಾಡುತ್ತಿದೆ. ಮೊಸರಲ್ಲಿ ಕಲ್ಲು ಹುಡುಕಿದ್ದೀಯಲ್ಲಾ.' ಎಂದು ನಿರ್ಲಕ್ಷಿಸಿಬಿಡುತ್ತಿದ್ದರೇನೋ. ಆದರೆ ನಿರ್ದೇಶಕ ಜೇಮ್ಸ್ ಕ್ಯಾಮರಾನ್ ಯಾವ ಪ್ರತಿಷ್ಠೆಯನ್ನೂ ತೋರದೆ, ಆ ಪ್ರೇಕ್ಷಕನಿಗೆ 'ನನ್ನ ತಪ್ಪನ್ನು ಸರಿಪಡಿಸಿಕೊಳ್ಳುತ್ತೇನೆ. ದಯಮಾಡಿ ನೀನು ಸೂಚಿಸಿರುವ ಬದಲಾವಣೆಯನ್ನು ನಕ್ಷೆಯ ಸಮೇತ ಕಳುಹಿಸಿಕೊಡು' ಎಂದು ವಿನಂತಿಸಿದರು. ಅದರಂತೆ ನಕ್ಷತ್ರಗಳ ಸ್ಥಾನವನ್ನು ಬದಲಿಸಿ ಮತ್ತೆ ಸಿನಿಮಾದಲ್ಲಿ ಸೇರಿಸಲಾಯಿತು.

ಇದು ಪರಿಪೂರ್ಣ ನಿರ್ದೇಶಕನೊಬ್ಬನ ಕಸುಬುದಾರಿಕೆ. ಅರೆಬರೆ ಕಸುಬು ಕಲಿತ ನಮ್ಮ ಎಷ್ಟೋ ನಿರ್ದೇಶಕರು ಸಿನಿಮಾದಲ್ಲಿ ಕಂಟಿನ್ಯೂಟಿಯನ್ನೇ ಮರೆಯುತ್ತಾರೆ. ಅಂಥವರ ಮಧ್ಯೆ ಜೇಮ್ಸ್ ಕ್ಯಾಮರಾನ್ ಒಬ್ಬ ಮಾದರಿ ನಿರ್ದೇಶಕರಂತೆ ಕಾಣುತ್ತಾರೆ.

ಅಂದಹಾಗೆ ಒಂದೂವರೆ ದಶಕಗಳ ಮುನ್ನ ಬಿಡುಗಡೆಗೊಂಡು, ಇಡೀ ವಿಶ್ವದ ಸಿನಿಮಾ ಪ್ರೇಕ್ಷಕರನ್ನು ಬೆರಗುಗೊಳಿಸಿದ್ದ ಟೈಟಾನಿಕ್ ಚಿತ್ರ ಈಗ ತ್ರೀಡಿ ರೂಪದಲ್ಲಿ ಮತ್ತೊಮ್ಮೆ ಬಿಡುಗಡೆಯಾಗಿದೆ.

❖ ಅರುಣ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com